ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 22 ಗುರುವಾರ 2024

ಸಂಪುಟ: 45 | ಸಂಚಿಕೆ: 127 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಬೆಳಗ್ಗೆ ಕಾಡಿನಿಂದ ನಾಡಿಗೆ ಸಾಂಪ್ರದಾಯಿಕ ಬೀಳ್ಕೊಡುಗೆ

ಸಂಜೆ ವೇಳೆಗೆ ಮೈಸೂರು ತಲುಪಿದ ದಸರಾ ರೂವಾರಿಗಳು



- ಅರಣ್ಯಭವನ ಆವರಣದಲ್ಲಿ ಬೀಡು ಬಿಟ್ಟಿರುವ ಅಭಿಮನ್ಯು ನೇತೃತ್ವದ ಗಜಪಡೆ
- ಜಾನಪದ ಕಲಾ ತಂಡಗಳ ಮೆರಗು
- ಗಮನ ಸೆಳೆದ ಸಾಂಸ್ಕೃತಿಕ ಕಾರ್ಯಕ್ರಮ

ಹುಣಸೂರು, ಆ.21(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುವ ಗಜಪಡೆಯ ಮೊದಲ ತಂಡದ 9 ಆನೆಗಳಿಗೆ ಹುಣಸೂರು ತಾಲೂಕಿನ ವೀರನಹೊಸಳ್ಳಿ ಬಳಿ ಬುಧವಾರ ಬೆಳಗ್ಗೆ ಜಿಲ್ಲಾಡಳಿತದ ವತಿಯಿಂದ ಸಾಂಪ್ರದಾಯಿಕವಾಗಿ ಬೀಳ್ಕೊಡುಗೆ ನೀಡಲಾಯಿತು. ಎಲ್ಲಾ ಆನೆಗಳು ಲಾರಿಗಳಲ್ಲಿ ಮೈಸೂರಲ್ಲಿ ಅರಣ್ಯ ಭವನಕ್ಕೆ ಸಂಜೆ ವೇಳೆಗೆ ತಲುಪಿವೆ. ಅರಣ್ಯ ಭವನದ ಆವರಣದಲ್ಲಿ ಅಭಿಮನ್ಯು ನೇತೃತ್ವದ ಗಜಪಡೆ ಈಗ ವಿಶ್ರಾಂತಿ ಪಡೆಯುತ್ತಿದೆ.

ಅಂಬಾರಿ ಆನೆ ಅಭಿಮನ್ಯು ನೇತೃತ್ವದ ಮೊದಲ ತಂಡದಲ್ಲಿ ಭೀಮ, ಗೋಪಿ, ಧನಂಜಯ, ಕಂಜನ್, ರೋಹಿತ್, ಲಕ್ಷ್ಮಿ, ವರಲಕ್ಷ್ಮಿ, ಏಕಲವ್ಯ ಆನೆಗಳು ಸ್ಥಾನ ಪಡೆದಿದ್ದು, 68 ವರ್ಷದ ವರಲಕ್ಷ್ಮಿ ಈ ತಂಡದ ಹಿರಿಯ ಸದಸ್ಯೆಯಾದರೆ, 22 ವರ್ಷದ ರೋಹಿತ್ ಅತ್ಯಂತ ಕಿರಿಯವನಾಗಿದ್ದಾನೆ. ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಪ್ರವೇಶ ದ್ವಾರ ಹುಣಸೂರು ತಾಲೂಕಿನ ವೀರನಹೊಸಳ್ಳಿ ಗೇಟ್ ಬಳಿ ಬುಧವಾರ ಬೆಳಗ್ಗೆ ಜಿಲ್ಲಾಡಳಿತ, ಅರಣ್ಯ ಇಲಾಖೆ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ವರ್ಣರಂಜಿತ ಕಾರ್ಯಕ್ರಮದಲ್ಲಿ ಅಂಬಾರಿ ಆನೆ ಅಭಿಮನ್ಯು ನೇತೃತ್ವದ ಮೊದಲ ತಂಡದ 9 ಆನೆಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ, ಅರಣ್ಯ ಸಚಿವ ಈಶ್ವರ್ ಬಿ.ಖಂಡ್ರೆ, ಪಶು ಸಂಗೋಪನಾ ಸಚಿವ ■ 3ನೇ ಪುಟಕ್ಕೆ



ಬಿಚ್ಚು ನುಡಿ
ವಿಕ್ರಂ ಮುತ್ತಣ್ಣ

ಸ್ವಾತಂತ್ರ್ಯ ದಿನ ಸಾರ್ಥಕ ದಿನವಾಗಲಿ!
■ ಪುಟ–4

ಮೈಸೂರು ತಲುಪಿದ ದಸರಾ ಗಜಪಡೆ ಸಂಬಂಧ ಹೆಚ್ಚಿನ ವರದಿ ■ ಪುಟ–3, 11


ಸಿದ್ದರಾಮಯ್ಯ ವಿರುದ್ಧ ಲೋಕಾಯುಕ್ತದಲ್ಲಿ 61 ಪ್ರಕರಣ ದಾಖಲು

ಇನ್ನೂ 50 ತನಿಖೆಯಾಗಿಲ್ಲ

- ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಬಹಿರಂಗ
- ತನ್ನ ವಿರುದ್ಧ ಭ್ರಷ್ಟಾಚಾರ ಆರೋಪಕ್ಕೆ ಎದಿರೇಟು
- ನೂರು ಸಿದ್ದರಾಮಯ್ಯ ಬಂದರೂ ನನ್ನ ಬಂಧಿಸಲಾಗಲ್ಲ!
- ನನ್ನ ಬಳಿ ಲೋಡುಗಟ್ಟಲೆ ದಾಖಲೆಗಳಿವೆ
- ನನ್ನ ವಿರುದ್ಧದ ಆರೋಪದಲ್ಲಿ ಉಲ್ಲೇಖಿಸಿರುವ ಗಣಿಗಾರಿಕೆಗೆ ನಾನು ಅನುಮತಿಯನ್ನೇ ನೀಡಿಲ್ಲ

ಬೆಂಗಳೂರು, ಆ.21(ಕೆಎಂಶಿ)– ನೂರು ಸಿದ್ದರಾಮಯ್ಯ ಬಂದರೂ ನನ್ನನ್ನು ಸುಳ್ಳು ಆರೋಪಗಳ ಮೇಲೆ ಬಂಧಿಸಲು ಸಾಧ್ಯವಿಲ್ಲ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಇಂದಿಲ್ಲಿ ಗುಡುಗಿದ್ದಾರೆ.

ಮುಖ್ಯಮಂತ್ರಿ ಅವರು ನನ್ನ ಬಗ್ಗೆ ಕತ್ತಲೆಯಲ್ಲಿ ಕಡತಗಳನ್ನು ಹುಡುಕುವುದನ್ನು ಬಿಟ್ಟು, ತಮ್ಮ ತಟ್ಟೆಯಲ್ಲಿ ಬಿದ್ದಿರುವ ಭ್ರಷ್ಟಾಚಾರ ಆರೋಪಗಳಿಂದ ಮೊದಲು ಹೊರಬರಲಿ ಎಂದು ಕಿಡಿಕಾರಿದರು. ನಾನು ಕೇಂದ್ರ ಸಚಿವನಾಗಿದ್ದೇನೆ ಎಂಬ ಹೊಟ್ಟೆಕಿಚ್ಚಿಗೆ ರಾಜ್ಯ ಕಾಂಗ್ರೆಸ್ ಸರ್ಕಾರ ನನ್ನ ಮೇಲೆ ಹಗೆ ಸಾಧಿಸುತ್ತಿದೆ. ಯಾವತ್ತೋ ಸತ್ತು ಹೋದ ಪ್ರಕರಣವನ್ನು, ನನ್ನ ಸಹಿ ಇಲ್ಲದ ಪ್ರಕರಣವನ್ನು ಇಟ್ಟುಕೊಂಡು ನನ್ನ ಮೇಲೆ ಪ್ರಯೋಗ ಮಾಡುತ್ತಿದೆ ಎಂದು



ಆರೋಪಿಸಿದರು. ಸಾಯಿ ವೆಂಕಟೇಶ್ವರ ಕಂಪನಿಗೆ ನಾನು ಸೂಜಿ ಮೊನೆಯಷ್ಟು ಜಾಗವನ್ನೂ ನೀಡಿಲ್ಲ. ಅವರು ಗಣಿಗಾರಿಕೆಯನ್ನೂ ಮಾಡಿಲ್ಲ. ಕೇಂದ್ರ ಸರ್ಕಾರ ಅವರಿಗೆ ಅನುಮತಿಯನ್ನೇ ಕೊಟ್ಟಿಲ್ಲ, ರಾಜ್ಯದ ಬೊಕ್ಕಸಕ್ಕೆ ನಯಾಪೈಸೆ ನಷ್ಟವೂ ಆಗಿಲ್ಲ. ವಿಷಯ ಹೀಗಿದ್ದ ಮೇಲೆ ಎಸ್‌ಐಟಿ ರಾಜ್ಯಪಾಲರಿಂದ ಪ್ರಾಸಿಕ್ಯೂಶನ್‌ಗೆ ಹೇಗೆ ಅನುಮತಿ ಕೋರುತ್ತದೆ ಎಂದು ಪ್ರಶ್ನಿಸಿದರು.

ರಾಜ್ಯ ಸರ್ಕಾರ ನನ್ನ ವಿರುದ್ಧ ಹೂಡಿರುವ ಷಡ್ಯಂತ್ರಕ್ಕೆ ಹೆದರಿ ಓಡುವ ಜಾಯಮಾನ ನನ್ನದಲ್ಲ. ■ 5ನೇ ಪುಟಕ್ಕೆ

ಕುಮಾರಸ್ವಾಮಿ ಬಂಧನಕ್ಕೆ ಒಬ್ಬ ಪೊಲೀಸ್ ಕಾನ್‌ಸ್ಟೇಬಲ್ ಸಾಕು

ನೂರು ಸಿದ್ದರಾಮಯ್ಯ ಬಂದರೂ ನನ್ನ ಅರೆಸ್ಟ್ ಮಾಡೋಕಾಗಲ್ಲ ಎಂದ ಕುಮಾರಸ್ವಾಮಿಗೆ ಸಿಎಂ ಸಿದ್ದರಾಮಯ್ಯ ತಿರುಗೇಟು

ಆಲಮಟ್ಟಿ, ಆ.21– ಹೆಚ್.ಡಿ.ಕುಮಾರಸ್ವಾಮಿಯನ್ನು ಬಂಧಿಸೋಕೆ ನೂರು ಸಿದ್ದರಾಮಯ್ಯ ಬೇಕಾಗಿಲ್ಲ. ಒಬ್ಬ ಪೊಲೀಸ್ ಪೇದೆ ಸಾಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿರುಗೇಟು ನೀಡಿದರು.



ಅವರು ಬುಧವಾರ ಆಲಮಟ್ಟಿ ಜಲಾಶಯದ ಬಳಿ ಕೃಷ್ಣೆಯ ಜಲಧಿಗೆ ಗಂಗಾ ಪೂಜೆ ನೆರವೇರಿಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ನೂರು ಸಿದ್ದರಾಮಯ್ಯ ಬಂದರೂ ನನ್ನ ಅರೆಸ್ಟ್ ಮಾಡೋಕೆ ಆಗಲ್ಲ ಎಂದ ಕುಮಾರಸ್ವಾಮಿಯವರ ಮಾತಿನ ಬಗ್ಗೆ ಪತ್ರಕರ್ತರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಅವರನ್ನು ಬಂಧಿಸೋಕೆ ನಾನು ಬೇಡ. ಒಬ್ಬ ಪೊಲೀಸ್ ಪೇದೆ ಸಾಕು ಎಂದು ತಿರುಗೇಟು ನೀಡಿದರು. ಯಾರನ್ನಾದರೂ ಬಂಧಿಸುವುದು ಪೊಲೀಸ್ ಇಲಾಖೆಯವರೇ ಹೊರತು ನಾನಲ್ಲ. ಕುಮಾರಸ್ವಾಮಿ ಅವರು ಹೆದರಿರುವ ■ 5ನೇ ಪುಟಕ್ಕೆ

ಅರಣ್ಯದಿಂದ ಅರಣ್ಯ ಭವನಕ್ಕೆ ಬಂದ ಅಭಿಮನ್ಯು...




ಮೈಸೂರು ಅರಣ್ಯ ಭವನದಲ್ಲಿ ಲ್ಯಾಂಡ್ ಆದ ಅಂಬಾರಿ ಆನೆ ಅಭಿಮನ್ಯು

ಮುಡಾದಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರದ ಮತ್ತೊಂದು ಮಜಲು

ಪ್ರೋತ್ಸಾಹದಾಯಕ ಯೋಜನೆಯಡಿ ಬರೋಬ್ಬರಿ 64 ನಿವೇಶನ ಮಂಜೂರು

ಜಿಪಿಎ ಪ್ರತಿನಿಧಿಗಳಿಗೆ ಕ್ಲಿಯರ್ ಟೈಟಲ್ ಡೀಡ್ ನೀಡಿದ ಮುಡಾ ಅಧಿಕಾರಿಗಳು




ಎಸ್.ಟಿ.ರವಿಕುಮಾರ್

ಮೈಸೂರು, ಆ. 21– ಭೂ ಸ್ವಾಧೀನ ಪ್ರಕ್ರಿಯೆಗೊಳಪಡಿಸದೇ ಹಾಗೂ ಪರಿಹಾರದ ಹಣ ಪಾವತಿಸದೇ ವಸತಿ ಬಡಾವಣೆ ನಿರ್ಮಾಣಕ್ಕಾಗಿ ಬಳಸಿಕೊಂಡ ಭೂಮಿಗೆ ಪರಿಹಾರವಾಗಿ ಶೇ. 50:50ರ ಅನುಪಾತ, ಪ್ರೋತ್ಸಾಹದಾಯಕ ಯೋಜನೆಯಡಿ ಅಭಿವೃದ್ಧಿ ಹೊಂದಿದ ಪ್ರತಿಷ್ಠಿತ ಬಡಾವಣೆಗಳಲ್ಲಿ ಬೆಲೆ ಬಾಳುವ ನಿವೇಶನಗಳನ್ನು ಮಂಜೂರು ಮಾಡಿ ಬ್ರಹ್ಮಾಂಡ ಭ್ರಷ್ಟಾಚಾರವೆಸಗಿರುವ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಅಧಿಕಾರಿಗಳು, ಜಿಪಿಎ ಪ್ರತಿನಿಧಿಗಳಿಗೂ ನಿಯಮಬಾಹಿರವಾಗಿ ಕ್ಲಿಯರ್ ಟೈಟಲ್ ಡೀಡ್ ನೋಂದಣಿ ಮಾಡಿಕೊಟ್ಟಿರುವ ಹಲವು ಪ್ರಕರಣಗಳು ಬೆಳಕಿಗೆ ಬಂದಿವೆ.

ಒಂದೇ ದಿನ ಭೂ ಮಾಲೀಕನ ವಾರಸುದಾರರೆನ್ನಲಾದ ಐವರಿಗೆ ಮೈಸೂರಿನ ಕುವೆಂಪುನಗರ, ದಟ್ಟಗಳ್ಳಿ, ವಿಜಯನಗರ 4ನೇ ಹಂತ ಬಡಾವಣೆಗಳಲ್ಲಿ ವಿವಿಧ ಅಳತೆಯ ಬರೋಬ್ಬರಿ ಒಟ್ಟು 64 ನಿವೇಶನಗಳನ್ನು ಮುಡಾ ಆಯುಕ್ತರು ಮಂಜೂರು ಮಾಡಿ 20 ದಿನದಲ್ಲೇ ಎಲ್ಲಾ ನಿವೇಶನಗಳಿಗೂ ಮಂಜೂರಾತಿ ಪತ್ರ ನೀಡಿದ್ದಾರೆ.

ಸ್ವಾಧೀನಪಡಿಸಿಕೊಳ್ಳದೇ ಭೂಮಿ ಬಳಕೆ!: ಮೈಸೂರಿನ ಲಷ್ಕರ್ ಮೊಹಲ್ಲಾ, ವೀರನಗೆರೆ, ಶ್ರೀ ಆಂಜನೇಯ ಟೆಂಪಲ್ ರಸ್ತೆ ನಿವಾಸಿ ಲೇಟ್ ಮಹದೇವ ಅವರ ಮಕ್ಕಳಾದ ಎಂ. ರವಿಕುಮಾರ್, ಎಂ. ರಾಜು, ಎಂ. ಮಹೇಶ್, ಸುಜಾತ ಹಾಗೂ ಕುಮಾರಿ ಎಂಬುವರಿಗೆ ಸೇರಿದ ಮೈಸೂರು ತಾಲೂಕು ಕಸಬಾ ಹೋಬಳಿ, ಬೆಲವತ್ತ ಗ್ರಾಮದ ಸರ್ವೆ ನಂಬರ್ 77ರಲ್ಲಿನ 7.09 ಎಕರೆ ಪೈಕಿ 5.09 ಎಕರೆ ಜಮೀನನ್ನು ಈ ಹಿಂದೆ ಸಿಐಟಿಬಿಯು ಭೂ ಸ್ವಾಧೀನ ಪ್ರಕ್ರಿಯೆಗೊಳಪಡಿಸದೆ ಬಳಸಿಕೊಂಡಿದೆ ಎಂದು ಅಧಿಕಾರಿಗಳು ಸಮರ್ಥನೆ ನೀಡಿದ್ದಾರೆ.



ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಕ್ರ ಯ ಪ ತ್ರ

2023 ರ ಅಕ್ಟೋಬರ್ ಮಾಹೆಯ ಐದನೇ ದಿನಾಂಕದಂದು, ಇದರಲ್ಲಿ ಇನ್ನು ಮುಂದೆ ಮಾರಾಟಗಾರರೆಂದು ಕರೆಯಲಾಗುವ ಆಯುಕ್ತರು/ವಿಶೇಷ ತಹಸೀಲ್ದಾರ್, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಈ ಅಭಿವ್ಯಕ್ತಿಯು ಅದರ ಪದದಲ್ಲಿನ ಉತ್ತರಾಧಿಕಾರಿಗಳನ್ನು ಒಳಗೊಳ್ಳುತ್ತದೆ ಎಂದರ್ಥ) ಇವರು ಒಂದು ಕಡೆ ಮತ್ತು ಅನುಸೂಚಿತ ನಿವೇಶನವು ದಿನಾಂಕ:11.09.2023 ಅನುಸೂಚಿತ ನಿವೇಶನದ ಖರೀದಿದಾರರೆಂದು ಕರೆಯಲಾಗುವ ವಿಳಾಸ: ಮನೆ ನಂ:3461, ಆಂಜನೇಯ ಟೆಂಪಲ್ ರಸ್ತೆ, ವೀರನಗೆರೆ, ಲಷ್ಕರ್ ಮೊಹಲ್ಲಾ, ಮೈಸೂರು. ರಲ್ಲಿ ವಾಸಿಸುವ ಲೇ॥ಮಹದೇವ ರವರ ಮಕ್ಕಳು ಶ್ರೀ.ಎಂ.ರವಿಕುಮಾರ್ (ಆಧಾರ್ ಸಂಖ್ಯೆ:9409 2908 7580), ಶ್ರೀ.ಎಂ.ರಾಜು (ಆಧಾರ್ ಸಂಖ್ಯೆ:2070 7351 8146), ಶ್ರೀ.ಎಂ.ಮಹೇಶ (ಆಧಾರ್ ಸಂಖ್ಯೆ:4359 7623 8927), ಶ್ರೀಮತಿ.ಸುಜಾತ (ಆಧಾರ್ ಸಂಖ್ಯೆ:2519 2329 2393) ಮತ್ತು ಶ್ರೀಮತಿ.ಕುಮಾರಿ (ಆಧಾರ್ ಸಂಖ್ಯೆ:3970 2105 5408) ಈ ವ್ಯಕ್ತಿಗಳ ಜಿ.ಪಿ.ಎ. ಪ್ರತಿನಿಧಿಗಳಾದ ಶ್ರೀ.ಬಸವರಾಜು.ಎಂ ಬಿನ್ ಶ್ರೀ.ಮಹದೇವಪ್ಪ.ಕೆ (ಆಧಾರ್ ಸಂಖ್ಯೆ:9345 5999 6867) ಮತ್ತು ಶ್ರೀ.ಸತೀಶ್.ವಿ ಬಿನ್ ಶ್ರೀ.ಎಂ.ವೆಂಕಟಶೆಟ್ಟಿ (ಆಧಾರ್ ಸಂಖ್ಯೆ:3803 1373 1088) (ಅವನ, ಅವಳ ವಾರಸುದಾರರು, ನಿರ್ವಾಹಕರು, ಆಡಳಿತಗಾರರು ಮತ್ತು ಹಸ್ತಾಂತರಕಾರಕರನ್ನು ಒಳಗೊಳ್ಳುತ್ತದೆ ಎಂದರ್ಥ) ಇವರುಗಳು ಮತ್ತೊಂದು ಕಡೆ ಸಾಕ್ಷಿಯಾಗಿ ಉಪನೋಂದಣಾಧಿಕಾರಿಯವರ ಕಛೇರಿಯಲ್ಲಿ ಈ ಕ್ರಯಪತ್ರವನ್ನು ಮಾಡಿಕೊಂಡಿದ್ದಾರೆ.

Basavaraju
(ಜಿ.ಪಿ.ಎ. ದಾರರು)

ವಿಶೇಷ ತಹಸೀಲ್ದಾರರು
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ
ಮೈಸೂರು

ಮೈ.ನ.ಪ್ರಾ/ವಿ.ತ.–3/ಕ್ರಯ ಪತ್ರ/164/2023–24 ದಿ:05.10.2023

ಜಿಪಿಎ ಪ್ರತಿನಿಧಿಗಳಿಗೆ ಕ್ರಯಪತ್ರ ನೋಂದಣಿ.

ಭೂ ಮಾಲೀಕರಿಗಲ್ಲದೆ 50:50, ಪ್ರೋತ್ಸಾಹದಾಯಕ ನಿವೇಶನಗಳನ್ನು ಜಿಪಿಎ ಪ್ರತಿನಿಧಿಗಳಿಗೆ ನೀಡುವಂತಿಲ್ಲ

ಮೈಸೂರು, ಆ.21(ಆರ್‌ಕೆ)–ಶೇ.50:50ರಡಿ, ಪ್ರೋತ್ಸಾಹದಾಯಕ ಯೋಜನೆ ಹಾಗೂ ಬದಲಿ ನಿವೇಶನಗಳನ್ನು ಭೂಮಿ ಕಳೆದುಕೊಂಡ ಭೂ ಮಾಲೀಕ ಅಥವಾ ಅವರು ಮೃತಿಯಾಗಿದ್ದರೆ ಅವರ ಕಾನೂನಾತ್ಮಕವಾಗಿ ಅಧಿಕಾರ ಹೊಂದಿರುವ ವಾರಸುದಾರರಿಗೆ ಮಾತ್ರ ನೀಡಬೇಕೇ ಹೊರತು, ಜಿಪಿಎ ಪ್ರತಿನಿಧಿಯಾಗಲೀ ಅಥವಾ ಅವರಿಂದ ಭೂಮಿ ಖರೀದಿಸಿದವರಿಗಲ್ಲ ಎಂದು ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ –2009 ಸ್ಪಷ್ಟವಾಗಿ ಹೇಳುತ್ತದೆ.

ಅದೇ ರೀತಿ Karnataka Urban Development Authorities (Allotment of Sites in lieu of Compensation for Land Acquired) (Amendment) Rules, 2015ರಲ್ಲೂ ವಸತಿ ಬಡಾವಣೆಗೆ ಸ್ವಾಧೀನಪಡಿಸಿಕೊಂಡ ಭೂಮಿಗೆ ಅಥವಾ ಭೂ ಸ್ವಾಧೀನ ಪ್ರಕ್ರಿಯೆಗೊಳಪಡಿಸದೇ ಬಳಸಿಕೊಂಡ ಭೂಮಿಗೆ ಪರಿಹಾರವಾಗಿ ನಿವೇಶನ ಭೂ ಮಾಲೀಕರಿಗೇ ಮಂಜೂರು ಮಾಡಬೇಕೆಂದು ಹೇಳಲಾಗಿದೆ. ಭೂಮಿಗೆ ಬದಲಾಗಿ ಸಮಾನಾಂತರ ಬಡಾವಣೆಗಳಲ್ಲಿ ಅದರ ಮಾಲೀಕನಿಗೆ ಪರಿಹಾರದ ರೂಪದಲ್ಲಿ ಪ್ರೋತ್ಸಾಹದಾಯಕ, ಶೇ.50:50ರ ಅನುಪಾತದಡಿ ಅಥವಾ ಬದಲಿ ನಿವೇಶನಗಳನ್ನು ಮಂಜೂರು ಮಾಡಬೇಕೆಂದು ನಿಯಮವಿದ್ದರೂ, ಕಾನೂನನ್ನು ಗಾಳಿಗೆ ತೂರಿ ಅಧಿಕಾರಿಗಳು ಜಿಪಿಎ ಪ್ರತಿನಿಧಿಗಳಿಗೆ ಅಕ್ರಮವಾಗಿ ಹಂಚಿಕೆ ಮಾಡುವ ಮೂಲಕ ಹಣಕಾಸಿನ ಅವ್ಯವಹಾರ ಎಸಗಿ ವೈಯಕ್ತಿಕ ಲಾಭ ಪಡೆದುಕೊಂಡಿರುವುದು ಮುಡಾ ನಿವೇಶನ ಹಂಚಿಕೆ ಹಗರಣದ ಕೇಂದ್ರಬಿಂದುವಾಗಿರುವುದನ್ನು ಗಮನಿಸಬಹುದು.

5.09 ಎಕರೆಗೆ ಬದಲಾಗಿ 64 ನಿವೇಶನ: ಭೂ ಸ್ವಾಧೀನ ಮಾಡಿ ಪರಿಹಾರ ನೀಡದ ಕಾರಣ ವಾರಸುದಾರರಿಗೆ ಮುಡಾ ಆಯುಕ್ತರು 5.09 ಎಕರೆ ಬೆಲವತ್ತ ಭೂಮಿಗೆ ಬದಲಾಗಿ ಮೈಸೂರಿನ ವಿವಿಧ ಪ್ರತಿಷ್ಠಿತ ಬಡಾವಣೆಗಳಲ್ಲಿ ಅಭಿವೃದ್ಧಿಪಡಿಸಿದ ಬರೋಬ್ಬರಿ ಒಟ್ಟು 64 ನಿವೇಶನಗಳನ್ನು 2023ರ ಆಗಸ್ಟ್ 19ರಂದು ಒಂದೇ ದಿನ ಮಂಜೂರು ಮಾಡಿ ಅಧಿಕೃತ ಜ್ಞಾಪನಾ ಪತ್ರ (ಸಂಖ್ಯೆ ಎಲ್‌ಎಕ್ಯೂ (6)/ಸಿಆರ್ 49/2022–23) ಹೊರಡಿಸುತ್ತಾರೆ.

ವಾರದ ಮುಂಚೆಯೇ ಜಿಪಿಎ ನೋಂದಣಿ: ತಮಗೆ ನಿವೇಶನಗಳು ಮಂಜೂರಾಗುತ್ತವೆ ಎಂಬುದು ಖಾತರಿಯಾಗುತ್ತಿದ್ದಂತೆಯೇ ಎಂ. ರವಿಕುಮಾರ್, ಎಂ. ರಾಜು, ಎಂ. ಮಹದೇವ, ಸುಜಾತ ಮತ್ತು ಕುಮಾರಿ 8 ದಿನ ಮುಂಚಿತವಾಗಿ 2023ರ ಆಗಸ್ಟ್ 11ರಂದು 5.09 ಎಕರೆ ಜಮೀನಿಗೆ ಸಂಬಂಧಿಸಿದಂತೆ ಎಂ. ಬಸವರಾಜು ಮತ್ತು ವಿ. ಸತೀಶ ಎಂಬುವರಿಗೆ ಬರೆದು ಕೊಟ್ಟು ಮೈಸೂರು ಉತ್ತರ ಉಪನೋಂದಣಾಧಿಕಾರಿ ಕಚೇರಿಯಲ್ಲಿ ದಸ್ತಾವೇಜು ಸಂಖ್ಯೆ: ಎಂವೈಎನ್–4–00124–2023–24 ರೀತ್ಯಾ ಜಿಪಿಎ ■ 5ನೇ ಪುಟಕ್ಕೆ

ರಾಜ್ಯಪಾಲರ ವಿರುದ್ಧ ಅವಹೇಳನಕಾರಿ ಹೇಳಿಕೆ ಎಂಎಲ್‌ಸಿ ಐವಾನ್ ಡಿಸೋಜಾ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಡಿಸಿಪಿಗೆ ದೂರು



ಮೈಸೂರಿನ ನಗರ ಪೊಲೀಸ್ ಕಚೇರಿಯಲ್ಲಿ ಐವಾನ್ ಡಿಸೋಜ ವಿರುದ್ಧ ನಗರ ಜಿಲ್ಲಾ ಯುವ ಮೋರ್ಚಾ ಘಟಕವು ದೂರು ಸಲ್ಲಿಸಿತು.

ಮೈಸೂರು, ಆ.21(ಜಿಎ)–ರಾಜ್ಯಪಾಲರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿರುವ ವಿಧಾನಪರಿಷತ್ ಸದಸ್ಯ ಐವಾನ್ ಡಿಸೋಜ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಆಗ್ರಹಿಸಿ ಬಿಜೆಪಿ ಯುವ ಮೋರ್ಚಾ ಘಟಕವು ಡಿಸಿಪಿ ಜಾಹ್ನವಿ ಅವರಿಗೆ ದೂರು ಸಲ್ಲಿಸಿತು.

ಸಾಂವಿಧಾನಿಕ ಹುದ್ದೆಯಲ್ಲಿರುವ ರಾಜ್ಯಪಾಲರಾದ ಥಾವರ್‌ಚಂದ್ ಗೆಹ್ಲೋಟ್ ಅವರು, ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಮುಡಾ ಅಕ್ರಮಕ್ಕೆ ಸಂಬಂಧಿಸಿದಂತೆ ತನಿಖೆಗೆ ಅನುಮತಿ ನೀಡಿದ ಬೆನ್ನಲ್ಲೆ, ರಾಜಭವನದ ಮೇಲೆ ಬಾಂಗ್ಲಾ ಮಾದರಿ ದಾಳಿ ಮಾಡುವುದಾಗಿ ಪ್ರಚೋದನಾಕಾರಿ ಹೇಳಿಕೆ ನೀಡಿರುವ ಐವನ್ ಡಿಸೋಜಾ, ವಿಧಾನಪರಿಷತ್ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಅವರಿಗೆ ಶಿಕ್ಷೆಯಾಗುವಂತೆ ಮಾಡಬೇಕು ಆಗ್ರಹಿಸಿದರು.

ಈ ವೇಳೆ ಬಿಜೆಪಿ ಮೈಸೂರು ನಗರ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗಿರಿಧರ್, ನಗರ ಯುವ ಮೋರ್ಚಾ ಅಧ್ಯಕ್ಷ ರಾಕೇಶ್ ಗೌಡ, ರಾಜ್ಯ ಯೋಜನಾ ಹಾಗೂ ಸಂಶೋಧನೆಯ ಸಂಚಾಲಕರಾದ ಪ್ರಣಯ್, ನಗರ ಉಪಾಧ್ಯಕ್ಷ ಜೋಗಿ ಮಂಜು, ನಗರ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಡಿ.ಲೋಹಿತ್, ಉಪಾಧ್ಯಕ್ಷ ಮನು ಅಪ್ಪಿ, ಮಂಡಲ ಅಧ್ಯಕ್ಷ ಅರ್ಜುನ್, ನವೀನ್, ಪದಾಧಿಕಾರಗಳಾದ ಕಿರಣ್ ನಾಯ್ಡು ಶಂಕ್, ಲಿಖಿತ್, ಸಾಗರ್ ಚೇತನ್, ಮನೋಹರ್ ಮತ್ತಿತರರು ಇದ್ದರು.

ಪಶ್ಚಿಮ ಘಟ್ಟ ಉಳಿಸಲು ಆಗ್ರಹಿಸಿ 'ಪರಿಸರಕ್ಕಾಗಿ ನಾವು' ಸಂಘಟನೆಯಿಂದ ಮೈಸೂರಲ್ಲಿ ಧರಣಿ

ಮೈಸೂರು, ಆ.21(ಜಿಎ)–ಕೇರಳದ ವಯನಾಡಿನಲ್ಲಿ ನಡೆದ ಭೀಕರ ದುರಂತವನ್ನು ಗಮನದಲ್ಲಿಟ್ಟುಕೊಂಡು ರಾಜ್ಯ ಸರ್ಕಾರ ಪಶ್ಚಿಮ ಘಟ್ಟ ಉಳಿಸಲು ತುರ್ತು ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿ 'ಪರಿಸರಕ್ಕಾಗಿ ನಾವು' ಸಂಘಟನೆ ವತಿಯಿಂದ ಧರಣಿ ನಡೆಸಲಾಯಿತು.

ಮೈಸೂರಿನ ಗಾಂಧಿ ಚೌಕದ ಮುಂಭಾಗ ಜಮಾಯಿಸಿದ ಪರಿಸರ ಕಾರ್ಯಕರ್ತರು 'ಪ್ರಕೃತಿಯನ್ನು ಹಾಳು ಮಾಡುವುದೇ ವಿಕೃತಿ. ಪ್ರಕೃತಿಯನ್ನು ಪೊರೆಯುವುದು ನಮ್ಮ ಸಂಸ್ಕೃತಿ', 'ಉಳಿಸಿ ಉಳಿಸಿ ಪಶ್ಚಿಮ ಘಟ್ಟ ಉಳಿಸಿ', 'ಅಳಿದರೆ ಪಶ್ಚಿಮ ಘಟ್ಟಗಳ ಸಂಪತ್ತು ಕಾದಿದೆ ಸಕಲ ಜೀವಿಗಳಿಗೆ ಆಪತ್ತು', 'ಜೀವನ ನದಿಗಳ ಉಗಮ ಸ್ಥಾನ ಪಶ್ಚಿಮ ಘಟ್ಟ ಪಶ್ಚಿಮ ಘಟ್ಟ' ಎಂಬ ಪ್ಲೇಕಾರ್ಡ್‌ಗಳನ್ನು ಹಿಡಿದು ಘೋಷಣೆ ಕೂಗಿ ಪ್ರತಿಭಟನೆ ನಡೆಸಿದರು.

ಇತ್ತೀಚೆಗೆ ಕೇರಳದಲ್ಲಿ ಹಾಗೂ ನಮ್ಮ ರಾಜ್ಯದಲ್ಲಿ ಮಲೆನಾಡು, ಕರಾವಳಿ ಪ್ರದೇಶಗಳಲ್ಲಿ ಗುಡ್ಡಗಳು ಕುಸಿದು, ರಾತ್ರಿ ಬೆಳಗಾಗುವುದರೊಳಗೆ ಮಕ್ಕಳು, ತಾಯಂದಿರು ಸೇರಿದಂತೆ ನೂರಾರು ಜನರು ಪ್ರಾಣ ತೆತ್ತಿದ್ದಾರೆ. ಅಪಾರ ಪ್ರಮಾಣದ ಆಸ್ತಿ–ಪಾಸ್ತಿ ಕೊಚ್ಚಿ ಹೋಯಿತು. ಉತ್ತರ ಭಾರತದ ಹಿಮಾಚಲಪ್ರದೇಶ ಮತ್ತು ಉತ್ತರ ಖಂಡದಲ್ಲೂ ಹಲವು ಭೂ ಕುಸಿತಗಳಾಗಿವೆ. ಈ ಅನಾಹುತಗಳಿಗೆ ಪ್ರಕೃತಿ ಮೇಲೆ ಮಾನವನ ಅತಿಯಾದ ದಬ್ಬಾಳಿಕೆ ಕಾರಣವಾಗಿದೆ ಎಂದು ಧರಣಿನಿರತರು ದೂರಿದರು.

ಅರಣ್ಯ ಪ್ರದೇಶಗಳ ಒತ್ತುವರಿ, ಅಕ್ರಮ ಗಣಿಗಾರಿಕೆ, ರೆಸಾರ್ಟ್, ಹೋಂ ಸ್ಟೇ, ಅಕ್ರಮ ಹೋಟೆಲ್‌ಗಳ ನಿರ್ಮಾಣ, ರಸ್ತೆ ಅಗಲೀಕರಣಕ್ಕೆ ಮರಗಳ ಕಡಿತ, ನೀರಿನ ಸಹಜವಾದ ಹರಿಯುವಿಕೆಗೆ ತಡೆ ಸೇರಿದಂತೆ ಅನೇಕ ಕಾರಣಗಳಿಂದ ಮಣ್ಣಿನ ಸವಕಳಿಗೂ ಕಾರಣವಾಗುತ್ತಿದೆ. ಸರ್ಕಾರ ಪರಿಸರಕ್ಕೆ ಹಾನಿ ಉಂಟು ಮಾಡುವ ಇಂತಹ ಚಟುವಟಿಕೆಗಳನ್ನು ತಡೆಗಟ್ಟಲು ಯಾವುದೇ ಗಂಭೀರ ಪ್ರಯತ್ನಗಳನ್ನು ಮಾಡದೇ ದುರಂತ ಘಟಿಸಿದ ನಂತರ ಪರಿಹಾರ ನೀಡಿ ಕೈ ತೊಳೆದುಕೊಳ್ಳುತ್ತಿವೆ ಎಂದು ಬೇಸರ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಪರಿಸರ ಕಾರ್ಯಕರ್ತರಾದ ಮೇಜರ್ ಜನರಲ್ ಒಂಬತ್ಕೆರೆ, ಕಾಳೇಗೌಡ ನಾಗವಾರ, ಕಾಳಚೆನ್ನೇಗೌಡ, ಹೊರೆಯಾಲ ದೊರೆಸ್ವಾಮಿ, ಭಾನು ಮೋಹನ್, ಲೀಲಾ ಶಿವಕುಮಾರ್, ಪರಶುರಾಮೇಗೌಡ, ಭಾಗ್ಯ ಶಂಕರ್, ಗಂಟಯ್ಯ, ಸುಮಲತಾ, ಶೈಲಜೇಶ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ಗಾಂಧಿಚೌಕದ ಮುಂಭಾಗ ರಾಜ್ಯ ಸರ್ಕಾರ ಪಶ್ಚಿಮ ಘಟ್ಟ ಉಳಿಸಲು ತುರ್ತು ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿ 'ಪರಿಸರಕ್ಕಾಗಿ ನಾವು' ಸಂಘಟನೆ ವತಿಯಿಂದ ಧರಣಿ ನಡೆಸಲಾಯಿತು.

> "ಪಶ್ಚಿಮ ಘಟ್ಟ ಪ್ರದೇಶದ ಸೂಕ್ಷ್ಮತೆ ಮತ್ತು ಅದರ ಜಾಗತಿಕ ಮಹತ್ವವನ್ನು ಅರಿತು ಪ್ರೊ.ಮಾಧವ ಗಾಡ್ಗೀಳ್ ಸಮಿತಿ 2011ರಲ್ಲಿ ಸಲ್ಲಿಸಿದ ವರದಿಯಲ್ಲಿ ಹಾನಿ ಮಾಡುವಂತ ಯಾವುದೇ ಚಟುವಟಿಕೆಯನ್ನು ಕಟ್ಟುನಿಟ್ಟಾಗಿ ತಡೆಯಬೇಕೆಂದು ಶಿಫಾರಸು ಮಾಡಿದೆ. ಈ ವರದಿಯ ಪ್ರಕಾರ ಪ್ರಮುಖವಾಗಿ ಪಶ್ಚಿಮ ಘಟ್ಟ ಪ್ರಾಧಿಕಾರ ರಚಿಸಬೇಕು. ಸೂಕ್ಷ್ಮ ಪರಿಸರ ವಲಯಗಳನ್ನು ಘೋಷಿಸಿ, ಈ ವಲಯಗಳಲ್ಲಿ ಗಣಿಗಾರಿಕೆ, ಕಲ್ಲು ಗಣಿಗಾರಿಕೆ ಮತ್ತು ಮರಳು ಗಣಿಗಾರಿಕೆಯನ್ನು ನಿಷೇಧಿಸಬೇಕು ಹಾಗೂ ಕಟ್ಟಡ ನಿರ್ಮಾಣ, ಮೂಲಸೌಕರ್ಯ ನಿರ್ಮಾಣವನ್ನು ನಿರ್ಬಂಧಿಸಬೇಕು ಎಂಬ ಅಂಶ ಸೇರಿದಂತೆ ವಿವಿಧ ಅಂಶಗಳನ್ನು ಒಳಗೊಂಡಿದೆ. ಆದ್ದರಿಂದ ಈ ವರದಿಯನ್ನು ಜಾರಿಗೊಳಿಸಿ. **–ಪ್ರತಿಭಟನಾಕಾರರು**

ಆ.27, ಮೈಸೂರಲ್ಲಿ ಯುವೋತ್ಸವ

ಮೈಸೂರು, ಆ.21(ಜಿಎ)–ಅಂತಾರಾಷ್ಟ್ರೀಯ ಯುವ ದಿನ ಆಚರಣೆ ಅಂಗವಾಗಿ ಗ್ರಾಮ್ ಸಂಸ್ಥೆಯು ಮೈಸೂರು ವಿಶ್ವ ವಿದ್ಯಾನಿಲಯದ ಸಮಾಜ ಕಾರ್ಯ ಅಧ್ಯಯನ ವಿಭಾಗ ಹಾಗೂ ಜಿಎಸ್‌ಎಸ್ ಸಂಸ್ಥೆಗಳ ಸಹಯೋಗದಲ್ಲಿ ಆ.27ರಂದು ನಗರದಲ್ಲಿ ಯುವೋತ್ಸವ ಕಾರ್ಯಕ್ರಮ ಆಯೋಜಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಕಾರ್ಯ ನಿರ್ವಾಹಕ ನಿರ್ದೇಶಕ ಡಾ.ಬಸವರಾಜು ಆರ್. ಶ್ರೇಷ್ಠ ಈ ವಿಷಯ ತಿಳಿಸಿ, ಮೈಸೂರು ವಿವಿಯ ವಿಜ್ಞಾನ ಭವನದಲ್ಲಿ ಅಂದು ಬೆಳಗ್ಗೆ 11 ಗಂಟೆಗೆ ವಿವಿ ಕುಲಪತಿ ಎನ್.ಕೆ.ಲೋಕನಾಥ್ ಅವರ ಅಧ್ಯಕ್ಷತೆಯಲ್ಲಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಹೆಚ್‌ಎಸ್‌ಎಸ್ ಸಂಸ್ಥೆಯ ಜುದಿತ್ ವೈನ್ಬರ್ಗರ್ ಸಿಂಗ್ ಚಾಲನೆ ನೀಡಲಿದ್ದಾರೆ ಎಂದರು.

ಸಾಮಾಜಿಕ ನ್ಯಾಯ, ಶಿಕ್ಷಣ ಆರ್ಥಿಕ ಸಬಲೀಕರಣ, ಹವಾಮಾನ ಬದಲಾವಣೆ ಕುರಿತಂತೆ ಬೀದಿ ನಾಟಕ ಸ್ಪರ್ಧೆ, ಸುಸ್ಥಿರ ಮೈಸೂರಿಗಾಗಿ ಯುವ ಸಹಭಾಗಿತ್ವ ಕುರಿತ ಚರ್ಚೆ ನಡೆಯಲಿದೆ. ಪೋಸ್ಟರ್ ಪ್ರಸ್ತುತಿ ಸ್ಪರ್ಧೆ, ರಸಪ್ರಶ್ನೆ ಸ್ಪರ್ಧೆ, ರೀಲ್ ಸ್ಪರ್ಧೆ, ಯುವೋತ್ಸವ ಮೊದಲಾದವನ್ನು ಸಹಾ ಆಯೋಜಿಸಲಾಗಿದೆ. ಈ ವೇಳೆ ಶಾಸಕ ದರ್ಶನ್ ಧ್ರುವನಾರಾಯಣ್, ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್, ಜಿಎಸ್‌ಎಸ್ ಸಂಸ್ಥೆಯ ಶ್ರೀಹರಿ, ಡಾ.ಚಂದ್ರಮೌಳಿ ಇನ್ನಿತರರು ವೇದಿಕೆಯಲ್ಲಿರುವರು ಎಂದರು. ಸುದ್ದಿಗೋಷ್ಠಿಯಲ್ಲಿ ಶ್ರೀಹರಿ, ಭಗವಾನ್ ಬಿದರಕೋಟೆ, ಸಿಂಚನ ಎಂ.ಗೌಡ, ವಿಷ್ಣು ಉಪಸ್ಥಿತರಿದ್ದರು.

ಸುತ್ತೂರಲ್ಲಿ ಹೋಬಳಿ ಮಟ್ಟದ ಕ್ರೀಡಾಕೂಟ



ಸುತ್ತೂರಿನ ಜೆಎಸ್‌ಎಸ್ ಕ್ರೀಡಾಂಗಣದಲ್ಲಿ ನಡೆದ ಹೋಬಳಿ ಮಟ್ಟದ ವಿವಿಧ ಕ್ರೀಡಾಕೂಟದಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

ಸುತ್ತೂರು, ಆ. 21–ನಂಜನಗೂಡು ತಾಲೂಕು ಸುತ್ತೂರಿನ ಜೆಎಸ್‌ಎಸ್ ಕ್ರೀಡಾಂಗಣದಲ್ಲಿ ಹೋಬಳಿ ಮಟ್ಟದ ಕ್ರೀಡಾಕೂಟ ನಡೆಯಿತು.

ಕ್ರೀಡಾಕೂಟದಲ್ಲಿ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಮಹೇಶ್ ಮಾತನಾಡಿ, ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದಷ್ಟೆ ಕ್ರೀಡೆಯೂ ಮಹತ್ವದ್ದಾಗಿದೆ, ಈ ನಿಟ್ಟಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಕ್ರೀಡೆಗಳಲ್ಲಿ ಪಾಲ್ಗೊಂಡಿರುವುದು ಸಂತಸದ ವಿಚಾರವಾಗಿದೆ. ಕ್ರೀಡೆಯಲ್ಲಿ ಸೋಲು ಗೆಲುವು ಎಂಬುದು ಮುಖ್ಯವಲ್ಲ, ಸ್ಪರ್ಧಾ ಮನೋಭಾವದಿಂದ ಪಾಲ್ಗೊಳ್ಳುವುದು ಮುಖ್ಯವಾಗಿದೆ, ಇಂದು ಸೋತರೂ ಅದೇ ಗೆಲುವಿನ ಮೆಟ್ಟಿಲು ಎಂದು ತಿಳಿದು ವಿದ್ಯಾರ್ಥಿಗಳು ಸ್ಪರ್ಧಿಸಬೇಕು ಎಂದು ತಿಳಿಸಿದರಲ್ಲದೆ, ನಮ್ಮ ತಾಲೂಕಿನಲ್ಲಿ ಈ ತಿಂಗಳ 19ರಿಂದಲೇ ಕ್ರೀಡಾಕೂಟ ಆರಂಭಗೊಂಡಿದ್ದು, ಎಲ್ಲಾ ಶಾಲೆಗಳ ವಿದ್ಯಾರ್ಥಿಗಳೂ ಪಾಲ್ಗೊಂಡಿದ್ದಾರೆ ಎಂದು ತಿಳಿಸಿದರು.

ಕ್ರೀಡಾಕೂಟದಲ್ಲಿ ಸುತ್ತೂರಿನ ಜೆಎಸ್‌ಎಸ್ ಪ್ರಾಥಮಿಕ ಶಾಲೆಯ ಬಾಲಕರ ಕಬಡ್ಡಿ ತಂಡವು ಪ್ರಥಮ ಸ್ಥಾನ ಪಡೆದು ಪ್ರಶಸ್ತಿ ತನ್ನದಾಗಿಸಿಕೊಂಡಿತು. ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಮಹೇಶ್ ಕ್ರೀಡೆಗಳಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನ ವಿತರಿಸಿದರು. ಹೋಬಳಿ ಮಟ್ಟದ ಕ್ರೀಡಾ ಕೂಟದ ಸಂಚಾಲಕ ಬಸವನಾಯಕ, ಕ್ರೀಡಾ ಉಸ್ತುವಾರಿ ಅಜೀಜ್‌ಖಾನ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಗಿರೀಶ್, ಸುತ್ತೂರು ಶಾಲೆ ಮುಖ್ಯಶಿಕ್ಷಕ ನಾಗರಾಜು, ಜೆಎಸ್‌ಎಸ್ ಶಾಲೆಯ ಮುಖ್ಯ ಶಿಕ್ಷಕ ಷಡಕ್ಷರಿ ಸೇರಿದಂತೆ ವಿವಿಧ ಶಾಲೆಯ ವಿದ್ಯಾರ್ಥಿಗಳು, ಎಸ್‌ಡಿಎಂಸಿ ಅಧ್ಯಕ್ಷರು, ಸದಸ್ಯರು, ಕ್ರೀಡಾಕೂಟದಲ್ಲಿ ಭಾಗವಹಿಸಿದ್ದರು.

ಸಾಮೂಹಿಕ ಋಗ್ವೇದ ಉಪಾಕರ್ಮ ಕಾರ್ಯಕ್ರಮ...



ಮೈಸೂರಿನ ಶಾರದಾನಿಕೇತನದಲ್ಲಿ ಮುಗೂರು ಕರ್ನಾಟಕ ಬ್ರಾಹ್ಮಣ ಸಂಘದಿಂದ ಇತ್ತೀಚೆಗೆ ನಡೆದ ಸಾಮೂಹಿಕ ಋಗ್ವೇದ ಉಪಾಕರ್ಮ ಕಾರ್ಯಕ್ರಮದಲ್ಲಿ ಸುಮಾರು 70 ಮಂದಿ ಸಂಘದ ಸದಸ್ಯರು ಭಾಗವಹಿಸಿದ್ದರು. ಸಂಘದ ಅಧ್ಯಕ್ಷ ಎಂ.ವಿಶ್ವನಾಥಯ್ಯ, ಕಾರ್ಯದರ್ಶಿ ಕೆ.ಆರ್.ಮಂಜುನಾಥ್, ಎಚ್.ಎಸ್.ಶ್ರೀಕಂಠ ಶರ್ಮ, ಎಚ್.ಎಸ್.ನಾಗಶಯನ ಇನ್ನಿತರರು ಉಪಸ್ಥಿತರಿದ್ದರು.

ಹಿರಿಯ ನಾಗರಿಕರ ದಿನಾಚರಣೆ: ಮೂವರು ಗಣ್ಯರಿಗೆ ಸನ್ಮಾನ



ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ನಗರದ ಜಿಲ್ಲಾ ಪತ್ರಕರ್ತರ ಸಂಘದ ಭವನದಲ್ಲಿ ಆಯೋಜಿಸಿದ್ದ ಹಿರಿಯ ನಾಗರಿಕರ ದಿನಾಚರಣೆ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಮೂವರು ಗಣ್ಯರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು.

ಮೈಸೂರು, ಆ.21(ಜಿಎ)–ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ನಗರದ ಜಿಲ್ಲಾ ಪತ್ರಕರ್ತರ ಸಂಘದ ಭವನದಲ್ಲಿ ಆಯೋಜಿಸಿದ್ದ ಹಿರಿಯ ನಾಗರಿಕರ ದಿನಾಚರಣೆ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಮೂವರು ಗಣ್ಯರನ್ನು ಸನ್ಮಾನಿಸಲಾಯಿತು.

ಸಾಧಕರನ್ನು ಸನ್ಮಾನಿಸಿ ನಟರಾಜ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿ ಡಾ.ಎಸ್. ಶಿವರಾಜಪ್ಪ ಮಾತನಾಡಿ, ಹಿರಿಯ ನಾಗರಿಕರನ್ನು ಗೌರವಿಸುವುದು ಸಂಪ್ರದಾಯ. ಇಂದು ವಿಶ್ವದೆಲ್ಲಡೆ ಭಾರತಕ್ಕೆ ಗೌರವ ದೊರಕಿಸುವ ನಿಟ್ಟಿನಲ್ಲಿ ಸಂಸ್ಕೃತಿ, ಕಲೆ, ಸಾಹಿತ್ಯ, ಸಂಗೀತ ಕ್ಷೇತ್ರಗಳಿಗೆ ಹಿರಿಯರು ನೀಡಿದ ಕೊಡುಗೆ ಗಣನೀಯವಾಗಿದೆ. ಹೀಗಾಗಿ ಇವರು ಇತರರಿಗೆ ಮಾದರಿಯಾಗಿದ್ದಾರೆ. ಈಗಲೂ ಇವರು ಮತ್ತೊಬ್ಬರ ನೆರವಿಲ್ಲದೇ ತಮ್ಮ ತಮ್ಮ ಕೆಲಸ ಮಾಡಿಕೊಳ್ಳುತ್ತಿರುವುದು ಕಿರಿಯರಿಗೆ ಮಾದರಿ ಎಂದರು.

ಕಾರ್ಯಕ್ರಮದಲ್ಲಿ ಮೈಸೂರು ವಿವಿ ಪ್ರಸಾರಾಂಗದ ನಿವೃತ್ತ ನಿರ್ದೇಶಕ ಕೆ.ಟಿ.ವೀರಪ್ಪ ಹಿರಿಯ ಸಮಾಜ ಸೇವಕಿ ವೈದೇಹಿ ಹಾಗೂ ಹಿರಿಯ ರಂಗಕರ್ಮಿ ರಾಜಶೇಖರ ಕದಂಬ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ಮಡ್ಡೀಕೆರೆ ಗೋಪಾಲ್, ಡಾ.ಪುಷ್ಪಾ ಅಯ್ಯಂಗಾರ್, ಡಾ.ಕೆರ್ಷುರಾಂ ವಾಜಪೇಯಿ, ಮ.ನ.ಲತಾ ಮೋಹನ್ ಉಪಸ್ಥಿತರಿದ್ದರು.

ಅಭಿನಂದನೆ...



ಮೈಸೂರು ಜಿಲ್ಲಾ ನೇಕಾರರ ಗೃಹ ನಿರ್ಮಾಣ ಸಹಕಾರ ಸಂಘದ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಚೆಲುವ ರಾಜಕುಮಾರ್ ಅವರನ್ನು ಬಿಜೆಪಿ ಮುಖಂಡ ಎಲ್.ಚೌಡಪ್ಪ, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕರಾದ ಕೆ.ಉಮಾಶಂಕರ್, ಪಡುವಾರಹಳ್ಳಿಯ ಎಂ.ರಾಮಕೃಷ್ಣ, ಶಿಲ್ಪ ಎಸ್.ಸೋಮಣ್ಣ, ನಗರ ಕಾಂಗ್ರೆಸ್ ಉಪಾಧ್ಯಕ್ಷ ಟಿ.ಸುಂದರ್ ಕುಮಾರ್ ಅಭಿನಂದಿಸಿದರು. ಬಸವರಾಜ್, ಹರೀಶ್, ಯೋಗಾನಂದ್, ವರಲಕ್ಷಿ ಅಜಯ್ ಮತ್ತಿತರರು ಉಪಸ್ಥಿತರಿದ್ದರು.

ಆ.25ರಂದು ನಾಟಕ ಪ್ರದರ್ಶನ

ಮೈಸೂರು, ಆ.21– ರಂಗಾಯಣದ ವಾರಾಂತ್ಯ ರಂಗಪ್ರದರ್ಶನದಲ್ಲಿ ಜಂಗಮ ಕಲೆಕ್ಟಿವ್ ಕಲಾವಿದರು ಅಭಿನಯಿಸುವ ಲಕ್ಷ್ಮಣ್ ಕೆ.ಪಿ ಅವರು ರಚಿಸಿ, ವಿನ್ಯಾಸಗೊಳಿಸಿ ನಿರ್ದೇಶನ ಮಾಡಿರುವ 'ಬಾಬ್ ಮಾರ್ಲಿ From Kodihalli' ನಾಟಕದ ಪ್ರದರ್ಶನವನ್ನು ಹವ್ಯಾಸಿ ರಂಗ ಪ್ರಯೋಗವಾಗಿ ಆಗಸ್ಟ್ 25 ರಂದು ಭಾನುವಾರ ಸಂಜೆ 6.30ಕ್ಕೆ ಭೂಮಿಗೀತ ರಂಗಮಂದಿರದಲ್ಲಿ ಏರ್ಪಡಿಸಲಾಗಿದೆ ಎಂದು ರಂಗಾಯಣದ ಉಪನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜ್ಯಪಾಲರ ವಿರುದ್ಧ ಪ್ರತಿಭಟನೆ ಸರಿಯಲ್ಲ


ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಆಕ್ಷೇಪಣೆ

ಮೈಸೂರು,ಆ.21(ಜಿಎ)–ಬಹುಕೋಟಿ ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಸಿಎಂ ಸಿದ್ದರಾಮಯ್ಯ ಅವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ ರಾಜ್ಯಪಾಲರದು ಸಾಂವಿಧಾನಿಕ ಹುದ್ದೆಯಾಗಿದೆ. ಹೀಗಿರುವಾಗ ಅವರ ವಿರುದ್ಧ ಆಕ್ಷೇಪಾರ್ಹ ರೀತಿಯಲ್ಲಿ ಪ್ರತಿಭಟನೆಗಳು ನಡೆಯುತ್ತಿರುವುದು ಸರಿಯಲ್ಲ ಎಂದು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ರಾಜ್ಯ ಸಂಘಟನಾ ಕಾರ್ಯದರ್ಶಿ ಎಂ.ರವಿಕುಮಾರ್ ಬೇಸರ ವ್ಯಕ್ತಪಡಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯಪಾಲರಾದ ಥಾವರ್‌ಚಂದ್ ಗೆಹ್ಲೋಟ್ ಅವರು ಕೈಗೊಂಡಿರುವ ಕ್ರಮ ಸೂಕ್ತವಾದುದೇ ಆಗಿದೆ. ಹೀಗಿದ್ದರೂ ಕಾಂಗ್ರೆಸ್ ನಾಯಕರು ಆಕ್ಷೇಪಾರ್ಹ ಹೇಳಿಕೆ ನೀಡುತ್ತಿದ್ದಾರೆ. ಜೊತೆಗೆ, ಪ್ರತಿಭಟನೆಗಳ ವೇಳೆ ರಾಜ್ಯಪಾಲರ ಭಾವಚಿತ್ರಕ್ಕೆ ಅಪಮಾನಿಸಲಾಗುತ್ತಿದೆ. ಇದಲ್ಲದೆ, ಕಾಂಗ್ರೆಸ್ ನಾಯಕರು ರಕ್ತಪಾತಕ್ಕೆ ಪ್ರಚೋದನೆ ನೀಡುವ ಮಾತನ್ನು ಆಡುತ್ತಿದ್ದಾರೆ. ಹೀಗಾಗಿ ಇಂತಹವರನ್ನು ಪೊಲೀಸ್ ಇಲಾಖೆ ಕೂಡಲೇ ಬಂಧಿಸಬೇಕು. ಜೊತೆಗೆ ಸಿದ್ದರಾಮಯ್ಯ ಅವರು ಸಹಾ ಸಂವಿಧಾನ ವಿರೋಧಿಯಾಗದೇ, ತಮ್ಮ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿ ತನಿಖೆಗೆ ಸಹಕರಿಸಬೇಕೆಂದು ಆಗ್ರಹಿಸಿದರು.


ಸುದ್ದಿಗೋಷ್ಠಿಯಲ್ಲಿ ಸೋಮಸುಂದರ್, ಎಸ್.ನಾಗೇಂದ್ರ, ರಾಜೇಗೌಡ, ರವಿಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಇಂದು ಕೆಲವೆಡೆ ವಿದ್ಯುತ್ ವ್ಯತ್ಯಯ



ಮೈಸೂರು,ಆ.21– ಆ.22ರಂದು ತುರ್ತು ಲೈನ್ ನಿರ್ವಹಣಾ ಕಾಮಗಾರಿ ನಿಮಿತ್ತ ಅಣ್ಣೂರು ಪಂಚಾಯಿತಿ, ಪಡುಕೋಟೆ ಪಂಚಾಯಿತಿ ಮತ್ತು ಭೀಮನಹಳ್ಳಿ ಪಂಚಾಯಿತಿ ವ್ಯಾಪ್ತಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬೆಳಗ್ಗೆ 10ರಿಂದ ಸಂಜೆ 6ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

22.08.2024 ಗುರುವಾರ, ಮಳೆ ನಕ್ಷತ್ರ: ಮಖ 17.08.2024 ರಿಂದ 30.08.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಶ್ರಾವಣ ಮಾಸ, ಕೃಷ್ಣ ಪಕ್ಷ,
ತಿಥಿ: ತದಿಗೆ, ನಕ್ಷತ್ರ: ಉಭಾ, ರಾಹುಕಾಲ : ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠ** : ಶ್ರೀ ರಾಘವೇಂದ್ರ ತೀರ್ಥ ಗುರುಸಾರ್ವಭೌಮರ 353ನೇ ಆರಾಧನಾ ಮಹೋತ್ಸವ, ಉತ್ತರಾಧನೆ, ಬೆಳಗ್ಗೆ 7ಕ್ಕೆ ಉತ್ಸವ ರಾಯರಿಗೆ ಪಾದಪೂಜೆ, ಪಂಚಾಮೃತ, ಬೆಳಗ್ಗೆ 9ಕ್ಕೆ ರಾಜಬೀದಿಗಳಲ್ಲಿ ಮಹಾರಥೋತ್ಸವ, ಹಸ್ತೋದಕ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 6ಕ್ಕೆ ಎನ್. ಶ್ರೀಕಾಂತ್ ಮತ್ತು ತಂಡದವರಿಂದ ದಾಸವಾಣಿ, ರಾತ್ರಿ 8ಕ್ಕೆ ಶ್ರೀ ಬದರಿ ದಿವ್ಯಭೂಷಣ ತಂಡದವರಿಂದ ರಾಮಾಭ್ಯುದಯಂ ಸಂಗೀತ ನೃತ್ಯನಾಟಕ, ಸ್ಥಳ: ಮಠದ ಆವರಣ, ಸುಬ್ಬರಾಯನಕೆರೆ, ನಾರಾಯಣಶಾಸ್ತ್ರಿ ರಸ್ತೆ.

■ **ಶ್ರೀ ಗುರುರಾಘವೇಂದ್ರ ಆರಾಧನಾ ಸಮಿತಿ** : ಶ್ರೀ ರಾಘವೇಂದ್ರ ಸ್ವಾಮಿಗಳ ಆರಾಧನಾ ಮಹೋತ್ಸವ, ಬೆಳಗ್ಗೆ 6ಕ್ಕೆ ಸುಪ್ರಭಾತ, 8ಕ್ಕೆ ರಾಘವೇಂದ್ರ ಅಷ್ಟಾಕ್ಷರ ಜಪ, ಬೆಳಗ್ಗೆ 9ಕ್ಕೆ ಶ್ರೀ ಅಶ್ವತ್ಥನಾರಾಯಣ ಹೋಮ, ಬೆಳಗ್ಗೆ 11ಕ್ಕೆ ಅಷ್ಟೋತ್ತರ ಸೇವೆ, ಬೆಳಗ್ಗೆ 11.30ಕ್ಕೆ ಅಭಿಷೇಕ, ಮಹಾಪೂಜೆ, ಮಹಾಮಂಗಳಾರತಿ, ಬೆಳಗ್ಗೆ 8ಕ್ಕೆ ಸೋಮನಾಥನಗರದ ಶ್ರೀ ಸೋಮನಾಥೇಶ್ವರ ದೇವಸ್ಥಾನದಿಂದ ವಾಹನೋತ್ಸವ, ರಾತ್ರಿ 9.30ಕ್ಕೆ ಮಹಾಮಂಗಳಾರತಿ, ಅಷ್ಟಾವಧಾನ ಸೇವೆ, ತೊಟ್ಟಿಲು ಸೇವೆ, ಬೆಳಗ್ಗೆ 9ಕ್ಕೆ ಶ್ರೀ ಸರ್ಪ ಹೋಮ, ಬೆಳಗ್ಗೆ 11.30ಕ್ಕೆ ಶ್ರೀ ಸತ್ಯನಾರಾಯಣ ಪೂಜೆ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿ ಮಠ, ಸೋಮನಾಥನಗರ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ:** ಶ್ರೀ ರಾಘವೇಂದ್ರತೀರ್ಥ ಗುರುಸಾರ್ವಭೌಮರ 353ನೇ ಆರಾಧನಾ ಮಹೋತ್ಸವ, ಬೆಳಗ್ಗೆ 5.30ಕ್ಕೆ ಸುಪ್ರಭಾತ, 7ರಿಂದ ಮಹಾಪಂಚಾಮೃತ ಅಭಿಷೇಕ, 8 ರಿಂದ ಕನಕಾಭಿಷೇಕ, ಸರ್ವಸೇವೆ, ಮಧ್ಯಾಹ್ನ 12ಕ್ಕೆ ಮಹಾಮಂಗಳಾರತಿ, 12.30ರಿಂದ ಪ್ರಸಾದ ವಿನಿಯೋಗ, ಸಂಜೆ 7ಕ್ಕೆ ಸ್ವಸ್ತಿವಾಚನ, ಶ್ರೇಯಃಪ್ರಾರ್ಥನೆ, ಮಹಾಮಂಗಳಾರತಿ, ಸಂಜೆ 6.30ರಿಂದ ಹೆಚ್.ಎಲ್. ಶಿವಶಂಕರಸ್ವಾಮಿ ಮತ್ತು ವೃಂದದವರಿಂದ ತಾಳವಾದ್ಯ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿ ಮಠ, ಜಯಲಕ್ಷ್ಮಿಪುರಂ.

■ **ವೀರಭದ್ರಸ್ವಾಮಿ ಹಾಗೂ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ:** ಶ್ರೀ ವೀರಭದ್ರೇಶ್ವರಸ್ವಾಮಿಯ ಜಯಂತ್ಯುತ್ಸವ, ಮಹಾರಥೋತ್ಸವ ಹಾಗೂ ಶ್ರಾವಣ ಮಾಸದ ಪೂಜಾ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಪ್ರಾಂಗಣ, ಡಿ.ಬನುಮಯ್ಯ ರಸ್ತೆ, ಕೆ.ಆರ್.ಮೊಹಲ್ಲಾ, ಬೆಳಗ್ಗೆಯಿಂದ.

■ **ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು, ಪ್ರಾದೇಶಿಕ ಜಾನಪದ ಅಧ್ಯಯನ ಮತ್ತು ಜನಪದ ಕಲಿಕಾ ಕೇಂದ್ರ, ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯ, ಏಕತಾರಿ ಸಾಂಸ್ಕೃತಿಕ ಸಂಘಟನೆ** : ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಜನಪದ ನೃತ್ಯಗಳು ಮತ್ತು ಜನಪದ ಗೀತೆಗಳ ಕಲಿಕಾ ತರಬೇತಿ ಶಿಬಿರ, ಸ್ಥಳ: ಕಿರು ರಂಗಮಂದಿರ ಆವರಣ, ಕಲಾಮಂದಿರ, ಸಂಜೆ 4 ರಿಂದ.

■ **ಬಸವ ಭಾರತ ಪ್ರತಿಷ್ಠಾನ, ಸಮಸ್ತ ಬಸವಪರ ಸಂಘಟನೆಗಳ ಸಹಭಾಗಿತ್ವ** : ಬಸವ ಧರ್ಮ ಜಾಗೃತಿ, ಅಭಿಯಾನ, ಇಷ್ಟಲಿಂಗ ಧಾರಣೆ ಶಿವಯೋಗ, ವಚನ ಪಠಣ, ಶ್ರಾವಣ ಮಾಸದ ಪ್ರವಚನ ಕಾರ್ಯಕ್ರಮ, ಶರಣು ವಿಶ್ವ ವಚನ ಫೌಂಡೇಷನ್ ಅಧ್ಯಕ್ಷ ವಚನ ಕುಮಾರಸ್ವಾಮಿ ಅವರಿಂದ ಗ್ರಾಮಾಂತರ ಪ್ರದೇಶದಲ್ಲಿ ಬಸವ ತತ್ವದ ಅನುಷ್ಠಾನ ಮಾಡುವುದು ಹೇಗೆ? ಕುರಿತು ಉಪನ್ಯಾಸ, ಸ್ಥಳ: ಸಿಡಿಲು ಮೂರ್ತಿ ದೇವರ ದೇವಸ್ಥಾನ, ಆನಗಳ್ಳಿ, ಮೈಸೂರು ತಾ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 'ಸಂವಹನ ಸಮಾಚಾರ' ಬಾನುಲಿ ಸರಣಿ, ಪ್ರಸ್ತುತಿ: ಅಲಕಾ ಕಟ್ಟೆಮನೆ 6.40 ಅರಿವಿನ ಶಿಖರ : ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಹಸಿರುಹೊನ್ನು–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ಅರಣ್ಯ ಇಲಾಖೆ, ಕರ್ನಾಟಕ ಸರ್ಕಾರ, 8.30 ಕನ್ನಡ ಚಿತ್ರಗೀತೆಗಳು, 9.00 ರಾಷ್ಟ್ರೀಯ ಬಾಹ್ಯಾಕಾಶ ದಿನದ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ ಸರಣಿ 'ಬಾಹ್ಯಾಕಾಶ ವಿಸ್ಮಯ', 10.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಕಲಾವತಿ ಅವಧೂತ್–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ–ಕಾಡಿನಲ್ಲಿನ ಕಥೆಗಳು. ಪ್ರಸ್ತುತಿ: ಜಿ.ಶಾಂತಕುಮಾರ್ **ಮಧ್ಯಾಹ್ನ:** 12.30 ದೇವರನಾಮ–ರಕ್ಷಿತಾ. ಆರ್, 12.45 ಚಿತ್ರಗೀತೆಗಳು, 1.20 ಭಾವಗೀತೆಗಳು, 4.00 ಜನಪದ ಸಂಗೀತ, 4.30 ಕನ್ನಡ ಭಾರತಿ–ಡಾ.ಪ್ರಭುಶಂಕರ ಅವರ ಎರಡು ನಾಟಕಗಳ ಸಮೀಕ್ಷೆ ಡಾ.ಸಿ.ಜಿ.ಉಷಾದೇವಿ ಅವರಿಂದ, ಪ್ರಾಚೀನ ಕನ್ನಡದಲ್ಲಿ ವೈದ್ಯ ಗ್ರಂಥಗಳು. ಮಾತನಾಡುತ್ತಾರೆ: ಡಾ.ವೈ.ಸಿ.ಭಾನುಮತಿ, 6.10 'ಸಂವಹನ ಸಮಾಚಾರ' ಬಾನುಲಿ ಸರಣಿ. ಪ್ರಸ್ತುತಿ: ಅಲಕಾ ಕಟ್ಟೆಮನೆ, 6.50 ಕೃಷಿರಂಗ–ಕಿಸಾನ್‌ವಾಣಿ, ಪ್ರಾಯೋಜಕರು: ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ 'ನಂ ಕಂಪನಿ' ರೈತ ಉತ್ಪಾದಕ ಸಂಸ್ಥೆಗಳ ಸಬಲೀಕರಣ ಕುರಿತ ಬಾನುಲಿ ಸರಣಿ ಸಾವಯವ ಕೃಷಿ ಹಾಗೂ ಭತ್ತದ ಬೇಸಾಯ ಮತ್ತು ಮಾರಾಟ ಕುರಿತು ಸಂವಾದ. ಭಾಗವಹಿಸುತ್ತಾರೆ: ರೈತ ಬಂಧು ಸಾವಯವ ರೈತ ಉತ್ಪಾದಕ ಕಂಪನಿ ಅಧ್ಯಕ್ಷ ನಿಂಗರಾಜು ಮತ್ತು ಸಾರ್ವಭೌಮ ರೈತ ಉತ್ಪಾದಕ ಕಂಪನಿ ಅಧ್ಯಕ್ಷ ತಿಮ್ಮಪ್ಪ. ಪ್ರಸ್ತುತಿ: ಎನ್.ಕೇಶವಮೂರ್ತಿ, 7.45 ಕನ್ನಡದಲ್ಲಿ ಭಾಷಣ, 8.00 ಹಲೋ ಯುವವಾಣಿ–ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಸಾಮಾನ್ಯ ಜ್ಞಾನ ರಸಪ್ರಶ್ನೆ ಕಾರ್ಯಕ್ರಮ, ಪ್ರಸ್ತುತಿ: ನಿವೇದಿತ. ಹೆಚ್, 10.00 ನಾಟಕ 'ಸ್ವಾತಂತ್ರ್ಯ ವೀರ ಸುರಪುರದ ವೆಂಕಟಪ್ಪ ನಾಯಕ' ರಚನೆ–ಡಾ.ರಂಗರಾಜ್ ವನದುರ್ಗ, ಪ್ರಸ್ತುತಿ–ರಾಜೇಂದ್ರ ಆರ್.ಕುಲಕರ್ಣಿ, 10.30 ಸವಿನೆನಪು

■ **ಶರಣ ಸಾಹಿತ್ಯ ಪರಿಷತ್ತು (ಮೈಸೂರು ನಗರ ಘಟಕ) ಕದಳಿ ಮಹಿಳಾ ವೇದಿಕೆ** : ವಚನ–ಶ್ರಾವಣ, ಮನೆ ಮನೆಗೆ ಶ್ರಾವಣ ಮಾಸದ ಶರಣ ಸಂದೇಶ, ಸಹ ಪ್ರಾಧ್ಯಾಪಕ ವಿಜಯ ಹನೂರು ಅವರಿಂದ ಸತ್ಯವಿಲ್ಲದ ಭಕ್ತಿಯ ಸಾವಿರ ವರುಷ ಮಾಡಿದಡೇನು–ಚೆನ್ನಬಸವಣ್ಣ ಕುರಿತು ಉಪನ್ಯಾಸ, ಸ್ಥಳ: ಶ್ರೀಮತಿ ಮೀನಾ ಪ್ರಾಣೇಶ್–ಆಶಾ ಬಸವರಾಜ್, ಪುಟ್ಟರಾಜ ಗವಾಯಿಗಳ ಕ್ರೀಡಾಂಗಣ, 20ನೇ ಮುಖ್ಯ ರಸ್ತೆ, ಜೆ.ಪಿ.ನಗರ, ಸಂಜೆ 5.30ಕ್ಕೆ

■ **ಸಂಸ್ಕೃತ ಭಾರತಿ, ಮೈಸೂರು** : ಸಂಸ್ಕೃತ ಸಪ್ತಾಹದ ಅಂಗವಾಗಿ ಉಪನ್ಯಾಸ, ವಿದ್ವಾನ್ ಆದರ್ಶ ಭಟ್ಟ ಅವರಿಂದ ಜೀವನೇ ಶಾಸ್ತ್ರಮ್ ಕುರಿತು ಉಪನ್ಯಾಸ, ಸ್ಥಳ: ಭಗಿನಿ ಸೇವಾ ಸಮಾಜ, ವಿದ್ಯೋದಯ, ಕೃಷ್ಣಮೂರ್ತಿಪುರಂ, ಸಂಜೆ 6 ರಿಂದ.

■ **ಶ್ರೀ ಸುತ್ತೂರು ಮಠ, ಮೈಸೂರು ಶಾಖೆ** : ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಮಹಾರಾಣಿ ಕಲಾ ಕಾಲೇಜು ಪ್ರಾಂಶುಪಾಲ ಡಾ.ಬಿ.ವಿ. ವಸಂತಕುಮಾರ್ ಅವರಿಂದ ಪ್ರವಚನ, ವಿದುಷಿ ವಸಂತ ವೆಂಕಟೇಶ್ ಅವರಿಂದ ವಾಚನ, ಸಂಜೆ 6ಕ್ಕೆ ಸಾಮೂಹಿಕ ಪ್ರಾರ್ಥನೆ, ಸಂಜೆ 6.30ಕ್ಕೆ ಪ್ರವಚನ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6.30 ರಿಂದ.

■ **ಅಮೃತಾಂಶು ಟ್ರಸ್ಟ್, ನಾರಾಯಣ ಹೃದಯಾಲಯ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ, ಜಿಲ್ಲಾ ಅಂಧತ್ವ ನಿಯಂತ್ರಣ ಸಂಸ್ಥೆ, ಮೈಸೂರು ಜಿಲ್ಲಾ ಸಂಚಾರಿ ನೇತ್ರ ಚಿಕಿತ್ಸಾ ಘಟಕ:** ಉಚಿತ ಕಣ್ಣಿನ ತಪಾಸಣೆ ಮತ್ತು ಶಸ್ತ್ರ ಚಿಕಿತ್ಸಾ ಶಿಬಿರ, ಸ್ಥಳ: 2767, ಪಾಂಚಜನ್ಯ, 5ನೇ ಮೇನ್, ಮೇದರಕೇರಿ, ಚಾಮುಂಡಿಪುರಂ, ಬೆಳಗ್ಗೆ 9 ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಅಧಿಕ ರಕ್ತದೊತ್ತಡ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ಪ್ರೀತಿ ಕ್ಯಾನ್ಸರ್ ಸೆಂಟರ್** : ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10ರಿಂದ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಮತ್ತು ಶ್ರೀ ದತ್ತವಿಜಯಾನಂದ ತೀರ್ಥ ಸ್ವಾಮೀಜಿಯವರಿಂದ 21ನೇ ಚಾತುರ್ಮಾಸ್ಯ ವ್ರತದೀಕ್ಷಾ ಮಹೋತ್ಸವ, ಸಂಕಷ್ಟಹರ ಚತುರ್ಥಿ, ಸ್ಥಳ: ಆಶ್ರಮದ ಆವರಣ, ನಂಜನಗೂಡು ರಸ್ತೆ.

ಬೆಳಗ್ಗೆ ಕಾಡಿನಿಂದ ನಾಡಿಗೆ ಸಾಂಪ್ರದಾಯಿಕ ಬೀಳ್ಕೊಡುಗೆ



ಗಜಪಯಣಕ್ಕೆ ಚಾಲನೆ ದೊರೆತ ನಂತರ ಅಪಾರ ಸಂಖ್ಯೆಯ ಜನರೊಂದಿಗೆ ಮೆರವಣಿಗೆಯಲ್ಲಿ ಸಾಗುತ್ತಿರುವ ಅಭಿಮನ್ಯು ನೇತೃತ್ವದ ಗಜಪಡೆ.

ಒಂದನೇ ಪುಟದಿಂದ

ಕೆ.ವೆಂಕಟೇಶ್ ಹಾಗೂ ಇನ್ನಿತರರು ಪೂಜೆ ಸಲ್ಲಿಸಿ, ಪುಷ್ಪಾ ರ್ಚನೆ ನೆರವೇರಿಸಿ 2024ನೇ ಸಾಲಿನ ದಸರಾ ಮಹೋತ್ಸವದ ಮೊದಲ ಕಾರ್ಯ ಕ್ರಮಕ್ಕೆ ವರ್ಣರಂಜಿತ ಚಾಲನೆ ನೀಡಿದರು.

ತುಲಾ ಲಗ್ನದಲ್ಲಿ ವಿಶೇಷ ಪೂಜೆ: ಮೊದಲ ತಂಡದಲ್ಲಿ ಆಗಮಿಸಿದ 9 ಆನೆ ಗಳಿಗೆ ಅರ್ಚಕ ಎಸ್.ವಿ.ಪ್ರಹ್ಲಾದರಾವ್ ಬೆಳಗ್ಗೆ 10.20ರಿಂದ 10.45ರೊಳಗೆ ಸಂದ ತುಲಾ ಲಗ್ನದಲ್ಲಿ ಪೂಜೆ ಸಲ್ಲಿಸಿದರು. ಗಜಪೂಜೆಗಾಗಿ ಬೆಳಗ್ಗೆ ಎಲ್ಲಾ ಆನೆಗಳಿಗೂ ಸ್ನಾನ ಮಾಡಿಸಿ, ಗಾದಿ, ನಮ್ದಾ ಕಟ್ಟಿ ಅಲಂಕಾರ ಮಾಡಲಾಗಿತ್ತು. ಬಳಿಕ ಎಲ್ಲಾ ಆನೆ ಗಳಿಗೂ ಪಾದ ತೊಳೆದು ಅರಿಶಿನ, ಕುಂಕುಮ, ಗಂಧ ಹಚ್ಚಿ, ಗಣಪತಿ ಪೂಜೆ, ಸಂಕಲ್ಪ ಮಾಡಿ, ವಿವಿಧ ಪುಷ್ಪ, ಪತ್ರೆಗಳನ್ನು ಅರ್ಪಿಸಿ ವನದೇವತೆ ಪೂಜೆ ನೆರವೇರಿಸಲಾಯಿತು. ಬಳಿಕ ಗಣಪತಿಗೆ ಇಷ್ಟವಾದ ಕಜ್ಜಾಯ, ಚಕ್ಕುಲಿ, ಕೋಡು ಬಳೆ, ನಿಪ್ಪಟ್ಟು, ಕಡುಬು ಸೇರಿದಂತೆ ಇನ್ನಿತರ ತಿನಿಸು, ಪಂಚಫಲಗಳು, ಕಬ್ಬು, ಬೆಲ್ಲ ವನ್ನು ಆನೆಗಳಿಗೆ ನೀಡಿ, ಪೂಜೆ ಸಲ್ಲಿಸ ಲಾಯಿತು. ಸಚಿವರು ಆನೆಗಳಿಗೆ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ನೆರವೇರಿಸಿದ ಬಳಿಕ ಎಲ್ಲಾ ಆನೆಗಳಿಗೂ ದೃಷ್ಟಿ ತೆಗೆದು, ಬೂದು ಕುಂಬಳಕಾಯಿ ಒಡೆಯಲಾಯಿತು. ಅಲ್ಲದೆ, ಆನೆಗಳಿಂದ ನಿಂಬೆಹಣ್ಣು ತುಳಿಸಿ ಗಜಪಯಣಕ್ಕೆ ಚಾಲನೆ ನೀಡಲಾಯಿತು.

ಕಳೆ ಕಟ್ಟಿದ ಮೆರವಣಿಗೆ: ಗಜಪಯಣ ಕಾರ್ಯಕ್ರಮಕ್ಕೆ ಸಾಕ್ಷಿಯಾಗಲು ವೀರನ ಹೊಸಳ್ಳಿ, ನಾಗಾಪುರ ಹಾಡಿ, ಪಕ್ಷಿರಾಜ ಪುರ, ಹನಗೋಡು ಸೇರಿದಂತೆ ಹುಣ ಸೂರು ತಾಲೂಕಿನ ವಿವಿಧೆಡೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಜನ ವೀರನ ಹೊಸಳ್ಳಿ ಗೇಟ್ ಬಳಿ ಆಗಮಿಸಿ ಗಜಪೂಜೆ ವೀಕ್ಷಿಸಿದರು. ಪೂಜಾ ಕುಣಿತ, ಡೊಳ್ಳು ಕುಣಿತ, ಮಹಿಳಾ ಡೊಳ್ಳು ಕುಣಿತ, ಗೊಂಬೆ ಕುಣಿತ, ವೀರಗಾಸೆ ಸೇರಿದಂತೆ ವಿವಿಧ ಜಾನಪದ ಕಲಾತಂಡಗಳ ಪ್ರದರ್ಶನ ಗಜಪಯಣ ಕಾರ್ಯಕ್ರಮಕ್ಕೆ ಮೆರಗು ತುಂಬಿದವು. ಗಜಪೂಜೆ ಮುಗಿಯುತ್ತಿದ್ದಂತೆಯೇ ವೀರನಹೊಸಳ್ಳಿ ಗೇಟ್‌ನಿಂದ ಒಂದೂವರೆ ಕಿ.ಮೀ ದೂರದವರೆಗೆ ಆನೆಗಳನ್ನು ಮೆರವಣಿಗೆ ಮೂಲಕ ಕರೆದೊಯ್ಯಲಾಯಿತು. ಈ ವೇಳೆ ಗಜ ಪಡೆಯೊಂದಿಗೆ ಅಪಾರ ಸಂಖ್ಯೆ ಜನ ಹೆಜ್ಜೆ ಹಾಕುವ ಮೂಲಕ ಜಂಬೂಸವಾರಿ ಮೆರವಣಿಗೆ ನೆನಪಿಸುವಂತೆ ಮಾಡಿದರು.

ಜಾತ್ರಾ ವಾತಾವರಣ: ಗಜಪಯಣದ ಹಿನ್ನೆಲೆಯಲ್ಲಿ ಕಾರ್ಯಕ್ರಮ ನಡೆಯುವ ಸ್ಥಳದಿಂದ ಎರಡು ಕಿ.ಮೀ ದೂರದವರೆಗೆ ತಳಿರು ತೋರಣ, ಬಂಟಿಂಗ್ಸ್ ಕಟ್ಟಿ ಜಾತ್ರಾ ಸಂಭ್ರಮದ ವಾತಾವರಣ ಕಳೆಕಟ್ಟುವಂತೆ ಮಾಡಲಾಗಿತ್ತು. ಅಲ್ಲದೆ, ರಸ್ತೆಯ ಎರಡೂ ಬದಿಯಲ್ಲಿ ತಿಂಡಿ, ತಿನಿಸು, ಕಡಲೆಪುರಿ, ಸಿಹಿ ತಿನಿಸು, ಆಟಿಕೆ, ಐಸ್‌ಕ್ರೀಮ್, ಪಾನೀಯ ಮಾರಾಟದ ಮಳಿಗೆಗಳು ತಲೆ ಎತ್ತಿದ್ದರಿಂದ ಗಜಪಯಣ ಕಾರ್ಯಕ್ರಮ ಜಾತ್ರೆಯಂತೆ ಭಾಸವಾಯಿತು.

ಮಾವುತರಿಗೆ ಸನ್ಮಾನ: ಮೆರವಣಿಗೆ ಬಳಿಕ ವೀರನಹೊಸಳ್ಳಿ ಗ್ರಾಮದ ಮೈದಾನ ದಲ್ಲಿ ನಡೆದ ಸಭಾ ಕಾರ್ಯಕ್ರಮದಲ್ಲಿ ಮೊದಲ ತಂಡದಲ್ಲಿ ಆಗಮಿಸಿದ 9 ಆನೆಗಳ ಮಾವುತರಿಗೆ ಸಾಂಪ್ರದಾಯಿಕವಾಗಿ ಸನ್ಮಾನಿಸಿ ದಸರಾ ಮಹೋತ್ಸವದ ಯಶಸ್ವಿಗೆ ಸಹಕಾರ ನೀಡುವಂತೆ ಆಹ್ವಾನ ನೀಡಲಾಯಿತು.

ಗಮನ ಸೆಳೆದ ಸಾಂಸ್ಕೃತಿಕ ಕಾರ್ಯಕ್ರಮ: ಕಾರ್ಯಕ್ರಮದಲ್ಲಿ ಹಾಡಿ ಮಕ್ಕಳ ಸಾಂಪ್ರದಾಯಿಕ ನೃತ್ಯ, ಟಿಬೆಟ್ ಕಾಲೋನಿ ಮಕ್ಕಳಿಗೆ ನೃತ್ಯ ಪ್ರದರ್ಶನ ಜರುಗಿತು. ಇದಕ್ಕೂ ಮುನ್ನ ಗಾಯಕ ಅಮ್ಮ ರಾಮಚಂದ್ರ ತಂಡದ ಸದಸ್ಯರು ಗಾಯನ ಕಾರ್ಯಕ್ರಮ ನಡೆಸಿಕೊಟ್ಟರು.

ಶಾಸಕ ಜಿ.ಡಿ.ಹರೀಶ್‌ಗೌಡ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಸಂಸದ ಸುನೀಲ್ ಬೋಸ್, ಶಾಸಕರಾದ ಡಿ.ರವಿ ಶಂಕರ್, ಅನಿಲ್ ಚಿಕ್ಕಮಾದು, ವನ್ಯ ಜೀವಿ ವಿಭಾಗದ ಎಪಿಸಿಸಿಎಫ್ ಕುಮಾರ್ ಪುಷ್ಕರ್, ಐಜಿಪಿ ಡಾ. ಬೋರ ಲಿಂಗಯ್ಯ, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಜಿ.ಪಂ ಸಿಇಓ ಕೆ.ಎಂ.ಗಾಯತ್ರಿ, ಹುಲಿ ಯೋಜನೆಯ ನಿರ್ದೇಶಕ ಡಾ.ಪಿ. ರಮೇಶ್‌ಕುಮಾರ್, ಮೈಸೂರು ವೃತ್ತ ಸಿಎಫ್ ಡಾ.ಮಾಲತಿ ಪ್ರಿಯಾ, ನಾಗರ ಹೊಳೆ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇ ಶಕರಾದ ಪಿ.ಎ.ಸೀಮಾ, ಮೈಸೂರು ವನ್ಯ ಜೀವಿ ವಿಭಾಗದ ಡಿಸಿಎಫ್ ಡಾ.ಐ.ಬಿ. ಪ್ರಭುಗೌಡ, ಡಿಸಿಎಫ್ ಡಾ.ಕೆ.ಎನ್.ಬಸವ ರಾಜ್, ಹೆಚ್.ಡಿ.ಕೋಟೆ ಎಸಿಎಫ್ ಅಭಿಷೇಕ್, ಎಸ್ಪಿ ಡಾ.ವಿಷ್ಣುವರ್ಧನ್, ಡಿಸಿಪಿ ಎಂ. ಮುತ್ತುರಾಜ್, ಮುಡಾ ಅಧ್ಯಕ್ಷ ಕೆ.ಮರೀ ಗೌಡ, ಗ್ಯಾರಂಟಿ ಯೋಜನೆಗಳ ಅನು ಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್, ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಎಸಿಎಫ್ ಲಕ್ಷ್ಮೀಕಾಂತ್, ಅರಣ್ಯ ಇಲಾಖೆಯ ಪಶು ವೈದ್ಯರಾದ ಡಾ.ಮುಜೀಬ್, ಡಾ.ರಮೇಶ್, ಆರ್‌ಎಫ್‌ಓ ಸಂತೋಷ್ ಹೂಗಾರ್ ದೊಡ್ಡ ಹೆಜ್ಜೂರು ಗ್ರಾ.ಪಂ. ಅಧ್ಯಕ್ಷೆ ಅಂಬಿಕಾ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.





ವೀರನಹೊಸಳ್ಳಿ ಗೇಟ್ ಬಳಿ ಗಜಪಡೆಗೆ ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ, ಈಶ್ವರ್ ಬಿ.ಖಂಡ್ರೆ, ಕೆ.ವೆಂಕಟೇಶ್ ಪೂಜೆ ಸಲ್ಲಿಸುತ್ತಿರುವುದು. ಕಲಾತಂಡಗಳ ಮೆರಗನ್ನು ಕಾಣಬಹುದು.

ಈ ಬಾರಿ ಅದ್ದೂರಿ ದಸರಾಗೆ ನಿರ್ಧಾರ

ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ

ಮೈಸೂರು, ಆ.21(ಎಂಟಿವೈ)– ನಾಡಿನಾದ್ಯಂತ ಈ ಬಾರಿ ಉತ್ತಮ ಮಳೆಯಾಗಿ ಜಲಾಶಯಗಳು ಭರ್ತಿ ಯಾಗಿ ರೈತರ ಮುಖದಲ್ಲಿ ಮಂದಹಾಸ ಮೂಡಿದೆ. ಈ ನಿಟ್ಟಿನಲ್ಲಿ ಈ ಬಾರಿ ದಸರಾ ಮಹೋತ್ಸವವನ್ನು ಅದ್ದೂರಿಯಾಗಿ ಆಚರಿಸಲು ನಿರ್ಧರಿಸಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ತಿಳಿಸಿದ್ದಾರೆ.

ದಸರಾ ಗಜಪಡೆಯ ಮೊದಲ ತಂಡದ ಆನೆಗಳ ಗಜಪಯಣಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ನಾಡಿನ ಎಲ್ಲಾ ಜಲಾಶಯಗಳು ಭರ್ತಿಯಾಗಿರುವುದ ರಿಂದ ಕೃಷಿ ಚಟುವಟಿಕೆ ಉತ್ತಮವಾಗಿ ನಡೆಯುತ್ತಿದೆ. ನಾಡು ಸಂಪದ್ಭರಿತವಾಗಿದೆ. ಈ ನಿಟ್ಟಿನಲ್ಲಿ ಮುಖ್ಯಮಂತ್ರಿ ಸಿದ್ದ ರಾಮಯ್ಯ ಅವರು ಈ ಬಾರಿ ದಸರಾ ವನ್ನು ಅದ್ದೂರಿಯಾಗಿ ಆಚರಿಸಲು ಸೂಚಿಸಿದ್ದಾರೆ. ದಸರಾ ಮಹೋತ್ಸವದ ಯಶಸ್ವಿಗಾಗಿ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ ಎಂದರು.

ಆ.23ಕ್ಕೆ ಅರಮನೆಗೆ ಗಜಪಡೆ: ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುವ 14 ಆನೆಗಳಲ್ಲಿ ಇಂದು ಮೊದಲ ತಂಡದಲ್ಲಿ ಅಂಬಾರಿ ಆನೆ ಅಭಿಮನ್ಯು ನೇತೃತ್ವದಲ್ಲಿ ಕಂಜನ್, ಏಕಲವ್ಯ, ಭೀಮ, ಲಕ್ಷ್ಮೀ, ವರಲಕ್ಷ್ಮಿ, ರೋಹಿತ, ಧನಂಜಯ ಹಾಗೂ ಗೋಪಿ ಆನೆಗಳು ಮೈಸೂರಿಗೆ ಆಗಮಿ ಸಲಿವೆ. ಮೈಸೂರಿನ ಅಶೋಕಪುರದ ಅರಣ್ಯ ಭವನದಲ್ಲಿ ವಾಸ್ತವ್ಯ ಹೂಡಿ, ಆ.23ರಂದು ಅರಮನೆಗೆ ಸ್ವಾಗತ ಮಾಡಿ ಆನೆಗಳನ್ನು ಬರಮಾಡಿಕೊಳ್ಳಲಾಗುತ್ತದೆ ಎಂದು ತಿಳಿಸಿದರು.

ವನ್ಯಜೀವಿಗಳ ಸಂರಕ್ಷಣೆ ಅಗತ್ಯ: ವನ್ಯ ಜೀವಿಗಳು ಹಾಗೂ ವನ್ಯ ಸಂರಕ್ಷಣೆ ಅತ್ಯಗತ್ಯ. ಪರಿಸರ ಹಾಗೂ ವನ್ಯ ಸಂರಕ್ಷಣೆ ಮಾಡದಿದ್ದರೆ ಮಾನವ ಸಂಕುಲ ಉಳಿವು ಕಷ್ಟ. ಈ ವರ್ಷ ಮೈಸೂರಿನಲ್ಲಿ 40 ಡಿಗ್ರಿ ವರೆಗೆ ಉಷ್ಣಾಂಶ ಇತ್ತು. ಇದಕ್ಕೆ ಕಾರಣ ಪರಿಸರವನ್ನು ಹಾಳು ಮಾಡು ತ್ತಿರುವುದು. ಆದ್ದರಿಂದ ಪರಿಸರವನ್ನು ರಕ್ಷಿಸಲು ಎಲ್ಲರೂ ಪಣತೊಡಬೇಕು ಎಂದು ಸಲಹೆ ನೀಡಿದರು.

ಪಶು ಸಂಗೋಪನೆ ಹಾಗೂ ರೇಷ್ಮೆ ಇಲಾಖೆಯ ಸಚಿವ ಕೆ.ವೆಂಕಟೇಶ್ ಮಾತ ನಾಡಿ, ದಸರಾ ಮಹೋತ್ಸವಕ್ಕೆ ತನ್ನದೇ ಆದ ಇತಿಹಾಸವಿದೆ. ನಾಡಹಬ್ಬ ದಸರಾ ಆಚರಣೆಯನ್ನು ಅದ್ದೂರಿಯಾಗಿ ಆಚರಿ ಸಲು ಅಗತ್ಯ ರೂಪುರೇಷೆ ಕೈಗೊಳ್ಳಲು ಸಿದ್ಧತೆ ಮಾಡಿಕೊಳ್ಳಲು ಮುಖ್ಯಮಂತ್ರಿ ಗಳು ಸೂಚಿಸಿದ್ದಾರೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ಜಿ.ಡಿ.ಹರೀಶ್‌ಗೌಡ ಮಾತನಾಡಿ, ಮೈಸೂರು ದಸರಾ ಮಹೋತ್ಸವಕ್ಕೆ 413 ವರ್ಷಗಳ ಇತಿಹಾಸವಿದೆ. ಕಳೆದ ಬಾರಿ ಸರಳ ದಸರಾ ಆಚರಿಸಲಾಗಿತ್ತು. ಈ ಬಾರಿ ಅದ್ದೂರಿ ದಸರಾ ನಡೆಸುವ ಬಗ್ಗೆ ಮುಖ್ಯ ಮಂತ್ರಿಗಳು ತಿಳಿಸಿದ್ದು ಇದು ಸಂತಸ ತಂದಿದೆ. ಹುಣಸೂರು ತಾಲೂಕು ಹಿಂದು ಳಿದ ತಾಲೂಕಾಗಿದ್ದು, ತಾಲೂಕಿನ ಕಾಡಂಚಿನ ಗ್ರಾಮಗಳಲ್ಲಿ ಪ್ರಾಣಿ ಮತ್ತು ಮಾನವ ನಡುವೆ ಸಂಘರ್ಷ ನಡೆಯುತ್ತಿದೆ. ಕಾಡಂಚಿನ ಗ್ರಾಮಗಳಲ್ಲಿ ಕೃಷಿ ಭೂಮಿ–ಕಾಡಿನ ಗಡಿ ವಿವಾದ ನಡೆಯುತ್ತಿದ್ದು, ಅನೇಕ ಕೃಷಿ ಕುಟುಂಬಗಳು ಸಂಕಷ್ಟಕ್ಕೀಡಾಗಿವೆ. ಈ ನಿಟ್ಟಿನಲ್ಲಿ ಕಂದಾಯ ಮತ್ತು ಅರಣ್ಯ ಇಲಾಖೆ ಜಂಟಿ ಸರ್ವೆ ನಡೆಸಿ ರೈತರಿಗೆ ತೊಂದರೆ ನೀಡದಂತೆ ಕಳೆದ ಬಾರಿ ಮನವಿ ಮಾಡಿದ್ದೆ. ಆದರೆ ಇನ್ನು ಯಾವುದೇ ಕ್ರಮ ಕೈಗೊಂಡಿಲ್ಲ. ಕಾಡಿನಿಂದ ನಾಡಿಗೆ ಬಂದಿರುವ ಗಿರಿ ಜನರ ಮೂಲಭೂತ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು. ಹುಣ ಸೂರು ತಾಲೂಕಿನ ಅಭಿವೃದ್ಧಿಗೆ ಸಹಕಾರ ನೀಡಬೇಕು. ಡಿ.ದೇವರಾಜ ಅರಸು ಭವನ ಪೂರ್ಣಗೊಳಿಸುವ ಮೂಲಕ ಹುಟ್ಟೂರು ಅಭಿವೃದ್ಧಿಗೆ ಕ್ರಮ ಕೈಗೊಂಡು, ವಸ್ತು ಸಂಗ್ರಹಾಲಯ ಸ್ಥಾಪನೆ, ಅರಸು ಕಲಾ ಭವನ ಅಭಿವೃದ್ಧಿ, ಅರಸು ಪುತ್ಥಳಿಗೆ ಕಾಯಕಲ್ಪ ನೀಡಲು ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದರು.

ಕಾಡಂಚಿನಲ್ಲಿ ಒಂದೇ ಹಂತದಲ್ಲಿ 126 ಕಿ.ಮೀ. ರೈಲ್ವೆ ಬ್ಯಾರಿಕೇಡ್ ಅಳವಡಿಕೆ

ಮೈಸೂರು, ಆ.21(ಎಂಟಿವೈ)– ಕಾಡಂಚಿನ ಗ್ರಾಮಗಳ ಜನರ ಹಿತ ಕಾಪಾಡುವ ನಿಟ್ಟಿನಲ್ಲಿ ಈ ಬಾರಿ ಒಂದೇ ಹಂತದಲ್ಲಿ 126 ಕಿ.ಮಿ. ರೈಲ್ವೆ ಬ್ಯಾರಿಕೇಡ್ ಅಳವಡಿಸಲು ಅನುಮತಿ ನೀಡಿದ್ದು, ಮುಂಬರುವ ದಿನದಲ್ಲಿ ಮಾನವ ವನ್ಯಜೀವಿ ಸಂಘರ್ಷದಲ್ಲಿ ಮಾನವ ಪ್ರಾಣ ಹಾನಿಯಾಗದಂತೆ ಕಟ್ಟೆಚ್ಚರ ವಹಿಸಬೇಕು ಎಂದು ಅರಣ್ಯ ಸಚಿವ ಈಶ್ವರ್ ಬಿ.ಖಂಡ್ರೆ ಸಲಹೆ ನೀಡಿದ್ದಾರೆ.

ಹುಣಸೂರು ತಾಲೂಕಿನ ವೀರನ ಹೊಸಳ್ಳಿಯಲ್ಲಿ ನಡೆದ ಗಜಪಯಣ ಕಾರ್ಯಕ್ರಮದಲ್ಲಿ ಗಜಪಡೆಯ ಕಿರು ಹೊತ್ತಿಗೆ ಬಿಡುಗಡೆ ಮಾಡಿ ಮಾತನಾ ಡಿದ ಅವರು, ಅರಣ್ಯ ಇಲಾಖೆ ಕಾಡಂಚಿನ ಗ್ರಾಮಗಳ ಜನರ ಹಿತಕಾಯಲು ಬದ್ಧ ವಾಗಿದೆ. ಈ ಹಿಂದೆ ಮಾನವ–ವನ್ಯ ಜೀವಿ ಸಂಘರ್ಷ ಹೆಚ್ಚಾಗಿ ನಡೆಯುತ್ತಿದ್ದ ಸ್ಥಳ ಗುರುತಿಸಿ, ಬೇಡಿಕೆಗೆ ಅನುಗುಣ ವಾಗಿ ರೈಲ್ವೆ ಬ್ಯಾರಿಕೇಡ್ ಅಳವಡಿಸುವ ಕಾರ್ಯ ನಡೆಸಲಾಗುತ್ತಿದೆ. ಈ ಹಿಂದೆ ಹಂತ ಹಂತವಾಗಿ ರೈಲ್ವೆ ಬ್ಯಾರಿಕೇಡ್ ಅಳವಡಿಸಲಾಗುತ್ತಿತ್ತು. ಆದರೆ ನಮ್ಮ ಸರ್ಕಾ ರದ ಅವಧಿಯಲ್ಲಿ ಒಂದೇ ಬಾರಿಗೆ 126 ಕಿ.ಮಿ ಉದ್ದದ ರೈಲ್ವೆ ಬ್ಯಾರಿಕೇಡ್ ಅಳ ವಡಿಸಲು ಕ್ರಮ ಕೈಗೊಳ್ಳಲಾಗಿದೆ. ಇದ ರಿಂದ ವನ್ಯಜೀವಿಗಳಿಂದಾಗುವ ಪ್ರಾಣ ಹಾನಿ ತಪ್ಪಿಸಿದಂತಾಗುತ್ತದೆ. ಅದಲ್ಲದೆ, ಮುಂಬರುವ ವರ್ಷಗಳಲ್ಲಿ ಅರಣ್ಯ ಇಲಾಖೆ ವನ್ಯಜೀವಿಗಳಿಂದಾಗುವ ಮಾನವ ಪ್ರಾಣ ಹಾನಿ ಪ್ರಕರಣ ಶೂನ್ಯ ವಾಗುವಂತೆ ಮಾಡಬೇಕು ಎಂದರು.



ಗಜಪಯಣ ಕಾರ್ಯಕ್ರಮದಲ್ಲಿ ಗಜಪಡೆಯ ಕಿರುಹೊತ್ತಿಗೆ ಬಿಡುಗಡೆ ಮಾಡಿದ ಸಚಿವರು ಹಾಗೂ ಶಾಸಕರನ್ನು ಕಾಣಬಹುದು.

ಜಾಗತಿಕ ಸವಾಲು: ಪ್ರಸ್ತುತ ಸಂದರ್ಭ ದಲ್ಲಿ ಜಗತ್ತಿನಲ್ಲಿ ಹವಾಮಾನ ವೈಪರೀತ್ಯದ ಅತಿ ದೊಡ್ಡ ಸವಾಲು ಕಾಡುತ್ತಿದೆ. ಹವಾಮಾನ ವೈಪರೀತ್ಯ ತಡೆಗಟ್ಟಲು ಅಗತ್ಯ ಕ್ರಮ ಕೈಗೊಳ್ಳಬೇಕಾಗಿದೆ. ಕೇರಳದ ವಯನಾಡು ಜಿಲ್ಲೆಯಲ್ಲಿ ನಡೆದ ಭೂ ಕುಸಿತ ಹವಾಮಾನ ವೈಪರೀತ್ಯದ ಕಾರಣ ವಾಗಿದೆ. ಈ ಘೋರ ದುರಂತದಲ್ಲಿ ಅಪಾರ ಪ್ರಮಾಣದ ಸಾವು–ನೋವಾಗಿದೆ. ಇದರಿಂದ ಜನ ಎಚ್ಚೆತ್ತುಕೊಳ್ಳಬೇಕಾಗಿದೆ. ಇಂತಹ ದುರಂತಗಳು ಮರುಕಳಿಸದಂತೆ ಕಟ್ಟೆಚ್ಚರ ವಹಿಸಬೇಕಾಗಿದೆ. ಅದಕ್ಕಾಗಿ ಅರಣ್ಯ ಸಂರಕ್ಷಣೆ ಮಾಡಲೇಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ರಾಜ್ಯ ದಲ್ಲೂ ಅರಣ್ಯ ಸಂಪತ್ತಿನ ಸಂರಕ್ಷಣೆಗೆ ಕ್ರಮ ಕೈಗೊಳ್ಳಲಾಗಿದೆ ಎಂದರು.

ಗಜಪಡೆಗೆ ಅವಿನಾಭಾವ ಸಂಬಂಧ: ನಾಡಹಬ್ಬ ದಸರಾ ಮಹೋತ್ಸವಕ್ಕೂ ಗಜಪಡೆಗೂ ಮೊದಲಿನಿಂದಲೂ ಅವಿನ ಭಾವ ಸಂಬಂಧ. ಗಜಪಡೆಯಿಲ್ಲದೆ ದಸರಾ ಊಹೆ ಅಸಾಧ್ಯ. ಈ ಬಾರಿಯ ದಸರಾ ಮಹೋತ್ಸವದಲ್ಲಿ 14 ಆನೆಗಳು ಪಾಲ್ಗೊಳ್ಳಲಿದ್ದು, ಮೊದಲ ತಂಡದಲ್ಲಿ 9 ಆನೆಗಳು ಇಂದು ಗಜಪಯಣದ ಮೂಲಕ ಮೈಸೂರಿಗೆ ತೆರಳುತ್ತಿವೆ. ಅಂಬಾರಿ ಆನೆ ಅಭಿಮನ್ಯು ನೇತೃತ್ವದ ಗಜಪಡೆಗೆ ಸಾಂಪ್ರದಾಯಿಕ ಪೂಜೆ ಸಲ್ಲಿಸಲಾಗಿದೆ. ಈ ಹಿಂದೆ ಕಾಲ್ನಡಿಗೆ ಯಲ್ಲಿ ಮೈಸೂರಿಗೆ ತೆರಳುತ್ತಿದ್ದ ದಸರಾ ಗಜಪಡೆಗೆ ದಾರಿಯುದ್ದಕ್ಕೂ ಪೂಜೆ ಸಲ್ಲಿಸುತ್ತಿದ್ದರು. ಕೆಲ ವರ್ಷಗಳಿಂದ ಲಾರಿ ಯಲ್ಲಿ ಕೊಂಡೊಯ್ಯುವ ಪದ್ಧತಿ ಅನುಸರಿ ಸಲಾಗುತ್ತಿದೆ. ಈ ಬಾರಿಯೂ 58 ವರ್ಷದ ಅಭಿಮನ್ಯು ನಾಡದೇವಿ ಚಾಮುಂಡೇಶ್ವರಿ ಉತ್ಸವ ಮೂರ್ತಿಯುಳ್ಳ ಚಿನ್ನದ ಅಂಬಾರಿ ಹೊರಲಿದ್ದಾನೆ ಎಂದರು

ಅರ್ಜುನನಿಗೆ ಸ್ಮಾರಕ: ಕಳೆದ ವರ್ಷ ಜಂಬೂಸವಾರಿ ಮೆರವಣಿಗೆಯಲ್ಲಿ ನಿಶಾನೆ ಆನೆಯಾಗಿ ಸಾಗಿದ್ದ ಅರ್ಜುನ ಈ ಬಾರಿ ನಮ್ಮೊಂದಿಗಿಲ್ಲ ಎಂಬ ನೋವು ಕಾಡುತ್ತಿದೆ. ಕಾಡಾನೆ ಸೆರೆ ಕಾರ್ಯಾಚರಣೆಯಲ್ಲಿ ತೊಡಗಿದ್ದ ಅರ್ಜುನ ವೀರಮರಣವನ್ನಪ್ಪಿದ ಹಾಸನ ಜಿಲ್ಲೆಯ ಯಸಳೂರು ಬಳಿ ಹಾಗೂ ಅರ್ಜುನ ಇದ್ದ ಬಳ್ಳೆ ಕ್ಯಾಂಪ್ ಬಳಿ ಅರ್ಜುನನ ಸ್ಮಾರಕ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಲಾಗಿದೆ. ಶಾಸಕ ಅನಿಲ್ ಚಿಕ್ಕಮಾದು ಅವರು ಮನವಿ ಯೊಂದನ್ನು ನೀಡಿ ದಸರಾ ವಸ್ತು ಪ್ರದರ್ಶ ನದಲ್ಲಿ ಅರ್ಜುನನ ಬಗ್ಗೆ ಮಾಹಿತಿ ಇರುವ ಕೇಂದ್ರ ನಿರ್ಮಿಸುವಂತೆ ಕೋರಿ ದ್ದಾರೆ. ಈ ಸಂಬಂಧ ಕ್ರಮ ಕೈಗೊಳ್ಳಲು ಸೂಚಿಸುತ್ತೇನೆ ಎಂದರು.

ಮುಡಾ ಪ್ರಕರಣ ದಸರಾ ಮೇಲೆ ಪರಿಣಾಮ ಬೀರಲ್ಲ

ಮೈಸೂರು, ಆ.21(ಎಂಟಿವೈ)– ಮುಡಾ ಪ್ರಕರಣ ದಸರಾದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ಈ ಪ್ರಕರಣ ದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಯಾವುದೇ ತಪ್ಪು ಮಾಡಿಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಸ್ಪಷ್ಟಪಡಿಸಿದ್ದಾರೆ.

ಗಜಪಯಣಕ್ಕೂ ಮುನ್ನ ಪತ್ರಕರ್ತ ರೊಂದಿಗೆ ಮಾತನಾಡಿದ ಅವರು, ಈ ಬಾರಿ ದಸರಾ ಮಹೋತ್ಸವವನ್ನು ವಿಜೃಂಭಣೆ ಯಿಂದ ಮಾಡುತ್ತೇವೆ. ಸರ್ಕಾರದ ಬಗ್ಗೆ ಅನುಮಾನವೇ ಬೇಡ ಎಂದರು.

ಬಿಜೆಪಿ–ಜೆಡಿಎಸ್ ನಾಯಕರು ಸರ್ಕಾರ ಬೀಳುತ್ತದೆ ಎಂದು ಚಾತಕ ಪಕ್ಷಿಗಳಂತೆ ಕಾಯುತ್ತಾ ಕುಳಿತಿದ್ದಾರೆ. ಅದೇನೋ ಬೀಳುತ್ತೇ ಎಂದು ನರಿ ಕಾಯುತ್ತಿರುತ್ತದೆ. ಆದರೆ, ಅದು ಬೀಳುವುದಿಲ್ಲ. ಅಲ್ಲದೆ, ಆನೆ ನಡೆಯುವುದನ್ನು ನಿಲ್ಲಿಸುವುದಿಲ್ಲ ಎಂದು ವಿರೋಧ ಪಕ್ಷಗಳಿಗೆ ಟಾಂಗ್ ನೀಡಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಸುಭದ್ರವಾಗಿದೆ. ಯಾಕೆ ಅಭದ್ರ ಆಗುತ್ತದೆ. ಅನುಮಾನವೇ ಬೇಡ ನಮ್ಮ ಸರ್ಕಾರ ಐದು ವರ್ಷ ಸುಭದ್ರವಾಗಿರುತ್ತದೆ ಎಂದರು.

ನಕ್ಕರೆ ಅದೇ ಸ್ವರ್ಗ

ಟೀಚರ್ : ವಾಸ್ಕೋಡಿಗಾಮ ಭಾರತಕ್ಕೆ ಯಾಕೆ ಬಂದ?
ಗುಂಡ : ನನ್ನ ಫೇಲ್ ಮಾಡೋಕೆ!

ಮೈಸೂರು ಮಿತ್ರ
ಗುರುವಾರ, 22 ಆಗಸ್ಟ್ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*


ಅಮೃತವಾಹಿನಿ.........

ಇನ್ನೊಬ್ಬರ ಬಗ್ಗೆ ಏನು ನಮಗೆ ತಿಳಿದಿದೆಯೋ ಅದನ್ನು ನಂಬಬೇಕೇ ಹೊರತು ಬೇರೆಯವರಿಂದ ಕೇಳಿದ್ದನ್ನಲ್ಲ. – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಪೀತಾಂಬರ ಉಟ್ಟರೂ ಕೊತ್ತಂಬರಿ ಮಾರೋದು ತಪ್ಪಲಿಲ್ಲ.

ನಿಮ್ಮ ಪತ್ರಗಳು

ವಸಂತನಗರ ಮುಖ್ಯರಸ್ತೆಯಲ್ಲಿ ಬೆಳೆಯುತ್ತಿದೆ ಒಂದು ಕಸದ ಬೆಟ್ಟ



ಮಾನ್ಯರೆ,

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಅಭಿವೃದ್ಧಿಪಡಿಸಿ ನಿವೇಶನಗಳನ್ನು ಹಂಚಿಕೆ ಮಾಡಿರುವ ಬಡಾವಣೆಯ ಹೆಸರು 'ವಸಂತನಗರ ಬಡಾವಣೆ'. ಈ ಬಡಾವಣೆಗೆ ಹೊಂದಿಕೊಂಡಂತೆ, ಪ್ರಾಧಿಕಾರದಿಂದ ಅನುಮೋದನೆ ಪಡೆದುಕೊಂಡು ನಿರ್ಮಿಸಿರುವ ಎಸ್‌ಪಿ ಹೋಲ್ಡಿಂಗ್ಸ್ ಬಡಾವಣೆ, ತುಳಸಿ ಬಡಾವಣೆ, ಶೋಭಾ ಎಸ್ಟೇಟ್ ಬಡಾವಣೆ ಮತ್ತೆ ಇನ್ನಿತರ ಬಡಾವಣೆಗಳು ಸೇರಿದಂತೆ ಸುಮಾರು 700–800 ಮನೆಗಳು ಬಡಾವಣೆಗಳಲ್ಲಿ ನಿರ್ಮಾಣವಾಗಿವೆ. ಈ ಎಲ್ಲಾ ಬಡಾವಣೆಗಳಲ್ಲಿ ವಾಸ ಮಾಡುತ್ತಿರುವ ನಿವಾಸಿಗಳು ಕಂದಾಯವನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಪಾವತಿ ಮಾಡುತ್ತಾ ಬಂದಿದ್ದಾರೆ. ಬಡಾವಣೆಗಳ ಮೂಲಸೌಕರ್ಯದ ಜವಾಬ್ದಾರಿ ಪ್ರಾಧಿಕಾರದ ಮೇಲೆ ಇರುತ್ತದೆ. ಆದಾಗ್ಯೂ ಕೂಡ ಪ್ರಾಧಿಕಾರವು ಸದರಿ ಬಡಾವಣೆಗಳಲ್ಲಿ ಇರುವ ಸಾರ್ವಜನಿಕ ಉಪಯೋಗಿ ಪಾರ್ಕ್, ರಸ್ತೆ, ಚರಂಡಿಗಳನ್ನು ನಿರ್ವಹಣೆ ಮಾಡದೆ ಉದಾಸೀನ ಮಾಡಿದೆ. ಅಲ್ಲದೆ ಬಡಾವಣೆಯಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ದಿನನಿತ್ಯದ ಕಸದ ವಿಲೇವಾರಿಗೂ ಕೂಡ ಯಾವುದೇ ವಾಹನವನ್ನು ಒದಗಿಸದ ಕಾರಣ ವಸಂತನಗರ ಮುಖ್ಯ ರಸ್ತೆಯ ಎರಡು ಬದಿಯಲ್ಲಿ ದಿನದಿಂದ ದಿನಕ್ಕೆ ಕಸದ ರಾಶಿ ಬೆಟ್ಟದಂತೆ ನಿರ್ಮಾಣವಾಗಿ ಸುತ್ತಮುತ್ತಲಿನ ಪರಿಸರವು ಹಾಳಾಗಿ ಸೊಳ್ಳೆ, ಹಂದಿಗಳು ಹೆಚ್ಚಾಗಿ ಅನೈರ್ಮಲ್ಯ ಉಂಟಾಗಿದೆ. ಇದರಿಂದ ಬಡಾವಣೆಗಳಲ್ಲಿ ವಾಸಿಸುತ್ತಿರುವ ನಾಗರಿಕರಿಗೆ ಮಾರಣಾಂತಿಕ ಕಾಯಿಲೆಗಳು ಬರುವ ಲಕ್ಷಣಗಳು ದೂರವಿರುವುದಿಲ್ಲ. ಆದ ಕಾರಣ ಸಂಬಂಧಪಟ್ಟ ಪ್ರಾಧಿಕಾರದ ಅಧಿಕಾರಿಗಳು ಇತ್ತ ಗಮನಹರಿಸಿ ತಮ್ಮ ಕರ್ತವ್ಯವನ್ನು ನಿರ್ವಹಿಸಿ ಸ್ವಚ್ಛತೆಯನ್ನು ಉಳಿಸಿ, ಶೀಘ್ರ ದಿನನಿತ್ಯದ ಕಸದ ವಿಲೇವಾರಿಗೆ ಸಂಬಂಧಪಟ್ಟ ಬಡಾವಣೆಗಳಿಗೆ ವಾಹನಗಳನ್ನು ಒದಗಿಸಲು ಕ್ರಮ ತೆಗೆದುಕೊಳ್ಳಬೇಕೆಂದು ಈ ಮೂಲಕ ಮನವಿ.

–ಎ.ಎಸ್.ಶಿವಪ್ರಕಾಶ್, ವಕೀಲರು, ಮೈಸೂರು

ದಡದಹಳ್ಳಿ ರಸ್ತೆ ಕಾಮಗಾರಿ ಆರಂಭ ಯಾವಾಗ?

ಮಾನ್ಯರೆ,

ಲೋಕಸಭಾ ಚುನಾವಣೆ ಘೋಷಣೆಗೆ ದಿನಾಂಕ ನಿಗದಿಯಾಗುತ್ತಿದ್ದಂತೆಯೇ ಒಂದು ದಿನ ಮುಂಚಿತವಾಗಿಯೇ ಚಾಮರಾಜನಗರ ಕ್ಷೇತ್ರದ ಶಾಸಕ ಸಿ.ಪುಟ್ಟರಂಗಶೆಟ್ಟಿ ಚಂದಕವಾಡಿ ಹೋಬಳಿ ವ್ಯಾಪ್ತಿಯಲ್ಲಿ ಮಾರ್ಚ್ 16ರಂದು ವಿವಿಧ ಕಾಮಗಾರಿಗೆ ಚಾಲನೆ ನೀಡಿದರು. ಅದರಲ್ಲಿ ದಡದಹಳ್ಳಿ ರಸ್ತೆಯು ಒಂದು.

ಶಾಸಕರು ದಡದಹಳ್ಳಿ ರಸ್ತೆ ಅಭಿವೃದ್ಧಿಗೆ ಏಳುಕೋಟಿ ಹಣ ಬಿಡುಗಡೆಯಾಗಿದೆ. ಈ ಕಾಮಗಾರಿಗೆ ಟೆಂಡರ್ ಸಹ ಕರೆಯಲಾಗಿದೆ ಎಂದು ತಿಳಿಸಿದರು. ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ 5 ತಿಂಗಳು ಕಳೆದರೂ ಇನ್ನು ಕಾಮಗಾರಿ ಆರಂಭವಾಗಿಲ್ಲ. ಈ ವಿಳಂಬ ನೋಡಿದರೆ ಚುನಾವಣಾ ಗಿಮಿಕ್ ಅನಿಸುತ್ತದೆ. ಚಂದಕವಾಡಿ ಮುಖ್ಯ ರಸ್ತೆಯಿಂದ ದಡದಹಳ್ಳಿ ಮಾರ್ಗ ಕುಂಬೇಶ್ವರ ಕಾಲೋನಿಗೆ ಸಂಪರ್ಕಿಸುವ ಈ ರಸ್ತೆ ಅಭಿವೃದ್ಧಿ ಕಂಡು ಇಪ್ಪತ್ತು ವರ್ಷಗಳೇ ಕಳೆದಿವೆ. ದೊಡ್ಡ ದೊಡ್ಡ ಗುಂಡಿ ಬಿದ್ದು ಮಳೆ ನೀರು ರಸ್ತೆಯಲ್ಲಿ ನಿಂತು ಗಬ್ಬೆದ್ದು ಹೋಗಿದೆ. ಇಷ್ಟಿದ್ದರೂ ನಾಲ್ಕು ಬಾರಿ ಶಾಸಕರಾಗಿರುವ ಪುಟ್ಟರಂಗಶೆಟ್ಟಿ ಇದರ ಬಗ್ಗೆ ಕಾಳಜಿ ತೋರಿಲ್ಲ. ವಾಹನ ಸವಾರರು ರಸ್ತೆ ಗುಂಡಿ ಬಿದ್ದಿದ್ದರಿಂದ ಎಡಕ್ಕೆ ಚಲಿಸಬೇಕೋ, ಬಲಕ್ಕೆ ಚಲಿಸಬೇಕೋ ಎನ್ನುವ ಗೊಂದಲಕ್ಕೆ ಒಳಗಾಗಿ ಈ ರಸ್ತೆಯಲ್ಲಿ ಹಲವಾರು ಅಪಘಾತಗಳೇ ನಡೆದು ಹೋಗಿವೆ. ಆಟೋದವರನ್ನು ಬಾಡಿಗೆಗೆ ಕರೆದರೆ ರಸ್ತೆ ಸರಿಯಿಲ್ಲ ಎಂದು ಬರುವುದಿಲ್ಲ. ಈ ರಸ್ತೆಯಲ್ಲಿ ಬಸ್ ಸಂಚಾರವು ವಿರಳ. ಇದರಿಂದ ಸಾರ್ವಜನಿಕರಿಗೆ, ಪ್ರಯಾಣಿಕರಿಗೆ ವಾಹನ ಸವಾರರಿಗೆ ತುಂಬಾ ತೊಂದರೆಯಾಗಿದ್ದು ಬೇಗ ರಸ್ತೆ ಕಾಮಗಾರಿ ಆರಂಭಿಸಲಿ ಎನ್ನುವುದು ನಮ್ಮ ಒತ್ತಾಯ.

–ದಡದಹಳ್ಳಿ ರಮೇಶ್, ಚಂದಕವಾಡಿ ಹೋಬಳಿ, ಚಾಮರಾಜನಗರ ಜಿಲ್ಲೆ.

ಅನಾಥರು ಇಲ್ಲಿ ಬದುಕಿದ್ದರೂ ಸತ್ತಂತೆ

ಮಾನ್ಯರೆ,

ಅನಾಥರ ಹೆಸರಿನಲ್ಲಿ ತೆರಿಗೆ ವಸೂಲಿ ಮಾಡುವ ನಗರಪಾಲಿಕೆ. ಆದರೆ ಅನಾಥರು ಬೀದಿನಾಯಿಗಿಂತ ಕೀಳಾಗಿದ್ದಾರೆ. ಮೈಸೂರಿನ ನಗರದ ಸುತ್ತಲೆಲ್ಲ ಅನಾಥರು ಹೆಚ್ಚಾಗುತ್ತಿದ್ದಾರೆ. ಅಗ್ರಹಾರದಲ್ಲಿ ಎಲ್ಲೆಂದರಲ್ಲಿ ಫುಟ್‌ಪಾತಿನಲ್ಲಿ ಮಲಗಿಕೊಂಡು ಭಿಕ್ಷೆ ಬೇಡಿ ಜೀವನ ಸಾಗಿಸುತ್ತಿದ್ದಾರೆ.

ಈ ಅನಾಥರು ಯಾವ ಊರಿಂದ ಬಂದಿದ್ದಾರೆ ಎಂದು ಯಾರೂ ಸಹ ಪ್ರಶ್ನೆ ಮಾಡುತ್ತಿಲ್ಲ. ಈಗಾಗಲೇ ಕಳೆದ ತಿಂಗಳಲ್ಲಿ ಒಬ್ಬ ಅನಾಥ ಸತ್ತಿದ್ದಾನೆ. ಈಗ ಮೂರು ಜನ ಅನಾಥರು ರೋಗದಿಂದ ಬಳಲುತ್ತಿದ್ದಾರೆ. ಒಬ್ಬನ ಕಾಲು ಕೊಳೆತು ಹೋಗಿದೆ. ನೊಣಗಳು ಮುತ್ತಿಕೊಂಡು ರೋಗಗಳು ಹರಡುತ್ತಿವೆ. ವಲಯ ಕಚೇರಿ ಅಧಿಕಾರಿಗಳು ಮತ್ತು ಆರೋಗ್ಯಾಧಿಕಾರಿಗಳು ಎಲ್ಲಿ ಹೋಗಿದ್ದಾರೆ? ವರ್ಷಕ್ಕೊಮ್ಮೆ ನಗರಪಾಲಿಕೆಯಿಂದ ಎಲ್ಲೆಲ್ಲಿ ಭಿಕ್ಷಾಟನೆ ಮಾಡುವವರು ಮತ್ತು ಅನಾಥರನ್ನು ಹುಡುಕಿ ಭಿಕ್ಷಾಟನೆ ಕೇಂದ್ರಗಳಿಗೆ ಸಾಗಿಸುತ್ತಾರೆ.

ವರ್ಷಕ್ಕೊಮ್ಮೆ ಈ ಯೋಜನೆಯನ್ನು ಮಾಡಿದರೆ ಈಗ ಬೀದಿಯಲ್ಲಿ ಬಿದ್ದಿರುವ ಅನಾಥರ ಗತಿ ಏನು? ಮೈಸೂರು ಸ್ವಚ್ಛ ನಗರಿ ಎಂದು ಪ್ರಥಮ ಸ್ಥಾನಕ್ಕೆ ಬರುವುದು ಯಾವಾಗ? ಈಗ ಮೈಸೂರಿನ ಪರಿಸ್ಥಿತಿ ಹೇಗಿದೆ ಎಂದರೆ "ಯಥಾ ರಾಜಕಾರಣಿ ತಥಾ ಅಧಿಕಾರಿ. ರಾಜಕಾರಣಿಗಳಿಗೆ ಮುಖ್ಯಮಂತ್ರಿಗಳ ಕುರ್ಚಿ ಕಡೆ ಜ್ಞಾನ, ಇದೇನಾ ನಮ್ಮೂರು ಮೈಸೂರು ಎನ್ನುವ ಪರಿಸ್ಥಿತಿ ಬಂದಿದೆ. ದಸರಾ ಹಬ್ಬಕ್ಕೆ ಊರೆಲ್ಲಾ ಶೃಂಗಾರ ಮಾಡಿದರೂ ಏನು ಪ್ರಯೋಜನ. ಮೇಲೆಲ್ಲಾ ತಳಕು ಒಳಗೆಲ್ಲ ಹುಳುಕು ಅನ್ನುವ ಹಾಗೆ. ಮಳೆ, ಬಿಸಿಲು, ಗಾಳಿ ಏನೇ ಬಂದರೂ ಈ ಅನಾಥರು ಬದುಕಿದ್ದು ಸತ್ತಂತೆ. ಕೂಡಲೇ ಇವರಿಗೆ ಆಶ್ರಯ ನೀಡದಿದ್ದರೆ ನಗರ ಪಾಲಿಕೆ ಮುಂದೆ ಪ್ರತಿಭಟನೆ ಮಾಡಬೇಕಾಗುತ್ತದೆ.

–ಎಸ್. ಬಾಲಕೃಷ್ಣ, ಅಧ್ಯಕ್ಷರು, ಮೈಸೂರು ಕನ್ನಡ ವೇದಿಕೆ



ಬಿಚ್ಚು ನುಡಿ

ವಿಕ್ರಂ ಮುತ್ತಣ್ಣ

ಸ್ವಾತಂತ್ರ್ಯ ದಿನ ಸಾರ್ಥಕ ದಿನವಾಗಲಿ!



ನಿಮಗೆ ಗೊತ್ತು, ಸರಿ ಸುಮಾರು 77 ವರ್ಷಗಳ ಹಿಂದೆ, ನಮ್ಮ ದೇಶದ ಭವಿಷ್ಯದ ಮೇಲಿನ ನಿಯಂತ್ರಣವನ್ನು ನಾವು ಪಡೆದು, ಅಂದಿನಿಂದ ಇಂದಿನವರೆಗೂ ಒಂದು ಪ್ರಜಾಸತ್ತಾತ್ಮಕ ಒಕ್ಕೂಟವಾಗಿ ಸಾಗಿ ಬಂದಿದ್ದೇವೆ. ಮೇಲ್ನೋಟಕ್ಕೆ ಇದು ಸಂಭ್ರಮಿಸುವ ಸಂದರ್ಭ. ಆದರೆ, ಹಣ ಮತ್ತು ಅಧಿಕಾರದ ವ್ಯಾಮೋಹದಡಿ ನಮ್ಮ ಪ್ರಜಾಪ್ರಭುತ್ವ ನಲುಗುತ್ತಿದೆ.

ಇತ್ತೀಚಿನ ರಾಜಕೀಯ ಘಟನಾವಳಿಗಳು, ಅಂದರೆ ಕಾಂಗ್ರೆಸ್ ಮತ್ತು ಭಾರತೀಯ ಜನತಾ ಪಕ್ಷಗಳು ಯಾತ್ರೆಗಳ ಮೂಲಕ ಪರಸ್ಪರ ಭ್ರಷ್ಟಾಚಾರದ ಆರೋಪಗಳನ್ನು ಮಾಡಿ, ಕೆಸರೆರಚಿಕೊಂಡಿದ್ದು, ಒಂದು ಕಟು ಸತ್ಯವನ್ನು ಅನಾವರಣಗೊಳಿಸಿದೆ. ಏನೇ ಹೇಳಿ, ನಮ್ಮ ನಾಯಕರೆಲ್ಲಾ ಲಜ್ಜೆಗೆಟ್ಟವರು!

ನಮ್ಮನ್ನು ಅತ್ಯಂತ ಹೆಚ್ಚಾಗಿ ಕಾಡುವ ಸಂಗತಿಯೆಂದರೆ, ಈ ನಾಯಕರು ತಮ್ಮನ್ನು ಚುನಾಯಿಸಿದ ನಮ್ಮನ್ನು ಅರ್ಥಾತ್ ಜನರನ್ನು ಪ್ರತಿಬಿಂಬಿಸುತ್ತಾರೆ.

ನಾವು ಸಹ ನಿಜವಾಗಿಯೂ ಲಜ್ಜೆಗೆಟ್ಟವರಂತೆ, ನಮ್ಮಲ್ಲಿ ಅಪರಾಧ ಭಾವನೆಯೂ ಇಲ್ಲದೆ, ಇತ್ತ ಆತ್ಮಸಾಕ್ಷಿ ಇಲ್ಲದವರಂತಾಗಿದ್ದೇವೆಯೇ?

ನಾವು ಆಯ್ಕೆ ಮಾಡಿರುವಂತಹ ನಾಯಕರನ್ನು ನೋಡಿದಾಗ ಮನಸ್ಸಿಲ್ಲದಿದ್ದರೂ ಹೌದು ಎನ್ನಲೇಬೇಕಾದ ದುರ್ಗತಿಗೀಡಾಗಿದ್ದೇವೆ.

ದೇಶದಲ್ಲಿ ರಾಜಕಾರಣಿಗಳು, ಅಧಿಕಾರಿ ವರ್ಗ ಹಾಗೂ ಉದ್ದಿಮೆದಾರರಷ್ಟೇ ಭ್ರಷ್ಟರು ಅನ್ನುವ ಹಾಗೆ ಬೊಟ್ಟು ಮಾಡಿ ತೋರಿಸುವುದು ಬಹಳ ಸುಲಭ. ಆದರೆ ಸತ್ಯ ಸಂಗತಿಯೆಂದರೆ, ಸಾಮಾನ್ಯ ಭಾರತೀಯನೂ ಈ ಕರ್ಮಕಾಂಡದ ಭಾಗವಾಗಿದ್ದಾನೆ.

2012ರಲ್ಲಿ ವಿಚಕ್ಷಣಾ ದಳದ ಮಾಜಿ ಮುಖ್ಯ ಆಯುಕ್ತರಾಗಿದ್ದ ಪ್ರತ್ಯುಶ್ ಸಿನ್ಹಾ ಅವರು ಅತ್ಯಂತ ಕಟು ಶಬ್ದಗಳಿಂದ ಒಂದು ಘೋಷಣೆ ಮಾಡಿದ್ದರು; ಶೇಕಡಾ 30ರಷ್ಟು ಭಾರತೀಯರು ಸಂಪೂರ್ಣ ಭ್ರಷ್ಟರಾಗಿದ್ದರೆ, ಶೇ.50ರಷ್ಟು ಭಾರತೀಯರು

> ದುರಂತವೆಂದರೆ, ಸ್ವಾತಂತ್ರ್ಯ ಗಳಿಸಿ 77 ವರ್ಷಗಳಾದರೂ, ನಮ್ಮಲ್ಲಿ ಈ ತಂತ್ರಗಾರಿಕೆ ಈಗಲೂ ಜೀವಂತವಾಗಿದೆ. ಅಚ್ಚರಿದಾಯಕ ಅಲ್ಲ... ಅಲ್ಲ... ಆತಂಕಕಾರಿ ಬೆಳವಣಿಗೆ ಅಂದರೆ ಈಗ ಭಾರತೀಯರು, ಭಾರತೀಯರ ವಿರುದ್ಧವೇ ಈ ತಂತ್ರಗಾರಿಕೆಯನ್ನು ಪ್ರಯೋಗಿಸುತ್ತಿರುವುದು.

ಅಪ್ರಾಮಾಣಿಕತೆಯ ಅಂಚಿನಲ್ಲಿದ್ದಾರೆ ಹಾಗೂ ಕೇವಲ 20ರಷ್ಟು ಜನ ಮಾತ್ರವೇ ಪ್ರಾಮಾಣಿಕರಾಗಿರಲು ಬಯಸುತ್ತಾರೆ.

ಇದು ನಿನ್ನೆ ಮೊನ್ನೆಯ ಅಥವಾ ಇತ್ತೀಚಿನ ಸಮಸ್ಯೆಯಲ್ಲ. ನಮ್ಮ ನೈತಿಕ ಮೌಲ್ಯಗಳು ಯಾವಾಗಲೂ ಬಾಗುವಂತಿವೆ. ಇದರಿಂದಾಗಿ ಪ್ರಭಾವ, ಲಂಚ ಮತ್ತು ದ್ರೋಹಗಳಿಗೆ ನಮ್ಮನ್ನು ಗುರಿಯಾಗಿಸುತ್ತಿದೆ. ನಮ್ಮ ಚರಿತ್ರೆಯೂ ಇಂತಹ ಉದಾಹರಣೆಗಳಿಂದಲೇ ತುಂಬಿದೆ.

ಭಾರತವನ್ನು ಬ್ರಿಟಿಷರು ಕೇವಲ ಮಿಲಿಟರಿ ಶಕ್ತಿಯಿಂದಲೇ ಮಾತ್ರವಲ್ಲದೆ, ಹಣದ ಮೂಲಕವೂ ಗೆದ್ದರು.

ಬಂಗಾಳದ ಕಮಾಂಡರ್ ಇನ್ ಚೀಫ್ ಆಗಿದ್ದ ಮೀರ್ ಜಾಫರನಿಗೆ ಲಂಚ ಕೊಡುವುದರ ಮೂಲಕ, ರಾಬರ್ಟ್ ಕ್ಲೈವ್ ಪ್ಲಾಸಿ ಕದನದಲ್ಲಿ ಜಯ ಗಳಿಸಿದ. ಇದು ಭಾರತದಲ್ಲಿ ಬ್ರಿಟೀಷರ ಅಧಿಪತ್ಯಕ್ಕೆ ನಾಂದಿ ಹಾಡಿತು.

ಲಂಚ ಮತ್ತು ದ್ರೋಹ ನಮ್ಮ ದೇಶದ ಚರಿತ್ರೆಯಲ್ಲಿ ಹಾಸುಹೊಕ್ಕಾಗಿದೆ. ಔರಂಗಜೇಬನು ಮರಾಠ ಕಮಾಂಡರುಗಳಿಗೆ ಲಂಚ ನೀಡಿದ್ದರಿಂದ ಹಿಡಿದು ಟಿಪ್ಪು ಸುಲ್ತಾನ್ ಬಲಗೈ ಬಂಟ, ಮೀರ್ ಸಾದಿಖ್‌ನಿಗೆ ಲಂಚ ನೀಡಿ ಟಿಪ್ಪುವಿನ ಸೋಲಿಗೆ ಕಾರಣವಾದ ಪ್ರಕರಣ ಭಾರತದ ಚರಿತ್ರೆಯ ಗತಿಯ ಮೇಲೆ ಸಾಕಷ್ಟು ಪ್ರಭಾವ ಬೀರಿದೆ.

ಬ್ರಿಟಿಷರ ಈಸ್ಟ್ ಇಂಡಿಯಾ ಕಂಪನಿಯು ಲಂಚ ಕೊಟ್ಟು ಗೆಲ್ಲುವ ಕಲೆಯನ್ನು ಕರಗತ ಮಾಡಿಕೊಂಡಿತ್ತು. ತದನಂತರ ಬ್ರಿಟಿಷ್ ರಾಜ್, ಧರ್ಮವನ್ನು ಬಳಕೆ ಮಾಡಿಕೊಂಡು ವಿಭಜಿಸಿ ಗೆಲ್ಲುವ ಕಲೆಯನ್ನು ಕೈವಶ ಮಾಡಿಕೊಂಡಿತ್ತು.

ದುರಂತವೆಂದರೆ, ಸ್ವಾತಂತ್ರ್ಯ ಗಳಿಸಿ 77 ವರ್ಷಗಳಾದರೂ, ನಮ್ಮಲ್ಲಿ ಈ ತಂತ್ರಗಾರಿಕೆ ಈಗಲೂ ಜೀವಂತವಾಗಿದೆ. ಅಚ್ಚರಿದಾಯಕ ಅಲ್ಲ... ಅಲ್ಲ... ಆತಂಕಕಾರಿ ಬೆಳವಣಿಗೆ ಅಂದರೆ ಈಗ ಭಾರತೀಯರು, ಭಾರತೀಯರ ವಿರುದ್ಧವೇ ಈ ತಂತ್ರಗಾರಿಕೆಯನ್ನು ಪ್ರಯೋಗಿಸುತ್ತಿರುವುದು.

ಆಧುನಿಕ ಭಾರತದಲ್ಲಿ ಚುನಾವಣೆಗಳನ್ನು ತತ್ವ–ಸಿದ್ಧಾಂತಗಳು, ಮೌಲ್ಯಗಳು, ಆದರ್ಶಗಳ ಮೂಲಕ ಗೆಲ್ಲುವುದಲ್ಲ, ಬದಲಿಗೆ ಜನರನ್ನು ವಿಭಜಿಸಿ, ಮತಗಳನ್ನು ಖರೀದಿಸುವ ಮೂಲಕ ಗೆಲ್ಲಲಾಗುತ್ತಿದೆ.

ಈ ವೇಳೆ ನಮ್ಮ ದೇಶದ ಘನತೆಯನ್ನು ಹರಾಜು ಹಾಕಿದಂತಹ ವಸಾಹತುಶಾಹಿ ಭಾರತದ ಒಂದು ಸಣ್ಣ ಕಥೆಯು ನನ್ನ ನೆನಪಿಗೆ ಬರುತ್ತಿದೆ. ಇದು, ಲೇಖಕ ಫ್ರಾನ್ಸಿಸ್ ಲಾಸ್‌ಸೆಲ್ಸ್ ಅವರ " ಭಾರತೀಯ ನ್ಯಾಯಾಧೀಶರೊಬ್ಬರ ನೆನಪುಗಳು" ಕೃತಿಯಲ್ಲಿ ದಾಖಲಾಗಿದೆ.

ಏಪ್ರಿಲ್, 1834ರಲ್ಲಿ ಲಾರ್ಡ್ ಮೆಕಾಲೆಯವರು ಊಟಿಗೆ ಭೇಟಿ ನೀಡಿದ್ದರು. ಅವರ ಅಡ್ಡ ಪಲ್ಲಕ್ಕಿ ಹೊರುವವರ ಪೈಕಿ ಓರ್ವ ಸ್ಥಳೀಯ ಯುವತಿಯನ್ನು ಮದುವೆಯಾಗುವುದಾಗಿ ಭರವಸೆ ನೀಡಿ, ಕೊನೆಗೆ ಅದರಂತೆ ನಡೆದುಕೊಳ್ಳಲಿಲ್ಲ.

ಮೆಕಾಲೆಯವರು ಅಲ್ಲಿಂದ ಹೊರಡುವ ಸಮಯ ಬಂದಾಗ, ಸ್ಥಳೀಕರು ರೊಚ್ಚಿಗೆದ್ದು, ತಮ್ಮ ಯುವತಿಯ ಮರ್ಯಾದೆ ಯನ್ನು ರಕ್ಷಿಸುವ ಪಣತೊಟ್ಟು, ಯಾತ್ರಿಕ ಜನರೊಂದಿಗೆ ಸಂಘರ್ಷಕ್ಕೆ ಇಳಿದರು.

ಪಲ್ಲಕ್ಕಿ ಹೊರುವವನು ತಮ್ಮ ಯುವತಿಯನ್ನು ಮದುವೆಯಾಗಿ, ಆಕೆಯನ್ನು ಜೊತೆಯಲ್ಲಿ ಕರೆದುಕೊಂಡು ಹೋಗಬೇಕೆಂಬುದು ಅವರ ಆಗ್ರಹವಾಗಿತ್ತು.

ಈ ವೇಳೆ ಹಿಂಸಾಚಾರ ಉಂಟಾಗಬಹುದೆಂಬುದನ್ನು ಅರಿತಂತಹ ಮೆಕಾಲೆ, ಗುಂಪಿನ ನಾಯಕನ ಜಿಲ್ಲಾ ಕಮಾಂಡಿಂಗ್ ಅಧಿಕಾರಿಯ ಕಚೇರಿಗೆ ಕರೆಸಿದ್ದರು. ಸ್ವಲ್ಪ ಹೊತ್ತಿನ ಮಾತುಕತೆಯ ನಂತರ, ಪಲ್ಲಕ್ಕಿಯನ್ನು ಹೊರುವವನು ಹಾಗೂ ನೆರೆದಿದ್ದ ಸ್ಥಳೀಯ ಗುಂಪು ಶಾಂತಿಯುತವಾಗಿ ಚದುರಿತು.

ಅಲ್ಲಿ ಏನು ಚರ್ಚೆ ನಡೆಯಿತು ಎಂದು ಕುತೂಹಲಿಗಳು ಕೇಳಿದಾಗ, ಆ ಗುಂಪಿನ ನಾಯಕ ಸಮಾಧಾನದಿಂದ ಎಲ್ಲರ ಮುಂದೆ ಹೇಳಿದ; 'ಮೆಕಾಲೆ ಸಾಹೇಬರು ತುಂಬಾ ಒಳ್ಳೆಯ ಮನುಷ್ಯ... ಅವರು ನಮಗೆ 100 ರೂ. ನೀಡಿದರು...!' –ಗೊತ್ತಾಯ್ತಾ... ಅವರು ತಮ್ಮ ಘನತೆ ಹಾಗೂ ಗೌರವವನ್ನು ಮಾರಿಕೊಂಡಿದ್ದರು.

ಸ್ವಾತಂತ್ರ್ಯ ಬಂದು 77 ವರ್ಷಗಳಾಯಿತು. ಹೇಳಿ, ಏನು ಬದಲಾವಣೆಯಾಗಿದೆ? ಏನಿಲ್ಲ. ಅಂದು ನಮ್ಮ ಮರ್ಯಾದೆಯನ್ನು ಬ್ರಿಟಿಷರಿಗೆ ಮಾರಿಕೊಂಡಿದ್ದೆವು. ಈಗ ನಮ್ಮವರಿಗೇ ನಮ್ಮ ಘನತೆ ಹಾಗೂ ಗೌರವವನ್ನು ಮಾರಿಕೊಳ್ಳುತ್ತಿದ್ದೇವೆ.

ಎಲ್ಲಿಯವರೆಗೆ ನಾವು, ಚಾರಿತ್ರ್ಯಹೀನ ಮತದಾರರಾಗಿ, ಸ್ವಾರ್ಥಪರ ಹಾಗೂ ಸುಲಭವಾಗಿ ಓಲೈಸಬಲ್ಲ ಜನರಾಗಿರುತ್ತೇವೆಯೋ, ಅಲ್ಲಿಯವರೆಗೆ ನಮ್ಮ ಪ್ರಜಾಪ್ರಭುತ್ವ ನಿಷ್ಕ್ರಿಯವಾಗಿರುತ್ತದೆ.

ನಮ್ಮ ದೇಶಭಕ್ತಿ ಕೂಡ ಸತ್ವವಿಲ್ಲದ್ದಾಗಿದ್ದು, ಕೇವಲ ರಾಷ್ಟ್ರಗೀತೆ ಹಾಡುವ ಇಲ್ಲವೇ ಗುನುಗುವುದಕ್ಕಷ್ಟೇ ಸೀಮಿತವಾಗಿರಲಿದೆ. ಹೆಚ್ಚೆಂದರೆ ಸ್ವಾತಂತ್ರ್ಯ ದಿನದಂದು ಮೊಬೈಲ್‌ನ ವಾಟ್ಸಾಪ್‌ಗಳಲ್ಲಿ ನಮ್ಮ ಡಿಪಿಗಳನ್ನು (display picture) ಹಾಕಿಕೊಳ್ಳುವುದಕ್ಕೆ ಮಾತ್ರ ಸೀಮಿತಗೊಂಡಿದೆ.

ಆದರೆ, ಈ ರೀತಿಯ ದೇಶಭಕ್ತಿ ಬರೀ ತೋರಿಕೆಯದ್ದಾಗಿದೆ. ನಾವು ನಮ್ಮ ಸ್ವಾರ್ಥ ಸಾಧನೆಗೆ ದೇಶವನ್ನು ಶೋಷಣೆ, ಲೂಟಿ ಮತ್ತು ನಾಶ ಮಾಡುವುದರಲ್ಲಿ ತೊಡಗಿದ್ದೇವೆ.

ಪ್ರಾಯಶಃ, ಸ್ವಾತಂತ್ರ್ಯ ದಿನ ರಜೆಯೇ ಇರಬಾರದು. ಬದಲಿಗೆ ಅದು ದೇಶದ ಜನರು ಓರ್ವ ನಾಗರಿಕರಾಗಿ ತಮ್ಮ ಮೂಲಭೂತ ಕರ್ತವ್ಯಗಳನ್ನು ನೆನಪಿಸಿಕೊಳ್ಳುವ ದಿನವಾಗಬೇಕು.

ಚಿತ್ರಮಂದಿರಗಳಲ್ಲಿ ರಾಷ್ಟ್ರಗೀತೆ ಹಾಕುವ ಬದಲು ಅಮಿತಾಬ್ ಬಚ್ಚನ್ ಅವರ ಏರು ಧ್ವನಿಯಲ್ಲಿ ನಮ್ಮ ಹತ್ತು ಮೂಲಭೂತ ಕರ್ತವ್ಯಗಳನ್ನು ಹೇಳಿಸಿದರೆ ಹೇಗಿರುತ್ತದೆ ಊಹಿಸಿಕೊಳ್ಳಿ.

ಹಾಗಾದಲ್ಲಿ ಮಾತ್ರ, ಮೂಲಭೂತ ಕರ್ತವ್ಯಗಳ ಪ್ರಾಮುಖ್ಯತೆ ನಮ್ಮ ಭ್ರಷ್ಟ ಮನಸ್ಸುಗಳಿಗೆ ತಾಕಬಹುದು ಹಾಗೂ ಮುಂದಿನ ಜನಾಂಗದವರ ನರ ನಾಡಿಗಳಲ್ಲಿ ಹರಿಯಬಹುದು ಎಂದು ಆಶಿಸೋಣ.

ಸದ್ಯಕ್ಕೆ, ನಮ್ಮ ದೇಶದ ಪ್ರಧಾನಮಂತ್ರಿಗಳು ಸ್ವಾತಂತ್ರ್ಯ ದಿನದಂದು ಮೊಬೈಲ್ ಕರೆಯ ಮೂಲಕ ಸ್ವಾತಂತ್ರ್ಯ ದಿನ ಒಂದು ಹಬ್ಬವಾಗಿದೆ ಎಂಬುದನ್ನು ನಮ್ಮ ಜ್ಞಾಪಕಕ್ಕೆ ತರುತ್ತಾರೆ. ಅವರು ಹೇಳುವುದು ಒಂದರ್ಥದಲ್ಲಿ ಸರಿ. ಹೇಗೆಂದರೆ, ಬೇರೆ ಯಾವುದೇ ಹಬ್ಬದಂತೆ ರಜೆಯನ್ನು ಸವಿಯಬಹುದು. ಆದರೆ ನಿಜವಾದ ಅರ್ಥದಲ್ಲಿ ಸ್ವಾತಂತ್ರ್ಯೋತ್ಸವದ ಮಹತ್ವಪೂರ್ಣ ಆಚರಣೆಯ ಮೂಲಕವಲ್ಲ.

ಕೊನೆ ಮಾತು: ಇತ್ತೀಚೆಗೆ ಕಾಂಗ್ರೆಸ್‌ನಂತೆ ದೇಶದ ಸಂವಿಧಾನದ ಹಿಂದೆ ಅಡಗಿ, ತಮ್ಮ ಸದ್ಗುಣಗಳನ್ನು ಹೇಳಿಕೊಂಡವರು ತಮ್ಮನ್ನು ತಾವೇ ಪ್ರಶ್ನಿಸಿಕೊಳ್ಳಬೇಕು. ಓರ್ವ ನಾಗರಿಕನಾಗಿ,

> ಸ್ವಾತಂತ್ರ್ಯ ಬಂದು 77 ವರ್ಷಗಳಾಯಿತು. ಹೇಳಿ, ಏನು ಬದಲಾವಣೆಯಾಗಿದೆ? ಏನಿಲ್ಲ. ಅಂದು ನಮ್ಮ ಮರ್ಯಾದೆಯನ್ನು ಬ್ರಿಟಿಷರಿಗೆ ಮಾರಿಕೊಂಡಿದ್ದೆವು. ಈಗ ನಮ್ಮವರಿಗೇ ನಮ್ಮ ಘನತೆ ಹಾಗೂ ಗೌರವವನ್ನು ಮಾರಿಕೊಳ್ಳುತ್ತಿದ್ದೇವೆ.

ಅದೇ ಸಂವಿಧಾನದಲ್ಲಿ ನಮೂದಿತವಾಗಿರುವ ಮೂಲಭೂತ ಕರ್ತವ್ಯಗಳನ್ನು ನೀವು ಪಾಲಿಸಿದ್ದೀರಾ? ಹೋಗಲಿ ನಿಮಗೆ ಗೊತ್ತಾ ಸಂವಿಧಾನದಲ್ಲಿರುವ ಹತ್ತು ಮೂಲಭೂತ ಕರ್ತವ್ಯಗಳಾವುವು ಎಂಬುದು. ಕೇಳಿ ಅವು;

(i) ಸಂವಿಧಾನವನ್ನು ಪಾಲಿಸುವುದು, ಅದರ ಆಶಯಗಳನ್ನು ಗೌರವಿಸುವುದು. ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು.

(ii) ಸ್ವಾತಂತ್ರ್ಯ ಹೋರಾಟಕ್ಕೆ ಸ್ಫೂರ್ತಿ ಕೊಟ್ಟ ಆದರ್ಶಗಳನ್ನು ಗೌರವಿಸುವುದು ಮತ್ತು ಪಾಲಿಸುವುದು.

(iii) ಭಾರತದ ಸಾರ್ವಭೌಮತ್ವ, ಅಖಂಡತೆ ಮತ್ತು ಏಕತೆಯನ್ನು ಎತ್ತಿ ಹಿಡಿಯುವುದು ಮತ್ತು ಕಾಪಾಡುವುದು.

(iv) ದೇಶವನ್ನು ರಕ್ಷಿಸುವುದು ಮತ್ತು ದೇಶಸೇವೆಗೆ ಸಿದ್ಧರಿರುವುದು.

(v) ವಿವಿಧ ಮತ–ಪಂಥ, ಭಾಷೆ ಮತ್ತು ಪ್ರಾಂತ್ಯಗಳ ಜನರೊಂದಿಗೆ ಸಹೋದರತ್ವ ಮತ್ತು ಸೌಹಾರ್ದದಿಂದ ಇರುವುದು; ಮಹಿಳೆಯರಿಗೆ ಅಗೌರವ ತೋರುವ ಪದ್ಧತಿಗಳನ್ನು ತಿರಸ್ಕರಿಸುವುದು.

(vi) ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು.

(vii) ದೇಶದ ಕಾಡು, ವನ್ಯಜೀವಿಗಳು, ನದಿಗಳು ಸೇರಿದಂತೆ ಪರಿಸರವನ್ನು ಉಳಿಸಿ ಬೆಳೆಸುವುದು.

(viii) ವೈಜ್ಞಾನಿಕ ಮನೋಧರ್ಮವನ್ನು ಬೆಳೆಸುವುದು; ಪ್ರಶ್ನೆ ಮಾಡುವ ಮತ್ತು ಬದಲಾವಣೆಗೆ ಒಡ್ಡಿಕೊಳ್ಳುವ ಮನಸ್ಥಿತಿ ಬೆಳೆಸಿಕೊಳ್ಳುವುದು.

(ix) ಸಾರ್ವಜನಿಕ ಸ್ವತ್ತನ್ನು ಕಾಪಾಡಿಕೊಳ್ಳುವುದು; ಹಿಂಸೆಯನ್ನು ತೊರೆಯುವುದು.

(x) ಎಲ್ಲಾ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿಯನ್ನು ಸಾಧಿಸಲು ಪ್ರಯತ್ನಿಸಿ ದೇಶದ ಪ್ರಗತಿಗಾಗಿ ಶ್ರಮಿಸುವುದು

Email:
vikram@starofmysore.com

ರಾಜ್ಯಪಾಲರಿಗೆ ಬುಲೆಟ್ ಪ್ರೂಫ್ ಕಾರು



ಬೆಂಗಳೂರು, ಆ.21– ಸಿಎಂ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ ಬೆನ್ನಲ್ಲೇ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ಬುಲೆಟ್ ಪ್ರೂಫ್ ಕಾರನ್ನು ಬಳಸಲು ಆರಂಭಿಸಿದ್ದಾರೆ.


ಮುಡಾ ಪ್ರಕರಣದಲ್ಲಿ ಸಿಎಂ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ ಬಳಿಕ ರಾಜ್ಯದಲ್ಲಿ ಕೆಲವು ಕಡೆ ಪ್ರತಿಭಟನೆಗಳು ನಡೆಯುತ್ತಿವೆ. ಈ ಪ್ರತಿಭಟನೆಯಿಂದಾಗಿ ರಾಜ್ಯಾಪಾಲರು ಎಚ್ಚರಿಕೆಯ ನಡೆಯನ್ನು ತೋರಿಸಿದ್ದಾರೆ.

ಇಷ್ಟು ದಿನ ಅವಕಾಶ ಇದ್ದರೂ ನಾರ್ಮಲ್ ಇನ್ನೋವಾ ಕಾರನ್ನು ಬಳಸುತ್ತಿದ್ದ ರಾಜ್ಯಪಾಲರು ಇದೀಗ ಬುಲೆಟ್ ಪ್ರೂಫ್ ಕಾರನ್ನು ಬಳಸಲು ಆರಂಭಿಸಿದ್ದಾರೆ. ರಾಜ್ಯಪಾಲರು ಅಧಿಕಾರ ಸ್ವೀಕರಿಸಿದಾಗಲೇ ಬುಲೆಟ್ ಪ್ರೂಫ್ ಕಾರಿನ ವ್ಯವಸ್ಥೆ ಮಾಡಲಾಗಿತ್ತು. ಆದರೆ ಆ ಕಾರನ್ನು ವಾಪಸ್ ಕಳುಹಿಸಿದ್ದರು. ಈಗ ಮತ್ತೆ ಗುಪ್ತಚರ ಇಲಾಖೆಯಿಂದ ಸೂಚನೆ ಬಂದ ನಂತರ ಬುಲೆಟ್ ಪ್ರೂಫ್ ಕಾರಿನ ವ್ಯವಸ್ಥೆ ಮಾಡಲಾಗಿದೆ.

ಶನಿವಾರ ಮಧ್ಯಾಹ್ನ ಇಂದೋರ್‌ಗೆ ತೆರಳಿದ್ದ ರಾಜ್ಯಪಾಲರು ಮಂಗಳವಾರ ರಾತ್ರಿ ವಾಪಸಾಗಿದ್ದಾರೆ. ಇಂದು ನಡೆಯಬೇಕಿದ್ದ ಸಾರ್ವಜನಿಕ ಕಾರ್ಯಕ್ರಮವೊಂದು ಸೇರಿ ಆ.29ರ ತನಕ ಪೂರ್ವ ನಿಗದಿಯಾಗಿದ್ದ ಎಲ್ಲಾ ಸಾರ್ವಜನಿಕ ಕಾರ್ಯಕ್ರಮಗಳನ್ನು ರದ್ದುಗೊಳಿಸಲಾಗಿದೆ.

ಪ್ರಧಾನಿ ಮೋದಿ ಸ್ಥಾನ ಕಳೆದುಕೊಳ್ಳಲಿದ್ದಾರೆ

ಸುಬ್ರಮಣಿಯನ್ ಸ್ವಾಮಿ ಎಚ್ಚರಿಕೆ



ನವದೆಹಲಿ, ಆ.21– 75 ವರ್ಷ ದಾಟಿದ ನಾಯಕರನ್ನು ಸಕ್ರಿಯ ರಾಜಕಾರಣದಿಂದ ದೂರ ಇರಿಸುವ ಪರಿಪಾಟವು ಬಿಜೆಪಿಯಲ್ಲಿ ಇದೆ.

ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿ ಇದನ್ನೇ ಉಲ್ಲೇಖ ಮಾಡಿರುವ ಬಿಜೆಪಿ ನಾಯಕ ಸುಬ್ರಮಣಿಯನ್ ಸ್ವಾಮಿ, ಆರ್‌ಎಸ್‌ಎಸ್ ಪ್ರಚಾರಕ ಸಂಸ್ಕಾರಕ್ಕೆ ಬದ್ಧರಾಗಿ ನರೇಂದ್ರ ಮೋದಿ ಅವರು ಸೆಪ್ಟೆಂಬರ್ 17ರಂದು ತಮ್ಮ 75ನೇ ಹುಟ್ಟುಹಬ್ಬದ ನಂತರ ನಿವೃತ್ತಿ ಘೋಷಿಸದಿದ್ದರೆ, ಇತರೆ ವಿಧಾನಗಳಿಂದ ಅವರು ಪ್ರಧಾನಿ ಸ್ಥಾನ ಕಳೆದುಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.

75 ವರ್ಷ ತುಂಬಿದ ಮೇಲೆ ಸಕ್ರಿಯ ರಾಜಕಾರಣದಿಂದ ದೂರ ಸರಿದ ಬಿಜೆಪಿಯ ಕೆಲವು ನಾಯಕರ ಉದಾಹರಣೆಗಳಿವೆ. ಆದರೆ ಸಕ್ರಿಯ ರಾಜಕಾರಣದಿಂದ ನಿವೃತ್ತಿಯಾಗಬೇಕು ಎಂದು ಪಕ್ಷವು ಎಲ್ಲೂ ಅಧಿಕೃತವಾಗಿ ಹೇಳಿಕೊಂಡಿಲ್ಲ.

ಮೋದಿಗೆ 75 ವರ್ಷ ತುಂಬಿದ ಬಳಿಕ ಅಮಿತ್ ಶಾ ಮುಂದಿನ ಪ್ರಧಾನಿ ಆಗಲಿದ್ದಾರೆ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಲೋಕಸಭೆ ಚುನಾವಣೆ ವೇಳೆ ಹೇಳಿಕೆ ನೀಡಿದ್ದರು. ಆದರೆ ಬಿಜೆಪಿಯಲ್ಲಿ ಇಂತಹದೊಂದು ನಿಯಮವಿಲ್ಲ ಎಂದು ಅಮಿತ್ ಶಾ ಸ್ಪಷ್ಟನೆ ಕೊಟ್ಟಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ರಾಜ್ಯದ 10 ನದಿಗಳು ಮಲಿನ: ಎನ್‌ಜಿಟಿಗೆ ಪ್ರಮಾಣಪತ್ರ

ನವದೆಹಲಿ, ಆ.21– ನಗರ ಮತ್ತು ಪಟ್ಟಣ ಪ್ರದೇಶಗಳ ಒಳಚರಂಡಿ ನೀರು ಹಾಗೂ ಆಯಾ ಜಲಾನಯನ ಪ್ರದೇಶಗಳಲ್ಲಿನ ಕೈಗಾರಿಕೆಗಳ ತ್ಯಾಜ್ಯ ಸೇರುತ್ತಿರುವುದರಿಂದ ರಾಜ್ಯದ 10 ನದಿಗಳು ಕಲುಷಿತಗೊಂಡಿವೆ ಎಂದು ಕರ್ನಾಟಕ ಸರ್ಕಾರವೇ ಒಪ್ಪಿಕೊಂಡಿದೆ. ರಾಜ್ಯದ ನದಿಗಳು ಮಲಿನಗೊಂಡಿರುವ ಕುರಿತು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ನಡೆಸುತ್ತಿರುವ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಗೆ (ಎನ್‌ಜಿಟಿ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು (ಕೆಎಸ್‌ಪಿಸಿಬಿ) ಈ ಸಂಬಂಧ ಪ್ರಮಾಣಪತ್ರ ಸಲ್ಲಿಸಿದೆ.

ರಾಜ್ಯದ 17 ನದಿಗಳು ಕಲುಷಿತಗೊಂಡಿವೆ ಎಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು (ಸಿಪಿಸಿಬಿ) 2022ರಲ್ಲಿ ಜಲಶಕ್ತಿ ಸಚಿವಾಲಯಕ್ಕೆ ವರದಿ ಸಲ್ಲಿಸಿತ್ತು. 'ಶರಾವತಿ, ಗಂಗಾವಳಿ, ಅಘನಾಶಿನಿ, ಕೃಷ್ಣಾ, ಕಾಗಿನ ಹಾಗೂ ನೇತ್ರಾವತಿ ನದಿಗಳಲ್ಲಿ ಕರಗಿದ ಆಮ್ಲಜನಕದ (ಬಿಒಡಿ) ಪ್ರಮಾಣ 3 ಮಿಲಿಗ್ರಾಂ/ಲೀಟರ್ ದಾಟಿದ್ದು, ಹೀಗಾಗಿ, ಈ ನದಿಗಳನ್ನು ಕಲುಷಿತ ನದಿಗಳ ಪಟ್ಟಿಯಿಂದ ಕೈಬಿಡಬೇಕು.

ಒಂದನೇ ಪುಟದಿಂದ

ಇನ್ನೂ 50 ತನಿಖೆಯಾಗಿಲ್ಲ

ನಾನು ಕೂಡ ಕಾನೂನಾತ್ಮಕವಾಗಿಯೇ ಹೋರಾಟ ಮಾಡುತ್ತೇನೆ. ಸಾಯಿ ವೆಂಕಟೇಶ್ವರ ಮಿನರಲ್ಸ್ ವಿಚಾರದಲ್ಲಿ ನಾನು ಲೀಗಲ್ ಫೈಟ್ ಮಾಡುತ್ತೇನೆ. ಇಂತಹ ಪರಿಸ್ಥಿತಿಗಳಲ್ಲಿ ಕಾನೂನು ಮೊರೆ ಹೋಗಲೇಬೇಕು. ನೆಲದ ಕಾನೂನಿಗೆ ನಾವು ತಲೆಬಾಗಲೇಬೇಕು ಎಂದರು.

ವಕೀಲರೆಂದು ಹೇಳಿಕೊಳ್ಳುವ ಸಿದ್ದರಾಮಯ್ಯ, ತಲೆ ಬುಡ ತಿಳಿಯದ ಕಾನೂನು ತಜ್ಞರ ಸಲಹೆ ಪಡೆದು ಇಲ್ಲದ್ದನ್ನು ಮೈ ಮೇಲೆ ಎಳೆದುಕೊಳ್ಳುತ್ತಿದ್ದಾರೆ.

ನಾನೇನು ಕಾನೂನು ತಜ್ಞನಲ್ಲ. ಆದರೆ, ಅದರ ಅರಿವು ಮತ್ತು ಗಂಧ ತಿಳಿದಿದ್ದೇನೆ. ನನಗೆ ದಕ್ಕಿದ ಅಧಿಕಾರವನ್ನು ಇವರಂತೆ ಮಾರಿಕೊಂಡಿಲ್ಲ ಎಂದು ಪತ್ರಿಕಾಗೋಷ್ಠಿಯಲ್ಲಿ ಗುಡುಗಿದರು. ನನ್ನ ಮೇಲೆ ಇನ್ನೂ ನೂರು ಆರೋಪ ಮಾಡಲಿ ಹೆದರುವುದೂ ಇಲ್ಲ, ಅಂಜುವುದೂ ಇಲ್ಲ. ಅವರ ರೀತಿ ಶಾಸಕರ ರಕ್ಷಣೆ ಪಡೆಯುವುದಿಲ್ಲ. ಏಕಾಂಗಿ ಹೋರಾಟ ಮಾಡುತ್ತೇನೆ. ಅವರಿಗೆ ನನ್ನನ್ನು ಬಂಧಿಸಲೇಬೇಕು ಎಂಬ ಹಟ ತೊಟ್ಟಂತಿದೆ. ಅದಕ್ಕೆ ಹೆದರುವುದೂ ಇಲ್ಲ. ಇವರಂತೆ ಅಧಿಕಾರಕ್ಕೆ ಅಂಟಿಕೊಂಡು ಕೂರುವುದಿಲ್ಲ ಎಂದು ವಾಗ್ದಾಳಿ ನಡೆಸಿದರು.

ಎರಡು ಬಾರಿ ಮುಖ್ಯಮಂತ್ರಿಯಾಗಿ ಅನೇಕ ತಪ್ಪುಗಳನ್ನು ಎಸಗಿದ್ದಾರೆ. ಮೇಲ್ನೋಟಕ್ಕೆ ನನಗೆ ಯಾವುದೇ ಕಪ್ಪು ಚುಕ್ಕೆ ಇಲ್ಲ ಎಂದು ಹೇಳಿಕೊಳ್ಳುತ್ತಾರೆ. ಇವರ ವಿರುದ್ಧ ಲೋಕಾಯುಕ್ತದಲ್ಲಿ 61 ಪ್ರಕರಣ ದಾಖಲಾಗಿದ್ದು, ಇನ್ನೂ 50 ಪ್ರಕರಣಗಳ ತನಿಖೆಯಾಗಿಲ್ಲ.

ಲೋಕಾಯುಕ್ತ ಸಂಸ್ಥೆ ಇದ್ದರೆ ತನಗೆ ಎಂದಾದರೂ ಕಂಟಕ ಎದುರಾಗುತ್ತದೆ ಎಂದು ಅಂದಿನ ಲೋಕಾಯುಕ್ತ ಭಾಸ್ಕರ್ ರಾವ್ ಅವರ ಮೇಲೆ ಇಲ್ಲಸಲ್ಲದ ಆರೋಪ ಹೊರಿಸಿ ಆ ಸಂಸ್ಥೆಯನ್ನು ಮುಚ್ಚಿ, ಎಸಿಬಿ ಕಟ್ಟಿದರು. ಎಸಿಬಿಯ ಮೂಲಕ ತಮ್ಮ ಮೇಲಿದ್ದ ಎಲ್ಲಾ ಆರೋಪಗಳಿಗೂ ಮುಕ್ತಿ ದೊರಕಿಸಿಕೊಂಡು ಸಿದ್ದರಾಮಯ್ಯ ಅವರ ಬಟ್ಟೆಯ ಮೇಲೆ ಒಂದು ಕಪ್ಪು ಚುಕ್ಕೆ ಇಲ್ಲದಂತೆ ಮಾಡಿಕೊಂಡರು. ಇದು ಅವರು ಮಾಡಿರುವ ಘನಂಧಾರಿ ಕೆಲಸ ಎಂದು ಹರಿಹಾಯ್ದರು.

ಬೇಲಿಕೇರಿ ಅದಿರು ಕದ್ದ ಆರೋಪ ಹೊತ್ತವರಿಗೆ 2015ರಲ್ಲಿ ಗಣಿಗಾರಿಕೆಗೆ ಅನುಮತಿಯನ್ನು ಸಿದ್ದರಾಮಯ್ಯ ಅವರೇ ನೀಡಿಲ್ಲವೇ ಎಂದು ಅದರ ಬಗ್ಗೆ ದಾಖಲೆ ತೆಗೆದುಕೊಳ್ಳಿ ಎಂದು ಪ್ರದರ್ಶಿಸಿದರು.

ಇದು ದೊಡ್ಡ ಬ್ರಹ್ಮಾಂಡ ಹಗರಣ. ಇದನ್ನು ನಾನು ಹೊರಗೆ ತೆಗೆದು ತೋರಿಸಿದರೆ, ರಾತ್ರಿಯೇ ಬಿಳಿ ಬಣ್ಣ ಬಳಿದು ಪ್ರಕರಣ ಮುಚ್ಚಿ ಹಾಕುತ್ತಾರೆ. ಮುಂದೆ ಎಲ್ಲವನ್ನೂ ಬಹಿರಂಗಪಡಿಸುತ್ತೇನೆ.

ಕಾನೂನಿನ ಅರಿವಿಲ್ಲದವರು ನಿಮ್ಮ ಮನೆ ಬಾಗಿಲು ಕಾಯುವ ಅಧಿಕಾರಿಗಳನ್ನು ಕೂರಿಸಿಕೊಂಡು ನನ್ನನ್ನು ಹಣಿಯಲು ಪ್ರಯತ್ನಿಸುತ್ತೀರಾ? ಇದು ಈ ಜನ್ಮದಲ್ಲಿ ಸಾಧ್ಯವಿಲ್ಲ. ಇಂಥವುಗಳು ಮುಂದೆ ನಡೆಯುತ್ತವೆ ಎಂಬ ಉದ್ದೇಶದಿಂದ ಲೋಡುಗಟ್ಟಲೆ ದಾಖಲೆಗಳನ್ನು ಇಟ್ಟುಕೊಂಡಿದ್ದೇನೆ. ಶ್ರೀ ಸಾಯಿ ವೆಂಕಟೇಶ್ವರ ಮಿನರಲ್ಸ್ ಅದೊಂದು ಬೋಗಸ್ ಕಂಪನಿ. ಅಂಥವನಿಗೆ ನ್ಯಾಯಾಲಯದಲ್ಲೇ ಶಿಕ್ಷೆಯಾಗಿದೆ. ಇಂತಹ ಫ್ರಾಡ್ ಕಂಪನಿಗೆ ನಾನು ಅನುಮತಿ ನೀಡುತ್ತೇನೆಯೇ? ನನ್ನ ಬರವಣಿಗೆ, ಸಹಿಯಿಲ್ಲದ ದಾಖಲೆ ಸೃಷ್ಟಿಸಿದ್ದಾರೆ. ಆದರೆ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಎಲ್ಲಾ ದಾಖಲೆಗಳು ನನ್ನ ಬಳಿ ಇವೆ. ನನ್ನ ಬಳಿ ಇರುವ ದಾಖಲೆಗಳು ಸರ್ಕಾರ ಮತ್ತು ಎಸ್‌ಐಟಿ ಬಳಿಯೂ ಇರುವುದಿಲ್ಲ.

ನಾನೇ ಈ ಪ್ರಕರಣವನ್ನು ಅಂದು ಲೋಕಾಯುಕ್ತಕ್ಕೆ ನೀಡಿದೆ. ನಂತರ ಸುಪ್ರೀಂಕೋರ್ಟ್ ಮೊರೆ ಹೋಗಿದ್ದೆ. ಈ ಬಗ್ಗೆ ತನಿಖೆ ನಡೆಸಿ ಮೂರು ತಿಂಗಳಲ್ಲಿ ವರದಿ ನೀಡುವಂತೆ ಎಸ್‌ಐಟಿಗೆ 2017ರಲ್ಲೇ ಆದೇಶ ನೀಡಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖಾ ವರದಿ ನ್ಯಾಯಾಲಯಕ್ಕೆ ಸಲ್ಲಿಸಬೇಕು. ನಾವು ಆ ಬಗ್ಗೆ ಮುಂದಿನ ತೀರ್ಮಾನ ಕೈಗೊಳ್ಳುತ್ತೇವೆ ಎಂದು ಹೇಳಿದೆ.

ಹಿಂದೆ ಇವರು ಅಧಿಕಾರದಲ್ಲಿದ್ದಾಗ ಎಸ್‌ಐಟಿ ರಚನೆ ಮಾಡಿ ಅಂದೂ ಕೂಡ ಸಿದ್ದರಾಮಯ್ಯ ಬಂಧಿಸುವ ಹುನ್ನಾರ ನಡೆಸಿದರು. ನಂತರ ನನ್ನ ಮನೆ ಬಾಗಿಲಿಗೆ ಬಂದು ಮುಖ್ಯಮಂತ್ರಿ ಮಾಡಿದರು.

ಎರಡನೇ ಬಾರಿ ಮುಖ್ಯಮಂತ್ರಿಯಾದ ನಂತರ ಈ ಸರ್ಕಾರದ ವಿರುದ್ಧ ವರ್ಗಾವಣೆ ಸೇರಿದಂತೆ ಅನೇಕ ಭ್ರಷ್ಟಾಚಾರ ಹಗರಣ ಬಯಲಿಗೆ ಎಳೆದಿರುವುದನ್ನು ಸಹಿಸಿಕೊಳ್ಳದೇ ಸೇಡು ತೀರಿಸಿಕೊಳ್ಳಲು ಮತ್ತೆ ಪ್ರಕರಣಕ್ಕೆ ಚಾಲನೆ ನೀಡಿದರು.

ಸುಪ್ರೀಂಕೋರ್ಟಿನ ಆದೇಶದಂತೆ ಪ್ರಕರಣದ ಬಗ್ಗೆ ತನಿಖೆ ನಡೆಸಿ ಎಸ್‌ಐಟಿ ಏಕೆ ಇದುವರೆಗೆ ವರದಿ ನೀಡಿಲ್ಲ. ಅದನ್ನು ಬಿಟ್ಟು ದಿನ ನಿತ್ಯ ಮಾಧ್ಯಮಗಳಲ್ಲಿ ಹೆದರಿಸುವ ಕೆಲಸ ಮಾಡುತ್ತಿದ್ದಾರೆ. ಅಷ್ಟೇ ಅಲ್ಲ ರಾಜ್ಯಪಾಲರನ್ನು ಮನಬಂದಂತೆ ನಿಂದಿಸುತ್ತಿದ್ದಾರೆ. ನಾನು ಇವರಂತೆ ಅಧಿಕಾರಕ್ಕೆ ಅಂಟಿಕೊಂಡು ಕೂರುವು ದಿಲ್ಲ. ಈಗಲೇ ಕೇಂದ್ರ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುವೆ. ಇವರಂತೆ ಅಧಿಕಾರಕ್ಕಾಗಿ ಶಾಸಕರ ಮೊರೆ ಹೋಗುವುದಿಲ್ಲ ಎಂದು ಹೇಳಿದರು.

ಒಬ್ಬ ಪೊಲೀಸ್ ಕಾನ್‌ಸ್ಟೇಬಲ್ ಸಾಕು

ಕಾರಣಕ್ಕಾಗಿ ಇಂದು ಪತ್ರಿಕಾಗೋಷ್ಠಿಯನ್ನು ಮಾಡಿದ್ದಾರೆ. ಪ್ರಕರಣದ ಸಮಗ್ರ ತನಿಖೆಗೆ ಆಯೋಗವನ್ನು ರಚಿಸಲಾಗಿದ್ದು, ಸತ್ಯ ಹೊರಬೀಳುತ್ತದೆ. ಕುಮಾರಸ್ವಾಮಿ ಹೇಳುವುದು ಸತ್ಯವೇ ಎಂಬುವುದು ತನಿಖೆಯಿಂದ ಸ್ಪಷ್ಟವಾಗಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದರು. ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ನನ್ನ ವಿರುದ್ಧ ಯಾವುದೇ ವಿಚಾರಣೆ ನಡೆದಿಲ್ಲ, ವರದಿಯಾಗಲಿ, ಪತ್ರವಾಗಲೀ ಅಥವಾ ಆದೇಶವಾಗಲೀ ಇಲ್ಲ. ಆ ಅವಧಿಯಲ್ಲಿ ಪ್ರಭಾವ ಬೀರಲು ನಾನು ಸಿಎಂ ಅಥವಾ ಮಂತ್ರಿಯಾಗಿರಲಿಲ್ಲ. ಕುಮಾರಸ್ವಾಮಿಯವರು ಯಾವತ್ತಿದ್ದರೂ ಹಿಟ್ ಅಂಡ್ ರನ್ ಮಾಡುವವರು, ವಿಧಾನಸಭಾ ಅಧಿವೇಶನ ಸಂದರ್ಭದಲ್ಲಿ ತನ್ನ ಬಳಿ 'ಪೆನ್ ಡ್ರೈವ್' ಇದೆ ಎಂದರು. ಆದರೆ ಅವರು ಇದುವರೆಗೆ ಮಾಡಿರುವ ಯಾವುದೇ ಆರೋಪಗಳಿಗೆ ತಾರ್ಕಿಕ ಅಂತ್ಯ ಕಂಡಿಲ್ಲ. ತನ್ನ ಬಳಿ ದಾಖಲೆಗಳಿವೆ ಎನ್ನುವ ಕುಮಾರಸ್ವಾಮಿಯವರು, ಅವುಗಳನ್ನು ಬಿಡುಗಡೆ ಮಾಡಬೇಕು.

ಸಿದ್ದರಾಮಯ್ಯನವರು ದಾಖಲಾತಿಗಳನ್ನು ತಿದ್ದಿದ್ದಾರೆ ಎಂದು ಕುಮಾರಸ್ವಾಮಿಯವರು ಆರೋಪಿಸಿರುವ ಬಗ್ಗೆ ಉತ್ತರಿಸಿ, ನಾನು ಯಾವುದೇ ದಾಖಲಾತಿಗಳನ್ನು ತಿದ್ದಿಲ್ಲ. 2014 ರ ಪತ್ರದ ಮೇಲೆ ನಿವೇಶನ ಹಂಚಿಕೆಯಾಗಿಲ್ಲ. 2021ರಲ್ಲಿ ಸಲ್ಲಿಸಿದ ಪತ್ರದ ಮೇಲೆ ನಿವೇಶನ ಹಂಚಿಕೆಯಾಗಿದೆ. ಅಂದು ಮುಡಾ ಮಂಡಳಿ ಅಧ್ಯಕ್ಷರಾಗಿದ್ದವರು ಬಿಜೆಪಿಯವರು. ಆಗ ಮಂಡಳಿಯಲ್ಲಿದ್ದವರು ಬಿಜೆಪಿ ಹಾಗೂ ಜೆಡಿಎಸ್‌ನವರು, ಆಗ ಆದ ನಿವೇಶನ ಹಂಚಿಕೆಗೆ ಯಾರು ಜವಾಬ್ದಾರರು. ಈ ಬಗ್ಗೆ ಆಯೋಗವನ್ನು ರಚಿಸಲಾಗಿದ್ದು, ತನಿಖಾ ವರದಿ ಬಂದ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದರು.

ಬರೋಬ್ಬರಿ 64 ನಿವೇಶನ ಮಂಜೂರು

ಪತ್ರವನ್ನು ನೋಂದಾಯಿಸಿದ್ದಾರೆ.

ಜಿಪಿಎ ಪ್ರತಿನಿಧಿಗಳಿಗೆ ಕ್ರಯಪತ್ರ: ಜಿಪಿಎ ಪ್ರತಿನಿಧಿಗಳಾದ ಕೆ. ಮಹದೇವಪ್ಪ ಅವರ ಮಗ ಎಂ. ಬಸವರಾಜು ಹಾಗೂ ಎಂ. ವೆಂಕಟಶೆಟ್ಟಿ ಮಗ ವಿ. ಸತೀಶ್ ಅವರಿಗೆ ಮುಡಾ ಆಯುಕ್ತರ ಆದೇಶದ ಮೇರೆಗೆ ವಿಶೇಷ ತಹಸೀಲ್ದಾರ್‌ರು 2023ರ ಅಕ್ಟೋಬರ್ 6ರಂದು ಮಂಜೂರಾಗಿರುವ ನಿವೇಶನಗಳ ಪೈಕಿ ಕುವೆಂಪುನಗರ 'ಕೆ' ಬ್ಲಾಕ್ 2223/ಎ ನಿವೇಶನವನ್ನು (ಇದು ಒಂದು ನಿದರ್ಶನವಷ್ಟೆ) ಶುದ್ಧ ಕ್ರಯಪತ್ರ (ಕ್ಲಿಯರ್ ಟೈಟಲ್ ಡೀಡ್) ನೀಡಿ ಅದೇ ದಿನ ಮುಡಾ ಕಚೇರಿ ಹೆಚ್ಚುವರಿ ಜಿಲ್ಲಾ ನೋಂದಣಾಧಿಕಾರಿ ಕಚೇರಿಯಲ್ಲಿ ನೋಂದಣಿ ಮಾಡಿಕೊಟ್ಟಿದ್ದಾರೆ.

ಕೇವಲ 3 ಸಾವಿರ ರೂ. ಪಾವತಿ: ಕ್ರಯಪತ್ರ ನೀಡುವಾಗ ಮುಡಾ ಅಧಿಕಾರಿಗಳು ಜಿಪಿಎ ಪ್ರತಿನಿಧಿಗಳಿಂದ ಸಾಂಕೇತಿಕವಾಗಿ ಕೇವಲ 3,000 ರೂ.ಗಳನ್ನು ಮಾತ್ರ ಸಂದಾಯ ಮಾಡಿಸಿಕೊಂಡಿದ್ದಾರೆಂಬುದು ಕ್ರಯಪತ್ರದಿಂದ ತಿಳಿದುಬಂದಿದೆ.

ಬೆಲವತ್ತ ಭೂಮಿಗೆ ಕುವೆಂಪುನಗರದಲ್ಲಿ ಸೈಟು: ಮೈಸೂರು ತಾಲೂಕು ಬೆಲವತ್ತ ಬಳಿಯ ಜಮೀನಿಗೆ ಬದಲಾಗಿ ಮೈಸೂರಿನ ಪ್ರತಿಷ್ಠಿತ ಬಡಾವಣೆಗಳಲ್ಲಿ ಅಭಿವೃದ್ಧಿಪಡಿಸಿರುವ ಕೋಟ್ಯಾಂತರ ರೂ. ಮೌಲ್ಯದ ನಿವೇಶನಗಳನ್ನು ಮುಡಾ ಆಯುಕ್ತರು ಕಳ್ಳೇಪುರಿಯಂತೆ ಹಂಚಿದ್ದಾರೆ. ಮೂಲ ಮಾಲೀಕರಿಗೆ ಬದಲಾಗಿ ಜಿಪಿಎ ಪ್ರತಿನಿಧಿಗಳಿಗೆ ಈ ಪ್ರಕರಣದಲ್ಲಿ ಎಲ್ಲಾ 64 ನಿವೇಶನಗಳನ್ನೂ ನೀಡಿ ಸಂಪೂರ್ಣ ಮಾಲೀಕತ್ವ ಬರುವಂತೆ ಟೈಟಲ್ ಡೀಡ್ ನೀಡಿರುವ ಅಧಿಕಾರಿಗಳ ಧೈರ್ಯ ಅಚ್ಚರಿ ಮೂಡಿಸಿದೆ.

ಗೌರಿ–ಗಣೇಶ ಚತುರ್ಥಿ ಹಬ್ಬ ಆಚರಣೆ: ಮಾರ್ಗಸೂಚಿ ಬಿಡುಗಡೆ

ಮೈಸೂರು,ಆ.21–2024–2025 ನೇ ಸಾಲಿನ ಗೌರಿ–ಗಣೇಶ ಚತುರ್ಥಿ ಹಬ್ಬದ ಆಚರಣೆ ಹಿನ್ನೆಲೆಯಲ್ಲಿ ಸಾರ್ವಜನಿಕರು ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಲಾಗಿದೆ.

ಪ್ಲಾಸ್ಟರ್ ಆಫ್ ಪ್ಯಾರಿಸ್ ವಿಗ್ರಹಗಳನ್ನು ತಯಾರಿಸುವ ಮತ್ತು ಮಾರಾಟ ಮಾಡುವ ವ್ಯಕ್ತಿ, ಸಂಸ್ಥೆಗಳಿಗೆ ವ್ಯಾಪಾರ ಲೈಸೆನ್ಸ್ ನೀಡದಿರಲು ಮತ್ತು ಲೈಸೆನ್ಸ್ ಪಡೆಯದೇ ಅನಧಿಕೃತವಾಗಿ ತಯಾರಿಕೆ, ಮಾರಾಟ ಮಾಡುವ ವ್ಯಕ್ತಿ, ಸಂಸ್ಥೆಗಳ ಮೇಲೆ ಕಾನೂನು ಕ್ರಮಗಳನ್ನು ತಕ್ಷಣ ಜರುಗಿಸಲು ಸೂಚಿಸಲಾಗಿದ್ದು, ಪ್ಲಾಸ್ಟರ್ ಆಫ್ ಪ್ಯಾರಿಸ್ /ಬಣ್ಣ ಲೇಪಿತ ವಿಗ್ರಹಗಳನ್ನು ಯಾವುದೇ ನದಿ, ಕಾಲುವೆ, ಕೆರೆ ಮತ್ತು ಬಾವಿಗಳಲ್ಲಿ ವಿಸರ್ಜಿಸುವುದನ್ನು ನಿಷೇಧಿಸಲಾಗಿದೆ. ಈ ಆದೇಶವನ್ನು ಉಲ್ಲಂಘಿಸಿದ್ದಲ್ಲಿ ಐ.ಪಿ.ಸಿ. 1860 ರ ಪ್ರಕಾರ ಕ್ರಮ ತೆಗೆದುಕೊಳ್ಳಲು ಸೂಚಿಸಲಾಗಿರುತ್ತದೆ. ಪರಿಸರ ಸ್ನೇಹಿ ಜೇಡಿ ಮಣ್ಣಿನಿಂದ ತಯಾರಿಸಿದ ಗೌರಿ ಮತ್ತು ಗಣೇಶ ಮೂರ್ತಿಗಳನ್ನು ಪ್ರತಿಷ್ಠಾಪಿಸಿ, ಪೂಜಿಸಿದ ನಂತರ ಮನೆಯಲ್ಲಿ ವಿಸರ್ಜಿಸಿ ಪರಿಸರ ಮಾಲಿನ್ಯವನ್ನು ನಿಯಂತ್ರಿಸುವುದು. ಪರಿಸರದ ಮೇಲೆ ಭಾರಿ ಪರಿಣಾಮ ಬೀರುವಂತಹ ಪ್ಲಾಸ್ಟರ್ ಆಫ್ ಪ್ಯಾರಿಸ್‌ನಿಂದ ತಯಾರಿಸಿದ ಹಾಗೂ ರಾಸಾಯನಿಕ ಬಣ್ಣಗಳನ್ನು ಒಳಗೊಂಡ ಗೌರಿ–ಗಣೇಶ ಮೂರ್ತಿಗಳನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಗೌರಿ–ಗಣೇಶ ಚತುರ್ಥಿ ಹಬ್ಬವನ್ನು ಸರಳ ರೀತಿಯಲ್ಲಿ ಭಕ್ತಿ ಪೂರ್ವಕವಾಗಿ ದೇವಸ್ಥಾನಗಳಲ್ಲಿ, ತಮ್ಮ ಮನೆಗಳಲ್ಲಿ ಅಥವಾ ಸರ್ಕಾರಿ/ಖಾಸಗಿ/ಸಾರ್ವಜನಿಕ ಬಯಲು ಪ್ರದೇಶಗಳಲ್ಲಿ ಕನಿಷ್ಠ ಸಂಖ್ಯೆಯೊಂದಿಗೆ ಆಚರಿಸುವುದು. ಪಾರಂಪರಿಕ ಗೌರಿ–ಗಣೇಶೋತ್ಸವಕ್ಕಾಗಿ, ಗಣೇಶೋತ್ಸವ ಸಮಿತಿಗಳು/ಮಂಡಳಿಗಳು ಗಣೇಶ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಲು ಮುನಿಸಿಪಲ್ ಕಾರ್ಪೋರೇಷನ್/ಸ್ಥಳೀಯ ಆಡಳಿತದಿಂದ ಪೂರ್ವಾನುಮತಿಯನ್ನು ಪಡೆಯತಕ್ಕದು ಹಾಗೂ ಒಂದು ವಾರ್ಡಿಗೆ/ಗ್ರಾಮಕ್ಕೆ ಒಂದು ಸಾರ್ವಜನಿಕ ಗೌರಿ–ಗಣೇಶೋತ್ಸವವನ್ನು ಆಚರಿಸಲು ಪ್ರೋತ್ಸಾಹಿಸುವುದು. ಪಾರಂಪರಿಕ ಗೌರಿ–ಗಣೇಶ ಮೂರ್ತಿ ಮತ್ತು ಮನೆಯಲ್ಲಿ ವಿಗ್ರಹಗಳನ್ನು ಪೂಜಿಸುವವರು ಅವುಗಳನ್ನು ಮನೆಯಲ್ಲಿಯೇ ಸರ್ಕಾರಿ, ಖಾಸಗಿ ವಿಸರ್ಜಿಸುವುದು ಮತ್ತು ಬಯಲು ಪ್ರದೇಶಗಳಲ್ಲಿ ಪ್ರತಿಷ್ಠಾಪಿಸುವ ಗೌರಿ–ಗಣೇಶ ಮೂರ್ತಿಗಳನ್ನು ಅತೀ ಸಮೀಪವಾಗುವಂತಹ ಮಾರ್ಗಗಳನ್ನು ಬಳಸಿಕೊಂಡು ಮೈಸೂರು ಮಹಾನಗರ ಪಾಲಿಕೆ/ ಜಿಲ್ಲಾಡಳಿತ/ಹತ್ತಿರದ ಸ್ಥಳೀಯ ಸಂಸ್ಥೆಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ವತಿಯಿಂದ ಈಗಾಗಲೇ ನಿರ್ಮಿಸಲಾದ ಹೊಂಡ ಅಥವಾ ಸಂಚಾರಿ ವಿಸರ್ಜನಾ ವ್ಯವಸ್ಥೆ (Mobile Immersion Tank) ಅಥವಾ ಕೃತಕ ವಿಸರ್ಜನಾ ಟ್ಯಾಂಕರ್‌ಗಳಲ್ಲಿ ವಿಸರ್ಜಿಸುವುದು.




ಗೌರಿ–ಗಣೇಶ ಹಬ್ಬದ ಸಂದರ್ಭದಲ್ಲಿ ಪಟಾಕಿ ಸಿಡಿಸುವುದರಿಂದ ಪಟಾಕಿಯ ಹೊಗೆ ವಿಷಪೂರಿತ, ಅಲ್ಲದೆ ರಸ್ತೆ ತುಂಬಾ ಕಸವಾಗುತ್ತದೆ, ಗಡಚಿಕ್ಕುವ ಶಬ್ದವೂ ಕಿವಿಗೆ ಹಾನಿಕರ. ಚರಂಡಿಯಲ್ಲಿ ಹೂವಿನ ಹಾರ, ತಟ್ಟೆ, ಲೋಟ, ಎಲೆ ಹಾಕುವ ಬದಲು ಕಸದ ವಾಹನ ಬಳಸುವುದು. ಹಬ್ಬದ ದಿನಗಳಲ್ಲಿ ರಾತ್ರಿ 10 ಗಂಟೆಯಿಂದ ಬೆಳಿಗ್ಗೆ 6 ಗಂಟೆಯವರೆಗೆ ಧ್ವನಿವರ್ಧಕ ಬಳಕೆ ಮಾಡಬಾರದು. ಏಕಬಳಕೆ ಪ್ಲಾಸ್ಟಿಕ್ (Single Use Plastic) ವಸ್ತುಗಳ ಉತ್ಪಾದನೆ, ಸಂಗ್ರಹಣೆ, ವಿತರಣೆ ಮಾರಾಟ ಮತ್ತು ಬಳಕೆಯನ್ನು ನಿಷೇಧಿಸುವ ಸಂಬಂಧದ ಬಗ್ಗೆ ಹಾಗೂ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ (ತಿದ್ದುಪಡಿ) ನಿಯಮಗಳ ಅನುಷ್ಠಾನದ ಕುರಿತು ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ. ಈ ಸಂಬಂಧ ನಿಷೇಧಿತ ಏಕಬಳಕೆ ಪ್ಲಾಸ್ಟಿಕ್ ವಸ್ತುಗಳನ್ನು ಬಳಸದಂತೆ ಸಂಬಂಧಪಟ್ಟ ಇಲಾಖೆಗಳು ಕಾನೂನು ಕ್ರಮ ಜರುಗಿಸಬೇಕು ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಹಾತ್ಮ ಗಾಂಧೀಜಿ 155ನೇ ಜಯಂತಿ
ರಾಜ್ಯಮಟ್ಟದ ಬಾಪೂಜಿ ಪ್ರಬಂಧ ಸ್ಪರ್ಧೆ

ಮೈಸೂರು,ಆ.21– ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವತಿಯಿಂದ ಆಚರಿಸುತ್ತಿರುವ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ 155ನೇ ಜಯಂತಿಯ ದಿನಾಚರಣೆಯ ಅಂಗವಾಗಿ ವಿದ್ಯಾರ್ಥಿ ಹಾಗೂ ಯುವಜನರಲ್ಲಿ ಮಹಾತ್ಮ ಗಾಂಧೀಜಿಯವರ ಬದುಕು, ಸ್ವಾತಂತ್ರ್ಯ ಚಳುವಳಿ, ಸರಳತೆ, ಅಹಿಂಸಾ ಮಾರ್ಗ, ಅಸ್ಪೃಶ್ಯತೆ ನಿವಾರಣೆಗಾಗಿ ನಡೆಸಿದ ಪ್ರಯೋಗಗಳು ಇತ್ಯಾದಿ ವಿಚಾರಗಳ ಬಗ್ಗೆ ಪ್ರೌಢಶಾಲೆ, ಪದವಿ ಪೂರ್ವ ಹಾಗೂ ಪದವಿ /ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಬಾಪೂಜಿ ಪ್ರಬಂಧ ಸ್ಪರ್ಧೆಯನ್ನು ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಹಮ್ಮಿಕೊಳ್ಳಲಾಗುತ್ತಿದೆ.

ವಿವಿಧ ವಿಷಯಗಳ ಕುರಿತು ಪ್ರೌಢಶಾಲೆ, ಪದವಿ ಪೂರ್ವ ಶಿಕ್ಷಣ ಹಾಗೂ ಪದವಿ–ಸ್ನಾತಕೋತ್ತರ ಪದವಿಗಳ ಹಂತದ ವಿದ್ಯಾರ್ಥಿಗಳಿಗೆ ಒಟ್ಟು 3 ವಿಭಾಗಗಳಲ್ಲಿ ಬಾಪೂಜಿ ಪ್ರಬಂಧ ಸ್ಪರ್ಧೆಯನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಆಯೋಜಿಸಲು ಉದ್ದೇಶಿಸಲಾಗಿದೆ. ವಿಜೇತರಿಗೆ ರಾಜ್ಯಮಟ್ಟದಲ್ಲಿ ಪ್ರಥಮ 31 ಸಾವಿರ ರೂ., ದ್ವಿತೀಯ 21 ಸಾವಿರ ರೂ. ಮತ್ತು ತೃತೀಯ 11 ಸಾವಿರ ರೂ. ಹಾಗೂ ಜಿಲ್ಲಾಮಟ್ಟದಲ್ಲಿ ಪ್ರಥಮ 3 ಸಾವಿರ ರೂ. ದ್ವಿತೀಯ 2 ಸಾವಿರ ರೂ ಮತ್ತು ತೃತೀಯ 1 ಸಾವಿರ ರೂ. ಬಹುಮಾನ ನೀಡಲಾಗುವುದು.

ಪ್ರೌಢಶಾಲಾ ವಿಭಾಗ: 1) ಮಹಾತ್ಮ ಗಾಂಧೀಜಿ ಹಾಗೂ ಪ್ರಜಾಪ್ರಭುತ್ವ, 2) ಗಾಂಧೀಜಿಯವರ ವಿಚಾರದಲ್ಲಿ ಸತ್ಯಾಗ್ರಹ, 3) ನನ್ನ ಬದುಕಿನಲ್ಲಿ ಗಾಂಧೀಜಿ ತತ್ವಗಳನ್ನು ಅಳವಡಿಸಿಕೊಳ್ಳುವ ಬಗೆ, 4) ಗಾಂಧೀಜಿಯವರ ತತ್ವಗಳಿಂದ ದೇಶ ಕಟ್ಟುವ ಬಗೆ, ಪ್ರೌಢಶಾಲಾ ವಿಭಾಗದ ವಿದ್ಯಾರ್ಥಿಗಳು ಈ ನಾಲ್ಕು ವಿಷಯಗಳಲ್ಲಿ ಯಾವುದಾದರೂ ಒಂದು ವಿಷಯ ಕುರಿತು ಸುಮಾರು 900 ಪದಗಳಿಗೆ ಮೀರದಂತೆ ಪ್ರಬಂಧ ಬರೆಯಬೇಕು.




ಪದವಿ ಪೂರ್ವ ಶಿಕ್ಷಣ ವಿಭಾಗ: 1) ಮಹಾತ್ಮ ಗಾಂಧೀಜಿ ಹಾಗೂ ಪ್ರಜಾಪ್ರಭುತ್ವ, 2) ದೇಶದ ಕಳಂಕವಾದ ಅಸ್ಪೃಶ್ಯತೆ ನಿವಾರಿಸುವಲ್ಲಿನ ಗಾಂಧೀಜಿಯವರ ಪ್ರಯೋಗಗಳು, 3) ಗಾಂಧೀಜಿಯವರನ್ನು ಜಗತ್ತು ಗ್ರಹಿಸಿದ ರೀತಿ, 4) ನನ್ನ ಬದುಕಿನಲ್ಲಿ ಗಾಂಧೀಜಿ ತತ್ವಗಳನ್ನು ಅಳವಡಿಸಿಕೊಳ್ಳುವ ಬಗೆ, ಪದವಿ ಪೂರ್ವ ಶಿಕ್ಷಣ ವಿಭಾಗದ ವಿದ್ಯಾರ್ಥಿಗಳು ಈ ನಾಲ್ಕು ವಿಷಯಗಳಲ್ಲಿ ಯಾವುದಾದರೂ ಒಂದು ವಿಷಯ ಕುರಿತು ಸುಮಾರು 1500 ಪದಗಳಿಗೆ ಮೀರದಂತೆ ಪ್ರಬಂಧ ಬರೆಯಬೇಕು.

ಪದವಿ ಹಾಗೂ ಸ್ನಾತಕೋತ್ತರ ಪದವಿ ವಿಭಾಗ: 1) ಇಂದಿನ ಪ್ರಜಾಪ್ರಭುತ್ವದಲ್ಲಿ ಸತ್ಯಾಗ್ರಹದ ಮಹತ್ವ 2) ದೇಶ ನಿರ್ಮಾಣದಲ್ಲಿ ಗಾಂಧೀಜಿಯವರ ಜಾತ್ಯಾತೀತ ನಿಲುವುಗಳು, 3) ಗಾಂಧೀಜಿಯವರ ಧಾರ್ಮಿಕ ಸಹಿಷ್ಣುತೆ ಚಿಂತನೆ, ಸ್ವಾತಂತ್ರ್ಯ ಮತ್ತು ಸಮಾನತೆಯ ಪರಿಕಲ್ಪನೆಗಳು, 4) ಗಾಂಧೀಜಿಯವರ ವಿಚಾರದಲ್ಲಿ ಸತ್ಯದ ಪರಿಕಲ್ಪನೆ, 5) ಗಾಂಧೀಜಿಯವರು ಕಂಡ ಸ್ವರಾಜ್ಯ ಮತ್ತು ಆರ್ಥಿಕ ಚಿಂತನೆಗಳು. ಪದವಿ ಹಾಗೂ ಸ್ನಾತಕೋತ್ತರ ಪದವಿ ವಿಭಾಗದ ವಿದ್ಯಾರ್ಥಿಗಳು ಈ ಐದು ವಿಷಯಗಳಲ್ಲಿ ಯಾವುದಾದರೂ ಒಂದು ವಿಷಯ ಕುರಿತು ಸುಮಾರು 2000 ಪದಗಳಿಗೆ ಮೀರದಂತೆ ಪ್ರಬಂಧ ಬರೆಯಬೇಕು. ಸೆ.6ರೊಳಗಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಜಿಲ್ಲಾಡಳಿತದ ಸಹಯೋಗದೊಂದಿಗೆ ಸ್ಪರ್ಧೆ ಏರ್ಪಡಿಸಿ ದಿನಾಂಕ : 10–09–2024 ರೊಳಗಾಗಿ ಮೌಲ್ಯಮಾಪನ ಮಾಡಿ, ವಿಜೇತರ ವಿವರಗಳು ಹಾಗೂ ಪ್ರಬಂಧಗಳನ್ನು ಕೇಂದ್ರ ಕಚೇರಿಗೆ ಕಳುಹಿಸಲಿದೆ. ಜಿಲ್ಲಾಮಟ್ಟದ ಪ್ರಥಮ ಬಹುಮಾನ ವಿಜೇತ ಪ್ರಬಂಧಗಳನ್ನು ರಾಜ್ಯಮಟ್ಟದಲ್ಲಿ ಮರುಮೌಲ್ಯಮಾಪನ ಮಾಡಿ, ರಾಜ್ಯ ಮಟ್ಟದ ಫಲಿತಾಂಶ ಘೋಷಿಸಲಾಗುವುದು. ಪ್ರತಿ ವಿಭಾಗದಲ್ಲಿನ ಅತ್ಯುತ್ತಮವಾದ ಮೂರು (3) ಪ್ರಬಂಧಗಳಿಗೆ ಅಕ್ಟೋಬರ್ 02 ರಂದು ಜಿಲ್ಲಾ ಮಟ್ಟದ ಗಾಂಧೀ ಜಯಂತಿ ದಿನಾಚರಣೆ ಸಂದರ್ಭದಲ್ಲಿ ಬಹುಮಾನ ನೀಡಿ ಪ್ರಬಂಧ ರಚನೆಕಾರರಿಗೆ ಗೌರವಿಸಲಾಗುವುದು.

ನಿಬಂಧನೆಗಳು: ಪ್ರಬಂಧವು ಸಂಪೂರ್ಣವಾಗಿ ಸ್ವರಚಿತವಾಗಿರಬೇಕು. ಸ್ಪರ್ಧೆ ಏರ್ಪಡಿಸುವ ಸ್ಥಳದಲ್ಲಿಯೇ ಶುದ್ಧ ಕೈಬರಹದಲ್ಲಿ ಪ್ರಬಂಧ ಬರೆಯಬೇಕು. ಆಕರವಾಗಿ ಬಳಸಿದ ಪರಾಮರ್ಶನ / ಆಧಾರ ಗ್ರಂಥಗಳ ವಿವರಗಳನ್ನು ಪ್ರಬಂಧದ ಕೊನೆಯಲ್ಲಿ ನಮೂದಿಸಬೇಕು. ಆದರೆ, ಸ್ಪರ್ಧೆ ಏರ್ಪಡಿಸುವ ಸ್ಥಳದಲ್ಲಿ ಪರಾಮರ್ಶನ / ಆಧಾರ ಗ್ರಂಥಗಳು / ಮೊಬೈಲ್‌ಗಳ ಬಳಕೆಗೆ ಅವಕಾಶವಿರುವುದಿಲ್ಲ. ಪ್ರಬಂಧಕಾರರ ಹೆಸರು, ವಿಳಾಸ ನಮೂದಿಸಿರಬೇಕು. ಪ್ರಬಂಧವು ಈ ಮೊದಲು ಎಲ್ಲಿಯೂ ಪ್ರಕಟವಾಗಿರಬಾರದು. ಆಯ್ದ ಪ್ರಬಂಧಗಳ ಪ್ರಕಟಣೆಯ ಹಕ್ಕನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹೊಂದಿರುತ್ತದೆ.

ಶ್ರೀ ಇಗ್ಗುತ್ತಪ್ಪ ಕೊಡವ ಕ್ಷೇಮಾಭಿವೃದ್ಧಿ ಸಂಘದ ಮಹಾಸಭೆ



ಶ್ರೀ ಇಗ್ಗುತ್ತಪ್ಪ ಕೊಡವ ಕ್ಷೇಮಾಭಿವೃದ್ಧಿ ಸಂಘದ ವಾರ್ಷಿಕ ಮಹಾಸಭೆ ಮೈಸೂರಿನ ಕೊಡವ ಸಮಾಜದಲ್ಲಿ ನಡೆಯಿತು.

ಮೈಸೂರು,ಆ.21–ಮೈಸೂರಿನ ಹೆಬ್ಬಾಳಿನಲ್ಲಿರುವ ಶ್ರೀ ಇಗ್ಗುತ್ತಪ್ಪ ಕೊಡವ ಕ್ಷೇಮಾಭಿವೃದ್ಧಿ ಸಂಘದ ವಾರ್ಷಿಕ ಮಹಾಸಭೆ ಹಾಗೂ ಸಂತೋಷ ಕೂಟವು ಇತ್ತೀಚೆಗೆ ವಿಜಯನಗರದಲ್ಲಿರುವ ಕೊಡವ ಸಮಾಜದಲ್ಲಿ ನಡೆಯಿತು.

ಸಂಘದ ಅಧ್ಯಕ್ಷರಾದ ಮಲಚೀರ ಎಂ ಪೊನ್ನಪ್ಪ ಅಧ್ಯಕ್ಷತೆ ವಹಿಸಿದ್ದರು. ಕನ್ನಿಕಾ ಕಾವೇರಿ ಶಾಲೆಯ ವ್ಯವಸ್ಥಾಪಕರಾದ ಶ್ರೀಮತಿ ಚೋವಂಡ ಚೋಂದಮ್ಮ ಪೂಣಚ್ಚ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಸಂಘದ ನಡಾವಳಿ ವಾರ್ಷಿಕ ವರದಿಯನ್ನು ಸಂಘದ ಗೌ। ಕಾರ್ಯದರ್ಶಿ ದೇಯಂಡ ಕೆ ಅಯ್ಯಣ್ಣ ವಿವರಿಸಿದರು. ಸಂಘದ ಲೆಕ್ಕಪತ್ರ ವರದಿಯನ್ನು ಖಜಾಂಚಿ ಕೊಟ್ಟಂಗಡ ಪೆಮ್ಮಯ್ಯ ಮಂಡಿಸಿದರು. ಮರಣಪಟ್ಟ ಸದಸ್ಯರಿಗೆ ಸಂಘದ ಉಪಾಧ್ಯಕ್ಷ ಮೀದೇರಿರ ಕೆ.ಪ್ರಕಾಶ್ ಸಂತಾಪ ಸೂಚಿಸಿದರು. ಶ್ರೀಮತಿ ಮೀದೇರಿರ ಶಕೀಲಾ ಪ್ರಕಾಶ್ ಕಾರ್ಯಕ್ರಮ ನಿರೂಪಿಸಿದರು. ದೆಹಲಿಯಲ್ಲಿ ನಡೆದ ಗಣರಾಜ್ಯೋತ್ಸವದ ಪಥಸಂಚಲನದಲ್ಲಿ ಭಾಗವಹಿಸಿದ್ದ ಸಂಘದ ಇಬ್ಬರು ಮಕ್ಕಳಾದ ಚಿತಾಪಂಡ ಹೇಮ್ ಚಂಗಪ್ಪ ಹಾಗೂ ಕು। ಮೀದೇರಿರ ಸನ್ನಿಧಿ ಮುತ್ತಮ್ಮಳನ್ನು ಸನ್ಮಾನಿಸಲಾಯಿತು.

ಈ ವೇಳೆ ಶ್ರೀಮತಿ ಚೋವಂಡ ಚೋಂದಮ್ಮ ಮಾತನಾಡಿ, ಪೋಷಕರು ಮಕ್ಕಳನ್ನು ಬೆಳೆಸುವ ರೀತಿ ಹಾಗೂ ಗುರಿ ಸಾಧನೆಗೆ ಛಲವಿರಬೇಕು ಎಂಬ ಮಾತನ್ನು ತಿಳಿಸಿದರು. ಸಂಘದ ಸಹಕಾರ್ಯದರ್ಶಿ ಅಂಜಪರವಂಡ ಟಿ.ಚಿಣ್ಣಪ್ಪ ವಂದಿಸಿದರು. ಸಂಘದ ಸದಸ್ಯರು, ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು. ಸಂಘದ ಸಮಿತಿ ಸದಸ್ಯರಾದ ತಾಪಂಡ ಸಿ ಚರ್ಮಣ, ಆಟ್ರಂಗಡ ಕೆ ರಾಜೇಶ್, ಮಚ್ಚಮಡ ಪಿ ಕಾವೇರಪ್ಪ, ಕಿರುಂದಂಡ ದರ್ಶನ್ ಕಾರ್ಯಪ್ಪ, ಮಾಣಿರ ಗಿರೀಶ್, ಶ್ರೀಮತಿ ತಾಪಂಡ ಲತಾ ನಾಗೇಶ್, ಶ್ರೀಮತಿ ಮೇಚಿಯಂಡ ಧರಣಿ ಅಪ್ಪಣ್ಣ, ಶ್ರೀಮತಿ ಮುಂಜಾಂದಿರ ಶೈಲಾ ದೇವಯ್ಯ ಹಾಗೂ ಶ್ರೀಮತಿ ಮಾದೇಟಿರ ಲತಾ ನಂಜಪ್ಪ ಮತ್ತಿತರರು ಭಾಗವಹಿಸಿದ್ದರು.

ಬಿಪಿಎಲ್ ರೇಷನ್ ಕಾರ್ಡ್: ಆ.31ರೊಳಗೆ ಇ–ಕೆವೈಸಿ ಮಾಡಿಸುವಂತೆ ಸೂಚನೆ

ಮೈಸೂರು, ಆ.21– ಬಿ.ಪಿ.ಎಲ್ ರೇಷನ್‌ಕಾರ್ಡ್ ಹೊಂದಿರುವ ಪಡಿತರ ಚೀಟಿದಾರರು ಒಂದು ಬಾರಿ ತಮ್ಮ ಪಡಿತರ ಚೀಟಿಯಲ್ಲಿರುವ ಎಲ್ಲಾ ಸದಸ್ಯರ ಇ–ಕೆವೈಸಿ (ಆಧಾರ್ ಆಧಾರಿತ ಹೆಬ್ಬೆಟ್ಟಿನ ದೃಢೀಕರಣ) ಕಡ್ಡಾಯವಾಗಿರುತ್ತದೆ.


ಆದ್ದರಿಂದ ಯಾರು ಕಳೆದ ಹಲವು ವರ್ಷಗಳಿಂದ ತಮ್ಮ ಬಿ.ಪಿ.ಎಲ್ ಪಡಿತರ ಚೀಟಿಗೆ ಈವರೆಗೆ ಇ–ಕೆವೈಸಿ ಮಾಡಿಸಿರುವುದಿಲ್ಲವೋ ಅಂತಹವರು ಆಗಸ್ಟ್ 31ರೊಳಗೆ ತಪ್ಪದೇ ತಮ್ಮ ಹತ್ತಿರದ ನ್ಯಾಯಬೆಲೆ ಅಂಗಡಿಗೆ ತೆರಳಿ ಇ–ಕೆವೈಸಿ (ಆಧಾರ್ ಆಧಾರಿತ ಹೆಬ್ಬೆಟ್ಟಿನ ದೃಢೀಕರಣ) ಮಾಡಿಸಬೇಕಾಗಿದ್ದು, ಇ–ಕೆವೈಸಿ ಮಾಡಿಸುವುದು ಸಂಪೂರ್ಣವಾಗಿ ಉಚಿತವಾಗಿರುತ್ತದೆ. ಜಿಲ್ಲೆಯಲ್ಲಿ ಈಗಾಗಲೇ ಇ–ಕೆವೈಸಿ ಕಾರ್ಯ ಶೇ.96.89 ಮುಕ್ತಾಯಗೊಂಡಿದ್ದು, ಇ–ಕೆವೈಸಿ ಆಗದೇ ಇರುವವರ ಪಟ್ಟಿಯನ್ನು ಆಯಾ ನ್ಯಾಯಬೆಲೆ ಅಂಗಡಿಗಳಲ್ಲಿ ಈಗಾಗಲೇ ಪ್ರದರ್ಶಿಸಲಾಗಿರುತ್ತದೆ. ನಿಗದಿಪಡಿಸಿದ ದಿನಾಂಕದೊಳಗೆ ಇ–ಕೆವೈಸಿ ಮಾಡಿಸದಿದ್ದಲ್ಲಿ ಇ–ಕೆವೈಸಿ



ಮಾಡಿಸದ ಸದಸ್ಯರನ್ನು ಅನರ್ಹರೆಂದು ಪರಿಗಣಿಸಿ ಅಂತಹವರ ಹೆಸರನ್ನು ಬಿ.ಪಿ.ಎಲ್ ಪಡಿತರ ಚೀಟಿಯಿಂದ ತೆಗೆದು ಹಾಕಲು ಕ್ರಮವಹಿಸಲಾಗುವುದು.

ಒಂದೇ ಕುಟುಂಬದಲ್ಲಿ ಒಂದಕ್ಕಿಂತ ಹೆಚ್ಚು ಪಡಿತರ ಚೀಟಿ ಇರುವುದು ಹಾಗೂ ಅನರ್ಹ ಪಡಿತರ ಚೀಟಿ ಪಡೆದಿರುವುದು ಕಾನೂನಿಗೆ ವಿರುದ್ಧವಾಗಿದ್ದು, ಒಂದೇ ಕುಟುಂಬದಲ್ಲಿ ಒಂದಕ್ಕಿಂತ ಹೆಚ್ಚು ಪಡಿತರ ಚೀಟಿ ಪಡೆದುಕೊಂಡಿರುವವರು ಮತ್ತು ಆರ್ಥಿಕವಾಗಿ ಸಬಲರಾಗಿದ್ದು ಸುಳ್ಳು ಮಾಹಿತಿ ನೀಡಿ ಬಿ.ಪಿ.ಎಲ್ ಪಡಿತರ ಚೀಟಿ ಪಡೆದುಕೊಂಡಿರುವವರು ಕೂಡಲೇ ತಾಲೂಕು ಕಚೇರಿ, ಆಹಾರ ನಿರೀಕ್ಷಕರನ್ನು ಸಂಪರ್ಕಿಸಿ ತಮ್ಮ ಪಡಿತರ ಚೀಟಿಯನ್ನು ಹಿಂದಿರುಗಿಸಬೇಕು ಎಂದು ಜಿಲ್ಲಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಸಿ.ಹೆಚ್.ವಿಜಯಶಂಕರ್ ಅವರಿಗೆ ಸನ್ಮಾನ...



ಮೇಘಾಲಯ ರಾಜ್ಯಪಾಲರಾದ ಸಿ.ಹೆಚ್.ವಿಜಯಶಂಕರ್ ಅವರನ್ನು ಅರ್ಕ ಫೌಂಡೇಶನ್‌ನಲ್ಲಿ ಆತ್ಮೀಯವಾಗಿ ಸನ್ಮಾನಿಸಲಾಯಿತು. ಜಯಪುರ ಹೋಬಳಿ ವಿಕಾಸ ವೇದಿಕೆ ಅಧ್ಯಕ್ಷ ದಾರಿಪುರ ಡಿ.ಚಂದ್ರಶೇಖರ್, ಚಾಮುಂಡೇಶ್ವರಿ ನಗರ ಮಂಡಲ ಬಿಜೆಪಿ ಮಾಜಿ ಪ್ರಧಾನ ಕಾರ್ಯದರ್ಶಿ ಭದ್ರೇಗೌಡನ ಕೊಪ್ಪಲು ಗೋಪಾಲ್‌ಗೌಡ, ಅರ್ಕ ಫೌಂಡೇಶನ್ ಟ್ರಸ್ಟಿ, ಚಾಮುಂಡೇಶ್ವರಿ ನಗರ ಮಂಡಲ ಬಿಜೆಪಿ ಪ್ರಧಾನ ಕಾರ್ಯದರ್ಶಿ ಈರೇಗೌಡ, ಖಜಾಂಚಿ ಬೀರಿಹುಂಡಿ ಸೋಮಶೇಖರ್, ಮರಟಿಕ್ಯಾತನಹಳ್ಳಿ ಕುಮಾರ್ ಹಾಜರಿದ್ದರು.

ಭಗವಂತನ ಕಾಣಲು ಗುರುವಿನ ಮಾರ್ಗದರ್ಶನ ಬೇಕು

ಮೈಸೂರು, ಆ. 21– ಭಗವಂತನನ್ನು ಕಾಣಬೇಕಾದರೆ ಗುರುವಿನ ಮಾರ್ಗದರ್ಶನ ಇರಬೇಕು ಎಂದು ಮಹಾರಾಣಿ ಕಲಾ ಕಾಲೇಜು ಪ್ರಾಂಶುಪಾಲ ಡಾ.ಬಿ.ವಿ. ವಸಂತಕುಮಾರ್ ತಿಳಿಸಿದರು.



ವಸಂತಕುಮಾರ್

ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಶ್ರಾವಣ ಮಾಸದ 16ನೇ ದಿನ ಲಕ್ಕಣ್ಣ ದಂಡೇಶ ವಿರಚಿತ 'ಶಿವತತ್ತ್ವ ಚಿಂತಾಮಣಿ' ಕುರಿತು ಅವರು ಪ್ರವಚನ ನೀಡಿದರು.

ಶಿವತತ್ತ್ವ ಚಿಂತಾಮಣಿಯ ಕಾಲದಹನ ಲೀಲೆಯಲ್ಲಿ ಶ್ವೇತ ಮಹಾರಾಜನನ್ನು ಕರೆದೊಯ್ಯಲು ಬಂದಿರುವ ಸಾವಿನ ರೂಪದ ಯಮನ ನಡುವೆ ನಡೆಯುವ ಘಟನೆಯನ್ನು ಉಲ್ಲೇಖಿಸಲಾಗಿದೆ. ಶ್ವೇತ ಮಹಾರಾಜನದು ಸಾವು ಮತ್ತು ನೋವುಗಳನ್ನು ದಾಟಿರುವ ಕಥೆ. ಬದುಕಿನ ಉದ್ದೇಶ ಸಾವನ್ನು ಗೆಲ್ಲುವುದೇ ಆಗಿದೆ. ಸಾಯುವುದಕ್ಕಾಗಿಯಾಗಲಿ, ಸಾಯಿಸುವುದಕ್ಕಾಗಲಿ ಬದುಕದೆ ಸಾವನ್ನು ಗೆಲ್ಲುವುದಕ್ಕೆ ಬದುಕಬೇಕು. ಭಾರತೀಯ ಸಂಸ್ಕೃತಿಯಲ್ಲಿ ಹಿರಿಯರು ಕಿರಿಯರಿಗೆ ಅಜರಾಮರರಾಗಿ ಬಾಳಿ ಎಂದು ಹರಸುತ್ತಾರೆ. ಕಷ್ಟದಲ್ಲಿರುವವರ ಸೇವೆಯನ್ನು ಮಾಡುವುದರಲ್ಲೇ ಶಿವನನ್ನು ಕಾಣಬೇಕು. ದಯೆಯೇ ಧರ್ಮದ ಮೂಲ. ಎಷ್ಟೇ ಐಶ್ವರ್ಯ, ಪ್ರಸಿದ್ಧಿಯನ್ನು ಗಳಿಸಿದ್ದರೂ ಹಾಗೂ ಎಷ್ಟೇ ವರ್ಷ ಬದುಕಿದ್ದರೂ ಕೊನೆಗೆ ಸಾಯಲೇಬೇಕು. ಈ ಶರೀರ ಎಂಬುದು ಅನಿತ್ಯವಾದುದು. ಹುಟ್ಟು ಮತ್ತು ಸಾವಿನ ನಡುವೆ ಏನು ಮಾಡುತ್ತೇವೆ ಎಂಬುದು ಜೀವನದ ಸಾರ್ಥಕತೆಯ ಮಾರ್ಗವಾಗಿರುತ್ತದೆ ಎಂದರು. ವಿದುಷಿ ವಸಂತ ವೆಂಕಟೇಶ್ ವಾಚನ ಮಾಡಿದರು.

ಜೈಲಿಗೆ ಹೋದರೂ ಸಿಎಂ ಸೀಟು ಬಿಡಲೊಲ್ಲದ ಸಿದ್ದು ಮನಸ್ಥಿತಿ

ರಾಜ್ಯ ಬಿಜೆಪಿ ಎಸ್‌ಸಿ ಮೋರ್ಚಾ ಅಧ್ಯಕ್ಷ ಸಿಮೆಂಟ್ ಮಂಜುನಾಥ್ ವಾಗ್ದಾಳಿ

ಮೈಸೂರು, ಆ.21(ಜಿಎ)–ಜೈಲಿಗೆ ಹೋದರೂ ಸೀಟು ಬಿಡುವುದಿಲ್ಲ ಎಂಬ ಮನಸ್ಥಿತಿಯನ್ನು ಹೊಂದಿದ ವ್ಯಕ್ತಿ ಸಿದ್ದರಾಮಯ್ಯ. ಕಾಂಗ್ರೆಸ್ ಪಕ್ಷವೂ ಅದೇ ಧೋರಣೆ ಹೊಂದಿದೆ ಎಂದು ರಾಜ್ಯ ಬಿಜೆಪಿ ಎಸ್‌ಸಿ ಮೋರ್ಚಾ ಅಧ್ಯಕ್ಷ ಹಾಗೂ ಶಾಸಕರೂ ಆದ ಸಿಮೆಂಟ್ ಮಂಜುನಾಥ್ ಟೀಕಿಸಿದರು.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನೀವು ಅಧಿಕಾರ ಮಾಡಬಾರದೆಂದು ನಾವು ಹೇಳುತ್ತಿಲ್ಲ. ದೇವರಾಜ ಅರಸು ಅವರಿಗೆ ಹೋಲಿಕೆ ಮಾಡಿಕೊಳ್ಳುವ ಸಿದ್ದರಾಮಯ್ಯ ಅವರು ಅಧಿಕಾರ ಎಂಬ ಸೀಟನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದಾರೆ ಎಂದು ಆರೋಪಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯನವರ ಮೇಲೆ ನೇರವಾಗಿ ಆರೋಪ ಇರುವ ಕಾರಣ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡಬೇಕು. ಅಲ್ಲದೆ, ತನಿಖೆಯನ್ನು ಎದುರಿಸಬೇಕು. ತಾವು ಯಾವುದೇ ತಪ್ಪು ಮಾಡಿಲ್ಲವೆಂದು ಸಾಬೀತಾದರೆ ಮತ್ತೆ ಸಿಎಂ ಆಗಬಹುದು; ನಮಗೇನೂ ಬೇಜಾರಿಲ್ಲ ಎಂದು ತಿಳಿಸಿದರು.



ಮೈಸೂರು ಬಿಜೆಪಿ ಕಚೇರಿಯಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ರಾಜ್ಯ ಬಿಜೆಪಿ ಎಸ್‌ಸಿ ಮೋರ್ಚಾ ಅಧ್ಯಕ್ಷ ಹಾಗೂ ಸಕಲೇಶಪುರ ಶಾಸಕರೂ ಆದ ಸಿಮೆಂಟ್ ಮಂಜುನಾಥ್ ಮಾತನಾಡಿದರು.

ಅಧಿಕಾರದಲ್ಲಿರುವ ಕಾಂಗ್ರೆಸ್, ದಲಿತರ ದುಡ್ಡನ್ನು ಲೂಟಿ ಮಾಡುವುದನ್ನು ನಿಲ್ಲಿಸಬೇಕು. ಮೊಟ್ಟ ಮೊದಲನೆಯದಾಗಿ ಸಿದ್ದರಾಮಯ್ಯನವರು ರಾಜೀನಾಮೆ ಕೊಟ್ಟು ಕೆಳಗಿಳಿಯಬೇಕು. ಮಾನ್ಯ ರಾಜ್ಯಪಾಲರು ಒಬ್ಬ ದಲಿತ ವ್ಯಕ್ತಿ ಎಂಬ ಏಕೈಕ ಕಾರಣಕ್ಕಾಗಿ ಕಾಂಗ್ರೆಸ್ಸಿಗರು ಅವರನ್ನು ಅವಹೇಳನ ಮಾಡುತ್ತಿರುವ ಸಂಶಯ ಬರುತ್ತಿದೆ. ಒಬ್ಬ ಪರಿಶಿಷ್ಟ ಪಂಗಡದ ಹೆಣ್ಮಗಳು ಗೌರವಾನ್ವಿತ ರಾಷ್ಟ್ರಪತಿಗಳ ಹುದ್ದೆಗೆ ಏರಿದಾಗ ಕಾಂಗ್ರೆಸ್‌ನವರು ಏಕವಚನದಲ್ಲಿ ಸಂಬೋಧಿಸಿದ್ದರು. ಎಸ್‌ಇಪಿ, ಟಿಎಸ್‌ಪಿ ಹಣವನ್ನು ಅನ್ಯ ಉದ್ದೇಶಕ್ಕಾಗಿ ಬಳಸಿ ದುರ್ಬಳಕೆ ಮಾಡಿದ್ದರು ಎಂದು ಆರೋಪಿಸಿದರು.

ರಾಜ್ಯಪಾಲರ ಅವಹೇಳನವನ್ನು ಅವರು ತೀವ್ರವಾಗಿ ಖಂಡಿಸಿ, ರಾಜ್ಯದಲ್ಲಿ ಪೊಲೀಸ್ ಇಲಾಖೆ ಬದುಕಿದೆಯೇ ಸತ್ತಿದೆಯೇ ಎಂದು ಪ್ರಶ್ನಿಸಿದರು. ರಾಜ್ಯಪಾಲರ ಚಿತ್ರಕ್ಕೆ ಚಪ್ಪಲಿಯಲ್ಲಿ ಕಾಂಗ್ರೆಸ್ಸಿನವರು ಹೊಡೆದರಲ್ಲವೇ? ಇವರಿಗೆ ಕಿಂಚಿತ್ತು ಮಾನ ಮರ್ಯಾದೆ ಇದೆಯೇ, ರಾಜ್ಯಪಾಲರನ್ನು ಏಕವಚನದಲ್ಲಿ ಮಾತನಾಡಿದ ಮುಖಂಡರನ್ನು ಗೂಂಡಾ ಕಾಯ್ದೆಯಡಿ ಬಂಧಿಸಬೇಕಿತ್ತು. ಆದರೆ, ಆ ಕೆಲಸ ಆಗಿಲ್ಲ ಎಂದು ಕಿಡಿಕಾರಿದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಅಧ್ಯಕ್ಷ ಎಲ್.ನಾಗೇಂದ್ರ, ಮಾಜಿ ಶಾಸಕ ಹರ್ಷವರ್ಧನ್, ಮೈಸೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳ ಎಸ್‌ಸಿ ಮತ್ತು ಎಸ್‌ಟಿ ಮೋರ್ಚಾಗಳ ಅಧ್ಯಕ್ಷರು, ಪದಾಧಿಕಾರಿಗಳು ಉಪಸ್ಥಿತರಿದ್ದರು.

ವರದಕ್ಷಿಣೆ ಕಿರುಕುಳಕ್ಕೆ ಗೃಹಿಣಿ ಬಲಿ ಆರೋಪ

ಭಯಗೊಂಡ ಪತಿಯೂ ಆತ್ಮಹತ್ಯೆ, ಕಿಕ್ಕೇರಿ ಬಳಿ ಉದ್ರಿಕ್ತರಿಂದ ಮನೆ ಧ್ವಂಸ, ಕೊಬ್ಬರಿ ಗೋದಾಮಿಗೆ ಬೆಂಕಿ, ಬಿಗುವಿನ ವಾತಾವರಣ


ಬಿ.ಆರ್.ಧನಲಕ್ಷ್ಮಿ


ಮೋಹನ್

ಕಿಕ್ಕೇರಿ, ಆ.21– ವರದಕ್ಷಿಣೆ ಕಿರುಕುಳ ತಾಳಲಾರದೆ ಗೃಹಿಣಿಯೊಬ್ಬರು ನೇಣಿಗೆ ಶರಣಾಗಿದ್ದು, ಇದರಿಂದ ಭಯಗೊಂಡು ಗಂಡನೂ ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಇಲ್ಲಿಗೆ ಸಮೀಪದ ಗದ್ದೆ ಹೊಸೂರು ಗ್ರಾಮದಲ್ಲಿ ಸಂಭವಿಸಿದೆ.

ಗ್ರಾಮದ ವಾಸಿಗಳಾದ ಬಿ.ಆರ್.ಧನಲಕ್ಷ್ಮಿ ಅಲಿಯಾಸ್ ಸ್ವಾತಿ(24) ಎಂಬುವರ ಶವ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದರೆ, ಈಕೆಯ ಪತಿ ಮೋಹನ್ ಶವ ಸಮೀಪದ ಕೆರೆಯಲ್ಲಿ ಸಿಕ್ಕಿದೆ. ಸ್ವಾತಿ ಸಾವನ್ನಪ್ಪಿರುವ ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ಬೇವಿನಹಳ್ಳಿ ಮತ್ತು ಗದ್ದೆ ಹೊಸೂರು ಗ್ರಾಮಸ್ಥರು ಮೋಹನ್ ಮನೆ ಮೇಲೆ ದಾಳಿ ಮಾಡಿ, ಮನೆಯನ್ನು ಧ್ವಂಸಗೊಳಿಸಿದ್ದಲ್ಲದೆ ಕೊಬ್ಬರಿ ಗೋದಾಮಿಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು.

ಬೇವಿನಹಳ್ಳಿ ಗ್ರಾಮದ ರಾಜೇಗೌಡರ ಪುತ್ರಿ ಬಿ.ಆರ್.ಧನಲಕ್ಷ್ಮಿ ಅಲಿಯಾಸ್ ಸ್ವಾತಿಯನ್ನು ಗದ್ದೆಹೊಸೂರು ಗ್ರಾಮದ ತೋಟದ ಮನೆಯ ಮಂಜೇಗೌಡರ ಪುತ್ರ ಮೋಹನ್‌ಗೆ ಎರಡು ವರ್ಷಗಳ ಹಿಂದೆ ವಿವಾಹ ಮಾಡಿಕೊಡಲಾಗಿತ್ತು ಮಂಜೇಗೌಡ ಮೂಲತಃ ಹೋಬಳಿಯ ಐನೋರಹಳ್ಳಿ ಗ್ರಾಮದವರಾಗಿದ್ದು ಗದ್ದೆಹೊಸೂರಿನಲ್ಲಿ ಜಮೀನು ಖರೀದಿಸಿ ತೋಟದ ಮನೆ ನಿರ್ಮಿಸಿಕೊಂಡು ವಾಸವಾಗಿದ್ದರು.

ಧನಲಕ್ಷ್ಮಿ, ಮೋಹನ್ ದಂಪತಿಗಳಿಗೆ 11 ತಿಂಗಳ ಹೆಣ್ಣು ಮಗುವಿದೆ. ಆರಂಭದಲ್ಲಿ ಅನ್ಯೋನ್ಯವಾಗಿದ್ದ ದಂಪತಿಗಳಲ್ಲಿ ಕೌಟುಂಬಿಕ ಕಲಹ ಉಂಟಾಗಿದೆ. ಮೋಹನ್ ಕ್ರಿಕೆಟ್ ಬೆಟ್ಟಿಂಗ್ ಗೀಳು ಬೆಳೆಸಿಕೊಂಡು ಸಾಕಷ್ಟು ಹಣ ಕಳೆದುಕೊಂಡಿದ್ದ. ಹಣಕ್ಕಾಗಿ ಆಗಿಂದಾಗ್ಗೆ ತವರು ಮನೆಯಿಂದ ಹಣ ತರಲು ಪೀಡಿಸುತ್ತಿದ್ದ ಎನ್ನಲಾಗಿದೆ ಈ ಹಿಂದೆ ಕುಟುಂಬದಲ್ಲಿ ದೊಡ್ಡ ಗಲಾಟೆ ನಡೆದಾಗ ಸ್ವಾತಿ ಚಿಕ್ಕಪ್ಪ ರವಿ ಹಾಗೂ ಗದ್ದೆಹೊಸೂರು ಗ್ರಾಮದ ನಾಗೇಶ್, ಮೋಹನ್‌ಗೆ ತಿಳಿ ಹೇಳಿದ್ದರು. ಆದರೆ ಮಂಗಳವಾರ ಸಂಜೆ ಧನಲಕ್ಷ್ಮಿ ನೇಣು ಹಾಕಿಕೊಂಡು ಸಾವನ್ನಪ್ಪಿದ್ದಾಳೆ.


ಉದ್ರಿಕ್ತರ ದಾಳಿಯಿಂದ ಧ್ವಂಸವಾಗಿರುವ ಮೋಹನ್ ಮನೆ.


ಉದ್ರಿಕ್ತರು ಬೆಂಕಿ ಇಟ್ಟ ಕಾರಣ ಹೊತ್ತಿ ಉರಿದ ಕೊಬ್ಬರಿ ಗೋಡೌನ್.

ಪೋಷಕರ ದೂರು: ಧನಲಕ್ಷ್ಮಿ ಅವರ ಪೋಷಕರು ತನ್ನ ಮಗಳಿಗೆ ದೈಹಿಕವಾಗಿ ಹಿಂಸೆ ನೀಡಿ ಕೊಲೆ ಮಾಡಿದ್ದಾರೆ. ಆತ್ಮಹತ್ಯೆ ಎಂದು ಬಿಂಬಿಸಲು ತನ್ನ ಅಳಿಯ ಮೋಹನ್, ಇವರ ತಂದೆ ಮಂಜೇಗೌಡ, ತಾಯಿ ರತ್ನಮ್ಮ ಯತ್ನಿಸಿದ್ದಾರೆ. ತನ್ನ ಮಗಳ ಮದುವೆಗಾಗಿ 400ಗ್ರಾಂ. ಚಿನ್ನ ಜೊತೆಗೆ ಎರಡು ತಿಂಗಳ ಹಿಂದೆ 3ಲಕ್ಷ ರೂ. ನಗದು ನೀಡಲಾಗಿತ್ತು. ಧನಲಕ್ಷ್ಮಿ ಹೆಣ್ಣು ಮಗುವನ್ನು ಹೆತ್ತಿದ್ದಾಳೆ ಎಂದು ಆಗಿಂದಾಗ್ಗೆ ಮೂದಲಿಸುತ್ತಿದ್ದರು. ಜೊತೆಗೆ ತವರಿನಿಂದ ಮತ್ತಷ್ಟು ವರದಕ್ಷಿಣೆ ತರುವಂತೆ ಪೀಡಿಸುತ್ತಿದ್ದ. ತನ್ನ ಮಗಳ ಸಾವಿಗೆ ಈಕೆ ಪತಿ ಮತ್ತು ಕುಟುಂಬದವರೇ ಕಾರಣ ಎಂದು ಕಿಕ್ಕೇರಿ ಪೊಲೀಸರಿಗೆ ಮೃತಳ ತಂದೆ ರಾಜೇಗೌಡ ದೂರು ನೀಡಿದ್ದಾರೆ.

ಸಾವಿನ ವಿಷಯ ತಿಳಿದು ರಾಜೇಗೌಡ ಕುಟುಂಬ ವರ್ಗದವರು ಗದ್ದೆಹೊಸೂರು ತೋಟದ ಮನೆಗೆ ಮಂಗಳವಾರ ತೆರಳಿದ್ದಾರೆ. ಜೊತೆಗೆ ಸಾವಿನ ವಿಷಯ ತಿಳಿದು ಬೇವಿನಹಳ್ಳಿ, ಗದ್ದೆಹೊಸೂರು ಗ್ರಾಮಸ್ಥರು ಸ್ಥಳಕ್ಕೆ ಆಗಮಿಸಿದ್ದಾರೆ. ಮೋಹನ್ ಕುಟುಂಬ ವರ್ಗದವರು ಸಿಗದ ಕಾರಣ ಕೆಂಡಾಮಂಡಲರಾಗಿ ಮನೆಯನ್ನು ಧ್ವಂಸ ಮಾಡಿದ್ದಾರೆ. ಜೊತೆಗೆ ಕೊಬ್ಬರಿ ಗೋದಾಮುವಿಗೆ ಬೆಂಕಿ ಹಚ್ಚಿ ತಮ್ಮ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕಿಕ್ಕೇರಿ ಪೊಲೀಸರು ವಿಷಯ ತಿಳಿದು ಸಿಬ್ಬಂದಿಗಳೊಂದಿಗೆ ಸ್ಥಳಕ್ಕೆ ಆಗಮಿಸಿ ಪರಿಸ್ಥಿತಿ ತಹಬಂದಿಗೆ ತರಲು ಹರಸಾಹಸ ಪಟ್ಟಿದ್ದಾರೆ. ಜಿಲ್ಲಾ ಪೊಲೀಸ್ ಅಧೀಕ್ಷಕ ಮಲ್ಲಿಕಾರ್ಜುನ ಬಾಲದಂಡಿ, ಎಎಸ್‌ಪಿಗಳಾದ ಸಿ.ಇ.ತಿಮ್ಮಯ್ಯ, ಗಂಗಾಧರಯ್ಯ, ನಾಗಮಂಗಲ ಉಪವಿಭಾಗ ಡಿವೈಎಸ್‌ಪಿ ಎ.ಆರ್.ಸುಮೀತ್ ಘಟನಾ ಸ್ಥಳಕ್ಕೆ ಆಗಮಿಸಿದ್ದರು. ಸ್ಥಳದಲ್ಲಿ ಬಿಗುವಿನ ವಾತಾವರಣ ಸೃಷ್ಟಿಯಾಗಿದೆ. ಮಂಡ್ಯ ಜಿಲ್ಲೆಯಿಂದ ಹೆಚ್ಚುವರಿ ಪೊಲೀಸ್ ತುಕಡಿ ಆಗಮಿಸಿದೆ.

ಮೃತಳ ಪತಿ ಶವವಾಗಿ ಪತ್ತೆ: ಪತ್ನಿ ನೇಣಿಗೆ ಶರಣಾದ ವಿಚಾರ ತಿಳಿದ ಮೋಹನ್ ಭಯದಿಂದ ಘಟನಾ ಸ್ಥಳದಿಂದ ಓಡಿ ಹೋಗಿ ಮನೆಗೆ ತುಸು ದೂರದಲ್ಲಿರುವ ಕೆರೆಗೆ ಹಾರಿ ಆತ್ಮಹತ್ಯೆಗೆ ಶರಣಾಗಿದ್ದು, ಬುಧವಾರ ಶವ ಸಿಕ್ಕಿದೆ.

ಮೃತಳ ತಂದೆ ರಾಜೇಗೌಡ ಕಿಕ್ಕೇರಿ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಆರೋಪಿಗಳಾದ ಮೋಹನ್, ತಂದೆ ಮಂಜೇಗೌಡ, ತಾಯಿ ರತ್ನಮ್ಮ ವಿರುದ್ಧ ದೂರು ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಅತಿವೃಷ್ಟಿ, ಅನಾವೃಷ್ಟಿಗಳಿಂದ ಭಾರತೀಯ ರೈತರಿಗೆ ಪ್ರತಿ ವರ್ಷ 5 ಲಕ್ಷ ಕೋಟಿ ನಷ್ಟ

ಹಿರಿಯ ವಿಜ್ಞಾನಿ ಡಾ.ಸಧಿ ಶೇಷಾದ್ರಿ ಕಳವಳ


ಹಿರಿಯ ವಿಜ್ಞಾನಿ ಡಾ.ಸಧಿ ಶೇಷಾದ್ರಿ, ಡಾ.ಎಚ್.ಮಂಜುನಾಥ್, ಪರಿಸರವಾದಿ ಸಿ.ಯತಿರಾಜ್,ನೈಸರ್ಗಿಕ ತಜ್ಞ ಪ್ರಶಾಂತ್ ಜಯರಾಮು ಅವರನ್ನು ಸನ್ಮಾನಿಸಲಾಯಿತು.

ಭಾರತೀನಗರ.ಆ.21–ಜಾಗತಿಕ ತಾಪಮಾನ ಏರಿಕೆಯಿಂದಾಗಿ ಅತಿವೃಷ್ಟಿ, ಅನಾವೃಷ್ಟಿಗಳು ಸಂಭವಿಸುತ್ತಿದ್ದು, ಇದರಿಂದ ಭಾರತೀಯ ರೈತರಿಗೆ ಪ್ರತಿ ವರ್ಷ 5 ಲಕ್ಷ ಕೋಟಿ ರೂಪಾಯಿಗಳಿಗೂ ಅಧಿಕ ಬೆಳೆ ನಷ್ಟವಾಗುತ್ತಿದೆ ಎಂದು ಹಿರಿಯ ವಿಜ್ಞಾನಿ ಡಾ.ಸಧಿ ಶೇಷಾದ್ರಿ ತಿಳಿಸಿದರು.

ಇಲ್ಲಿನ ಭಾರತೀ ಕಾಲೇಜಿನ ಕುವೆಂಪು ಸಭಾಂಗಣದಲ್ಲಿ ತುಮಕೂರು ಗಾಂಧೀಜಿ ಸಹಜ ಬೇಸಾಯ ಆಶ್ರಮ, ಭಾರತೀ ಶಿಕ್ಷಣ ಸಂಸ್ಥೆ, ಸಂಪೂರ್ಣ ಸಾವಯವ ಕೃಷಿಕರ ಸಂಘ (ಮಳವಳ್ಳಿ)ದ ಸಂಯುಕ್ತಾಶ್ರಯದಲ್ಲಿ 'ಕೃಷಿ ಭೂಮಿಯಲ್ಲಿ ಇಂಗಾಲದ ಸಂಗ್ರಹಣೆ ಮತ್ತು ರೈತರಿಗೆ ಸಿಗಬೇಕಾದ ಮನ್ನಣೆ' ಎಂಬ ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಆರ್ಥಿಕ ಅಭಿವೃದ್ಧಿ ಸಾಧಿಸುವುದು ಮಾತ್ರ ಅಭಿವೃದ್ಧಿಯ ಏಕೈಕ ಮಾನದಂಡ ಎಂಬ ಹುಚ್ಚು ಪೈಪೋಟಿಯಲ್ಲಿ ಪ್ರಮುಖವಾಗಿ ಸಾಗುತ್ತಿರುವ ಚೀನಾ, ಅಮೇರಿಕಾ, ಜಪಾನ್, ಯುರೋಪ್, ರಷ್ಯಾ, ಭಾರತ, ಇನ್ನಿತರೆ ದೇಶಗಳು ನೈಸರ್ಗಿಕ ಸಂಪನ್ಮೂಲಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿರುವುದರಿಂದ ಮುಂದಿನ 50 ರಿಂದ 60 ವರ್ಷದಲ್ಲಿ ಕಲ್ಲಿದ್ದಲು, ತೈಲಬಾವಿಗಳು, ಖನಿಜ ಸಂಪತ್ತು ಬರಿದಾಗುತ್ತದೆ ಎಂದು ವಿಷಾದಿಸಿದರು.

ಶಾಸಕ ಮಧು ಜಿ.ಮಾದೇಗೌಡ ಮಾತನಾಡಿ, ಸಂಪೂರ್ಣ ಸಾವಯವ ಕೃಷಿಕರ ಸಂಘ ರೈತರಿಗೆ ಜಾಗೃತಿಯ ಜೊತೆಗೆ ಅಭಿವೃದ್ಧಿಪಡಿಸುವುದರ ಬಗ್ಗೆ ಮುಂದಾಗುತ್ತಿದೆ. ಇಂತಹ ಕಾರ್ಯಕ್ರಮಗಳನ್ನು ಮಂಡ್ಯ ಜಿಲ್ಲಾದ್ಯಂತ ಆಯೋಜಿಸುತ್ತಿರುವುದಕ್ಕೆ ನಮ್ಮ ಸಂಸ್ಥೆಯಿಂದ ಸಂಪೂರ್ಣ ಸಹಕಾರದೊಂದಿಗೆ ಬೆಂಬಲವನ್ನು ನೀಡುತ್ತೇವೆ ಎಂದರು.

ಸಂಪೂರ್ಣ ಸಾವಯವ ಕೃಷಿಕರ ಸಂಘದ ಅಧ್ಯಕ್ಷ ಮಹೇಶ್‌ಕುಮಾರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ತುಮಕೂರಿನ ಚಿಂತಕರು ಹಾಗೂ ಪರಿಸರವಾದಿ ಸಿ.ಯತಿರಾಜ್ ಕೂಡ ಮಾತನಾಡಿದರು.

ಕೇಂದ್ರ ಸರ್ಕಾರದಿಂದ ಬಿಜೆಪಿಯೇತರ ಸರ್ಕಾರಗಳ ಅಸ್ಥಿರಗೊಳಿಸಲು ಯತ್ನ



ಮಂಡ್ಯ,ಆ.21–10 ವರ್ಷಗಳಲ್ಲಿ ಪ್ರಧಾನಿ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಐಟಿ, ಇಡಿ, ಸಿಬಿಐ ಹಾಗೂ ರಾಜ್ಯಪಾಲರನ್ನು ಬಳಸಿಕೊಂಡು ಬಿಜೆಪಿಯೇತರ ಸರ್ಕಾರಗಳನ್ನು ಅಸ್ಥಿರಗೊಳಿಸಲು ಯತ್ನಿಸುತ್ತಿದೆ ಎಂದು ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಆರೋಪಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಬಿಜೆಪಿಯ ದುರಾಡಳಿತ, ಸ್ವಜನ ಪಕ್ಷಪಾತದಿಂದ ಬೇಸತ್ತ ಕರ್ನಾಟಕ ರಾಜ್ಯದ ಜನತೆ 2023ರ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸ್ಪಷ್ಟ ಬಹುಮತ ನೀಡಿದ್ದಾರೆ. ಆದರೂ ಸಹ ಬಿಜೆಪಿ ಬುದ್ಧಿ ಕಲಿಯುತ್ತಿಲ್ಲ. ಸಂವಿಧಾನದ ಉಳಿವು, ಬಡವರ, ದೀನ ದಲಿತರ ಕಲ್ಯಾಣಕ್ಕಾಗಿ ಕಾಂಗ್ರೆಸ್ ಪಕ್ಷವು ಚುನಾವಣೆಯಲ್ಲಿ ಪಂಚ ಗ್ಯಾರಂಟಿಗಳನ್ನು ನೀಡಿದ್ದು ಸರ್ಕಾರ ಅಸ್ತಿತ್ವಕ್ಕೆ ಬರುತ್ತಿದ್ದಂತೆ ಚುನಾವಣೆಯಲ್ಲಿ ಜನರಿಗೆ ನೀಡಿದ್ದ ವಾಗ್ದಾನದಂತೆ ಐದು ಗ್ಯಾರಂಟಿಗಳನ್ನು ಜಾರಿಗೊಳಿಸುವ ಮೂಲಕ ಕಾಂಗ್ರೆಸ್ ಸರ್ಕಾರ ಜನರ ವಿಶ್ವಾಸ ಗೆದ್ದಿದೆ ಎಂದಿದ್ದಾರೆ.

ಭಾರಿ ಮಳೆ, ಹೇಮಾವತಿ ನೀರು, ಅವೈಜ್ಞಾನಿಕ ಕಾಮಗಾರಿ ಹಿನ್ನೆಲೆ

ಅಗ್ರಹಾರ ಬಾಚಹಳ್ಳಿಯಲ್ಲಿ ಕೆರೆ ಕೋಡಿ ಬಿದ್ದು ಅಪಾರ ಹಾನಿ

ಕೆ.ಆರ್.ಪೇಟೆ,ಆ.21–ತಾಲೂಕಿನ ಕಸಬಾ ಹೋಬಳಿಯ ಅಗ್ರಹಾರಬಾಚಹಳ್ಳಿ ಸುತ್ತಮುತ್ತ ವ್ಯಾಪಕ ಮಳೆಯಾಗಿದ್ದು, ಜೊತೆಗೆ ಹೇಮಾವತಿ ಜಲಾಶಯದ ನೀರು ಕಾಲುವೆಯಲ್ಲಿ ಹರಿಯುತ್ತಿರುವ ಕಾರಣ ಅಗ್ರಹಾರಬಾಚಹಳ್ಳಿ ಗ್ರಾಮದ ಕೆರೆ ಕೋಡಿ ಬಿದ್ದು ಅಪಾರ ಪ್ರಮಾಣದಲ್ಲಿ ನೀರು ಉಕ್ಕಿ ಹರಿಯುತ್ತಿದೆ.

ಜೊತೆಗೆ ಕೆಶಿಫ್ ಅಧಿಕಾರಿಗಳು ಜಲಸೂರು–ಬೆಂಗಳೂರು ಹೆದ್ದಾರಿ ಕಾಮಗಾರಿಯನ್ನು ಅವೈಜ್ಞಾನಿಕವಾಗಿ ಮಾಡುತ್ತಿರುವ ಕಾರಣ ಅಪಾರ ಪ್ರಮಾಣದ ನೀರು ನೂರಾರು ಎಕರೆ ಜಮೀನಿಗೆ ನುಗ್ಗಿ, ನಾಟಿ ಮಾಡಿದ ಭತ್ತದ ಪೈರು ನಾಶವಾಗಿದೆ.


ಕೆರೆ ಕೋಡಿ ಬಿದ್ದು ಮುಳುಗಡೆಯಾಗಿರುವ ಭತ್ತದ ಗದ್ದೆಗಳು.

ಈ ಹಿಂದೆ ಎಷ್ಟೇ ಮಳೆ ಬಿದ್ದರೂ ಸಹ ಭತ್ತದ ಗದ್ದೆಗೆ ನೀರು ನುಗ್ಗಿರಲಿಲ್ಲ. ಈಗ ಕೆಶಿಫ್ ಇಲಾಖೆಯ ಅಧಿಕಾರಿಗಳು ಕೆರೆಯ ಕೋಡಿ ನೀರು ಹರಿದು ಹೋಗುವ ಸ್ಥಳಕ್ಕೆ ಮಾತ್ರ ಸೇತುವೆ ನಿರ್ಮಾಣ ಮಾಡದೇ ಬೇರೆ ಕಡೆಯೂ ನೀರು ಹರಿಯಲು ಸೇತುವೆ ನಿರ್ಮಾಣ ಮಾಡಿರುವ ಕಾರಣ ನೂರಾರು ಎಕರೆ ಜಮೀನಿಗೆ ನೀರು ನುಗ್ಗಿ ನಾಟಿ ಮಾಡಿದ ಭತ್ತದ ಪೈರು ನಾಶವಾಗಿದೆ. ಅಲ್ಲದೆ ನಾಟಿ ಮಾಡಲು ಹದಗೊಳಿಸಿದ್ದ ಭೂಮಿಗೆ ನೀರು ನುಗ್ಗಿ ಭೂಸವಕಳಿ ಉಂಟಾಗಿದೆ. ಕೆಶಿಫ್ ಇಲಾಖೆಯ ಅಧಿಕಾರಿಗಳು ಅವೈಜ್ಞಾನಿಕ ಎಸ್ಟಿಮೇಟ್ ಮಾಡಿಕೊಂಡು ಕೆರೆ ಕೋಡಿಯ ನೀರು ಹರಿದು ಹೋಗುವ ಸ್ಥಳದ ಜೊತೆಗೆ ಬೇರೆ ಕಡೆಯೂ ನೀರು ಹೋಗುವಂತೆ ಕಿರು ಸೇತುವೆ ನಿರ್ಮಾಣ ಮಾಡಿ, ಹಳ್ಳದ ಮಾರ್ಗ ಬದಲಾವಣೆ ಮಾಡಿರುವ ಕೆರೆ ಕೋಡಿಯ ಅಪಾರ ಪ್ರಮಾಣದ ನೀರು ರೈತರ ಜಮೀನಲ್ಲಿಯೇ ಹರಿಯುತ್ತಿದೆ. ಇದರಿಂದ ರೈತರ ನೂರಾರು ಎಕರೆ ಜಮೀನು ನೀರಿನಿಂದ ಕೊಚ್ಚಿಹೋಗಿದೆ.

ನಾಳೆ ವಿದ್ಯುತ್ ವ್ಯತ್ಯಯ

ಮಂಡ್ಯ,ಆ.21– ಆ.23ರಂದು ಬೆಳಿಗ್ಗೆ 9ರಿಂದ ಸಂಜೆ 5ರವರೆಗೆ ಜಿ.ಮಲ್ಲಿಗೆರೆ, ಹೊನ್ನೆಮಡು, ಹುನಗನಹಳ್ಳಿ, ನಂಜೇನಹಳ್ಳಿ, ಮುತ್ತೆಗೆರೆ, ತಿಪ್ಪಾಪುರ, ಬುಂಡಾರೆಕೊಪ್ಪಲು, ಎಂ.ಹಟ್ನ, ಸಂಗಾಪುರ ಜವನಹಳ್ಳೀ, ಮಲ್ಲೇನಹಳ್ಳಿ, ಛತ್ರನಹಳ್ಳಿ, ಬಿಲ್ಲೇನಹಳ್ಳೀ, ಬಂಕನಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ನಾಳೆ ಉಕ್ರೇನ್‌ಗೆ ಮೋದಿ ಮಹತ್ವದ ಭೇಟಿ

ನವದೆಹಲಿ, ಆ.21– ಉಕ್ರೇನ್ ರಾಜಧಾನಿ ಕೀವ್‌ಗೆ ಕೈಗೊಂಡಿರುವ ತಮ್ಮ ಮಹತ್ವದ ಭೇಟಿಗೆ ಎರಡು ದಿನಗಳ ಮೊದಲು ಪ್ರಧಾನಿ ನರೇಂದ್ರ ಮೋದಿ ಅವರು 'ಉಕ್ರೇನ್ ಸಂಘರ್ಷದ ಶಾಂತಿಯುತ ಪರಿಹಾರಕ್ಕಾಗಿ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರೊಂದಿಗೆ ನಮ್ಮ ದೃಷ್ಟಿಕೋನವನ್ನು ಹಂಚಿಕೊಳ್ಳಲು ಎದುರು ನೋಡುತ್ತಿರುವೆ' ಎಂದು ಬುಧವಾರ ಹೇಳಿದ್ದಾರೆ.



ಸದ್ಯ ಪೋಲೆಂಡ್ ಭೇಟಿಯಲ್ಲಿರುವ ಮೋದಿ ಅವರು, ಇದೇ 23ರಂದು ಕೀವ್‌ಗೆ ಭೇಟಿ ಕೊಡಲಿದ್ದಾರೆ. ಅಂದು ಸುಮಾರು ಏಳು ತಾಸು ಅವರು ಕೀವ್‌ನಲ್ಲಿ ಇರಲಿದ್ದಾರೆ. ಪೋಲೆಂಡ್‌ನಿಂದ ಕೀವ್‌ಗೆ 'ರೈಲ್ ಫೋರ್ಸ್ ಒನ್' ರೈಲಿನಲ್ಲಿ ಮೋದಿ ಅವರು ಹೋಗಿ ಬರಲಿದ್ದಾರೆ. ಎರಡೂ ಕಡೆಯ ಪ್ರಯಾಣ ಅವಧಿ ಒಟ್ಟು 20 ತಾಸು ಆಗಲಿದೆ. 1991ರಲ್ಲಿ ಉಕ್ರೇನ್ ಸ್ವತಂತ್ರವಾದ ನಂತರ ಭಾರತದ ಪ್ರಧಾನಿಯೊಬ್ಬರು ಭೇಟಿ ನೀಡುತ್ತಿರುವುದು ಇದೇ ಮೊದಲು.

ಉಕ್ರೇನ್ ಸಂಘರ್ಷ ಉಲ್ಲೇಖಿಸಿರುವ ಮೋದಿ ಅವರು, 'ಸ್ನೇಹಿತ ಮತ್ತು ಪಾಲುದಾರನಾಗಿ ಭಾರತವು, ಈ ಪ್ರದೇಶದಲ್ಲಿ ಶಾಂತಿ ಮತ್ತು ಸ್ಥಿರತೆಯು ಮೊದಲಿನ ಸ್ಥಿತಿಗೆ ಆದಷ್ಟು ಶೀಘ್ರ ಮರಳುವಿಕೆಯನ್ನು ಆಶಿಸುತ್ತದೆ' ಎಂದು ಹೇಳಿದ್ದಾರೆ.

'ದ್ವಿಪಕ್ಷೀಯ ಸಹಕಾರ ಬಲಪಡಿಸಲು ಮತ್ತು ಸದ್ಯದ ಉಕ್ರೇನ್ ಸಂಘರ್ಷಕ್ಕೆ ಶಾಂತಿಯುತ ಪರಿಹಾರದ ಬಗ್ಗೆ ದೃಷ್ಟಿಕೋನಗಳನ್ನು ಹಂಚಿಕೊಳ್ಳಲು ಅಧ್ಯಕ್ಷ ಝೆಲೆನ್‌ಸ್ಕಿ ಅವರೊಂದಿಗೆ ಮಾತುಕತೆ ನಡೆಸಲು ಅವಕಾಶವನ್ನು ಎದುರು ನೋಡುತ್ತಿದ್ದೇನೆ' ಎಂದು ಅವರು ಹೇಳಿದರು.

ಉಕ್ರೇನ್ ಮೇಲಿನ ರಷ್ಯಾದ ಆಕ್ರಮಣವನ್ನು ಭಾರತ ಈವರೆಗೂ ಖಂಡಿಸಿಲ್ಲ. ಮಾತುಕತೆ ಮತ್ತು ರಾಜತಾಂತ್ರಿಕತೆಯ ಮೂಲಕ ಸಂಘರ್ಷವನ್ನು ಪರಿಹರಿಸಲು ಉಭಯ ರಾಷ್ಟ್ರಗಳನ್ನು ಭಾರತ ಒತ್ತಾಯಿಸುತ್ತಲೇ ಬಂದಿದೆ.

ರಾಜ್ಯಪಾಲರಿಗೆ ಹೆಚ್ಚಿನ ಭದ್ರತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ತನಿಖೆಗೆ ಆದೇಶ ನೀಡಿದ ಬೆನ್ನಲ್ಲೇ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರಿಗೆ ಹೆಚ್ಚಿನ ಭದ್ರತೆ ನೀಡಲಾಗಿದೆ.

ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ತನಿಖೆಗೆ ಆದೇಶಿಸಿರುವುದನ್ನು ವಿರೋಧಿಸಿ ರಾಜ್ಯಪಾಲರ ವಿರುದ್ಧ ಕಾಂಗ್ರೆಸ್ ಮತ್ತು ಸಿದ್ದರಾಮಯ್ಯ ಅಭಿಮಾನಿಗಳು ಪ್ರತಿಭಟನೆ ನಡೆಸುತ್ತಿರುವ ಹಿನ್ನೆಲೆಯಲ್ಲಿ ಈ ಭದ್ರತೆ ನೀಡಲಾಗಿದೆ.

ರಾಜಭವನಕ್ಕೂ ಹೆಚ್ಚಿನ ಭದ್ರತೆ ನೀಡಿರುವುದರ ಜೊತೆಗೆ ಅವರು ಪ್ರಯಾಣಿಸುವ ಕಾರು ಇಂದಿನಿಂದ ಗುಂಡು ನಿರೋಧಕ ಕಾರು ಆಗಿದೆ. ಅವರು ಪ್ರಯಾಣಿಸುವ ಹಾಗೂ ರಾಜ್ಯದ ಯಾವುದೇ ಕಾರ್ಯಕ್ರಮದಲ್ಲಿ ಭಾಗಹಿಸಿದರೆ ಮುಂಜಾಗ್ರತೆ ಹಾಗೂ ಹೆಚ್ಚು ಭದ್ರತೆ ಒದಗಿಸಲು ಜಿಲ್ಲಾಡಳಿತಕ್ಕೂ ಸೂಚನೆ ನೀಡಲಾಗಿದೆ. ಗೃಹ ಇಲಾಖೆಯ ಸಲಹೆಯಂತೆ ರಾಜ್ಯಪಾಲರು ಪೂರ್ವ ನಿಗದಿತ ಕೆಲವು ಕಾರ್ಯಕ್ರಮಗಳನ್ನು ರದ್ದುಗೊಳಿಸಿದ್ದಾರೆ.

ಕೆಸೆಟ್–2024 ಅರ್ಜಿ ಸಲ್ಲಿಸಲು ಆ.28ರವರೆಗೆ ವಿಸ್ತರಣೆ: ಕೆಇಎ

ಬೆಂಗಳೂರು: ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಇದ್ದ ಕೊನೆಯ ದಿನಾಂಕವನ್ನು ಆ.28ರವರೆಗೆ ವಿಸ್ತರಿಸಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಬುಧವಾರ ತಿಳಿಸಿದ್ದಾರೆ.

ಅರ್ಜಿ ಸಲ್ಲಿಸಲು ಆ.22 ಕೊನೆ ದಿನವಾಗಿತ್ತು. ಸಾರ್ವಜನಿಕರ ಕೋರಿಕೆ ಮೇರೆಗೆ ದಿನಾಂಕ ವಿಸ್ತರಿಸಿದ್ದು, ಆ.30ರ ಒಳಗೆ ಶುಲ್ಕ ಪಾವತಿಸಲು ಅವಕಾಶ ನೀಡಲಾಗಿದೆ ಎಂದು ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಅರ್ಹತಾ ನಿಬಂಧನೆ, ಪರೀಕ್ಷಾ ದಿನಾಂಕ ಇತ್ಯಾದಿ ವಿವರಗಳಿಗೆ ಜುಲೈ 13ರಂದು ಹೊರಡಿಸಿದ್ದ ಅಧಿಸೂಚನೆಯನ್ನು ನೋಡಬೇಕು ಎಂದೂ ಅವರು ಸಲಹೆ ನೀಡಿದ್ದಾರೆ.

ಮರೆಗುಳಿತನ ಕುರಿತು ಜಾಗೃತಿ ಕಾರ್ಯಕ್ರಮಕ್ಕೆ ಮೇಘಾಲಯ ರಾಜ್ಯಪಾಲ ವಿಜಯ್‌ಶಂಕರ್ ಚಾಲನೆ

ನಿತ್ಯವೂ ಯೋಗಾಭ್ಯಾಸ ಅವಶ್ಯ: ಸಿಹೆಚ್‌ವಿ ಸಲಹೆ



'ಡಿಮೆನ್ಷಿಯಾ ಫ್ರೆಂಡ್ಲಿ ಮೈಸೂರು' ಕಾರ್ಯಕ್ರಮಕ್ಕೆ ಮೇಘಾಲಯ ರಾಜ್ಯಪಾಲ ಸಿ.ಹೆಚ್.ವಿಜಯಶಂಕರ್ ಬುಧವಾರ ಚಾಲನೆ ನೀಡಿದರು.

ಮೈಸೂರು, ಆ.21(ಎಂಕೆ)– ಮರೆಯುವಿಕೆ ಅಥವಾ ಮರೆಗುಳಿತನ ಕುರಿತು ಜಾಗೃತಿ ಮೂಡಿಸಲು ಹಮ್ಮಿಕೊಂಡಿರುವ ಒಂದು ತಿಂಗಳ 'ಡಿಮೆನ್ಷಿಯಾ ಫ್ರೆಂಡ್ಲಿ ಮೈಸೂರು' ಕಾರ್ಯಕ್ರಮಕ್ಕೆ ಮೇಘಾಲಯ ರಾಜ್ಯಪಾಲ ಸಿ.ಹೆಚ್. ವಿಜಯಶಂಕರ್(ಸಿಹೆಚ್‌ವಿ) ಬುಧವಾರ ಚಾಲನೆ ನೀಡಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ ಭಾರತೀಯ ಮರೆಗುಳಿತನ ಹಾಗೂ ಸಂಬಂಧಿಸಿದ ಕಾಯಿಲೆಗಳ ಸೊಸೈಟಿ(ಅಲ್ಝೈಮರ್ಸ್ ಅಂಡ್ ರಿಲೇಟೆಡ್ ಡಿಸಾರ್ಡರ್ಸ್ ಸೊಸೈಟಿ ಆಫ್ ಇಂಡಿಯಾ–ಎಆರ್‌ಡಿಎಸ್‌ಐ) ಮೈಸೂರು ಶಾಖೆ, ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ, ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು, ಶಾರದಾವಿಲಾಸ ಫಾರ್ಮಸಿ ಕಾಲೇಜು, ಅಪ್ನಾದೇಶ್ ಹಾಗೂ ರೋಟರಿ ಮೈಸೂರು ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಡಿಮೆನ್ಷಿಯಾ ಫ್ರೆಂಡ್ಲಿ ಮೈಸೂರು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ದೈಹಿಕ ಸದೃಢತೆ ಜೊತೆಗೆ ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಲು ಕ್ರಿಯಾಶೀಲರಾಗಿರುವುದು ಮುಖ್ಯವಾಗುತ್ತದೆ. ನಾನು ಕಳೆದ 55 ವರ್ಷದಿಂದಲೂ ನಿತ್ಯ ಯೋಗಾಭ್ಯಾಸ ಮಾಡುತ್ತಿದ್ದೇನೆ. ಬೆಳಿಗ್ಗೆ 6.30ರಿಂದ ಒಂದು ತಾಸಿನವರೆಗೆ ಸೂರ್ಯ ನಮಸ್ಕಾರ ಹಾಗೂ ವಿವಿಧ ಆಸನಗಳಲ್ಲಿ ತೊಡಗಿಸಿಕೊಳ್ಳುತ್ತೇನೆ. ಸದಾ ಕ್ರಿಯಾಶೀಲವಾಗಿರುವುದಕ್ಕೆ ಯೋಗಾಭ್ಯಾಸವೇ ಕಾರಣ. ಪ್ರತಿಯೊಬ್ಬರೂ ನಿತ್ಯವೂ ಒಂದು ಗಂಟೆಯಾದರೂ ಯೋಗಾ ಭ್ಯಾಸ ಅಥವಾ ವಾಕಿಂಗ್(ವಾಯುವಿಹಾರ) ಮಾಡಬೇಕು ಎಂದು ಸಲಹೆ ನೀಡಿದರು.

ಪ್ರಸ್ತುತ ದಿನಗಳಲ್ಲಿ ಆಹಾರ, ನೀರು, ಗಾಳಿ ಹಾಗೂ ವಾತಾವರಣ ಎಲ್ಲವೂ ಮಲಿನವಾಗಿದೆ ಹೀಗಾಗಿ, ಆರೋಗ್ಯ ಕಾಪಾಡಿಕೊಳ್ಳುವುದಕ್ಕೆ ಮಹತ್ವ ಕೊಡಬೇಕು. ಯೋಗಾಭ್ಯಾಸ, ವ್ಯಾಯಾಮ ಅಥವಾ ವಾಕಿಂಗ್ ಮೂಲಕ ಫಿಟ್‌ನೆಸ್ ಕಾಪಾಡಿಕೊಳ್ಳಬೇಕು. ದೈಹಿಕವಾಗಿ ಫಿಟ್ ಆಗಿದ್ದರೆ ಮಾನಸಿಕವಾಗಿಯೂ ಫಿಟ್ ಆಗಿರಬಹುದು. ದೈಹಿಕ ಮತ್ತು ಮಾನಸಿಕ ಆರೋಗ್ಯದಲ್ಲಿ ವ್ಯತ್ಯಾಸವಾದರೆ ಕಿನ್ನತೆಗಳಿಗೆ ಒಳಗಾಗುವ ಸಾಧ್ಯತೆ ಹೆಚ್ಚು ಎಂದು ಎಚ್ಚರಿಸಿದರು.

40 ವರ್ಷ ವಯಸ್ಸಿನ ನಂತರ ಒಂದಿಲ್ಲೊಂದು ಸಮಸ್ಯೆಗಳು ಬರುತ್ತವೆ. ವಯಸ್ಸಾದಂತೆ ಮರೆಗುಳಿತನದ ಕಾಯಿಲೆಗಳು ಕಾಣಿಸಿಕೊಳ್ಳುತ್ತಿವೆ. ಒಂಟಿಯಾಗಿರುವುದು ಮರೆಯುವಿಕಗೆ ದೊಡ್ಡ ಕಾರಣ. ಬೇರೆಯವರನ್ನು ಮೆಚ್ಚಿಸುವು ದಕಲ್ಲ ನಿಮ್ಮ ಆರೋಗ್ಯ ಕಾಪಾಡಿ ಕೊಳ್ಳಲು ಯೋಗಾಭ್ಯಾಸ ಮಾಡಿ. ವಿಶ್ವಕ್ಕೆ ಯೋಗದ ಪರಿಕಲ್ಪನೆ ನೀಡಿದ್ದು, ಮೈಸೂರು ಎಂದು ಹೆಮ್ಮೆಯಿಂದ ಪ್ರವಾಸ ಮಾಡಿದ ಕಡೆಯಲ್ಲಾ ಹೇಳುಕೊಳ್ಳುತ್ತೇನೆ ಎಂದರು.

ಬಹು ಚಿಕಿತ್ಸಾ ಪದ್ಧತಿ ಅಗತ್ಯ: ಮರೆಯುವಿಕೆ ಸಾಮಾನ್ಯವಾಗಿ ವಯಸ್ಸಾದವರಲ್ಲಿ ಕಾಣಿಸಿಕೊಳ್ಳುವ ಕಾಯಿಲೆಯಾಗಿದೆ. ವಯಸ್ಸಾದಂತೆ ಸಕ್ಕರೆ ಕಾಯಿಲೆ, ರಕ್ತದೊತ್ತಡ ಇನ್ನಿತರೆ ಕಾಯಿಲೆಗಳು ಬರುವುದರಿಂದ ಒಂದೇ ಚಿಕಿತ್ಸೆಯಿಂದ ಮರೆಯುವಿಕೆ ಗುಣಪಡಿಸಕೊಳ್ಳಲು ಸಾಧ್ಯವಿಲ್ಲ. ಹೀಗಾಗಿ, ಬಹು ಚಿಕಿತ್ಸಾ ಪದ್ಧತಿಗಳ ಮೂಲಕ ನಿರ್ವಹಣೆ ಇಂದಿನ ಅಗತ್ಯವಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಆಯುರ್ವೇದ ಚಿಕಿತ್ಸಾ ಪದ್ಧತಿಯು ಪಥ್ಯ, ಧ್ಯಾನ ಹಾಗೂ ಔಷಧಿಗಳ ಪ್ರಯೋಗದ ಸಮ್ಮಿಶ್ರಣವಾಗಿದ್ದು, ಇದು ವ್ಯಕ್ತಿ ಹಾಗೂ ರೋಗವೆರಡನ್ನೂ ಗುರಿಯಾಗಿಟ್ಟುಕೊಂಡು ಚಿಕಿತ್ಸೆ ಕೊಡುವುದಾಗಿದೆ. ಆದ್ದರಿಂದ ಯಾವ ಸಂದರ್ಭದಲ್ಲಿ ಯಾವ ಪದ್ಧತಿಯ ಚಿಕಿತ್ಸೆ ಪಡೆದುಕೊಳ್ಳಬೇಕು ಎಂಬ ಜಾಗೃತಿಯನ್ನು ಜನರಲ್ಲಿ ಮೂಡಿಸಬೇಕಾದ ಅಗತ್ಯವಿದೆ. ಮನಸ್ಸು ಮತ್ತು ಇಂದ್ರಿಯವನ್ನು ನಿಗ್ರಹಿಸದೇ ಕೇವಲ ಯೋಗಾಭ್ಯಾಸ ಮಾಡುವುದರಿಂದ ಪ್ರಯೋಜನವಾಗದು. ಎಲ್ಲ ಚಿಕಿತ್ಸಾ ಪದ್ಧತಿಯಲ್ಲೂ ಇರುವ ವೈಜ್ಞಾನಿಕ ಅಂಶಗಳನ್ನು ಬಳಸಿಕೊಂಡರೆ ರೋಗಗಳ ನಿರ್ವಹಣೆ ಕಷ್ಟವೇನೂ ಆಗಲಾರದು ಎಂದು ಹೇಳಿದರು.

ಮಾಹಿತಿ ಕಲೆಹಾಕುತ್ತಿದ್ದೇವೆ: ಎಆರ್‌ಡಿಎಸ್‌ಐ ಮೈಸೂರು ಅಧ್ಯಕ್ಷ ಹನುಮಂತಾಚಾರ್ ಜೋಶಿ ಮಾತನಾಡಿ, 'ಡಿಮೆನ್ಷಿಯಾ ಫ್ರೆಂಡ್ಲಿ ಮೈಸೂರು' ಕಾರ್ಯಕ್ರಮದ ಮೂಲಕ ಮೈಸೂರು ನಗರದಲ್ಲಿ ಎಷ್ಟು ಜನರು ಮರೆಯುವಿಕೆಯಂತಹ ಸಮಸ್ಯೆ ಎದುರಿಸುತ್ತಿದ್ದಾರೆ ಎಂಬುದರ ಮಾಹಿತಿ ಕಲೆ ಹಾಕಲಾಗುವುದು. ಹಾಗೆಯೇ ಅವರಲ್ಲಿ ಜಾಗೃತಿ ಮೂಡಿಸುವ ಕಾರ್ಯವೂ ನಡೆಯಲಿದೆ. ಆಕ್ಟಿವಿಟಿ ಸೆಂಟರ್ ಆರಂಭಿಸಲು ಉದ್ದೇಶಿಸಲಾಗಿದ್ದು, ಬ್ರೇನ್ ಜಿಮ್ಮಿಂಗ್ ಕೂಡ ಮಾಡಲಾಗುವುದು. ಇದೆಲ್ಲವನ್ನೂ ಸರ್ಕಾರೇತರ ಸಂಘ–ಸಂಸ್ಥೆಗಳ ಸಹಯೋಗದಲ್ಲಿ ಮಾಡಲಾಗುತ್ತಿದೆ ಎಂದು ತಿಳಿಸಿದರು. ಇದೇ ವೇಳೆ ಪ್ರಚಾರ ಸಾಮಗ್ರಿ ಬಿಡುಗಡೆ ಮಾಡಲಾಯಿತು. ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದ ಜಂಟಿ ನಿರ್ದೇಶಕ ಡಾ.ಲಕ್ಷ್ಮಿನಾರಾಯಣ್ ಶೆಣೈ, ರೋಟರಿ ಮೈಸೂರು ಅಧ್ಯಕ್ಷ ಪ್ರವೀಣ್ ಮತ್ತಿತರರು ಉಪಸ್ಥಿತರಿದ್ದರು.

ಸಾಮಾನ್ಯರ ರಾಜ್ಯಪಾಲ...

ಮೇಘಾಲಯದ ಬಹಳಷ್ಟು ಮಂದಿ ದೆಹಲಿಯವರು ರಾಜ್ಯಪಾಲರಾಗಿ ಬರುತ್ತಾರೆ ಎಂದುಕೊಂಡಿದ್ದರು. ಆದರೆ, ಪ್ರಧಾನಿ ನರೇಂದ್ರ ಮೋದಿ ಅವರು ಮೈಸೂರಿನವನಾದ ನನಗೆ ಅವಕಾಶ ನೀಡಿದ್ದು, ಸಾಮಾನ್ಯರ ರಾಜ್ಯಪಾಲನಾಗಿ ಸೇವೆ ಸಲ್ಲಿಸುತ್ತೇನೆ ಎಂದು ಮೇಘಾಲಯ ರಾಜ್ಯಪಾಲ ಸಿ.ಹೆಚ್.ವಿಜಯ್‌ಶಂಕರ್ ತಿಳಿಸಿದರು.

ಮೇಘಾಲಯ ಜನರು, ನಿಮ್ಮನ್ನು ನಮ್ಮವ ಎಂದುಕೊಳ್ಳಬೇಕು ಆ ರೀತಿ ನೀವು ಕಾರ್ಯನಿರ್ವಹಿಸಬೇಕು ಎಂದು ಪ್ರಧಾನಿ ಹೇಳಿದ್ದಾರೆ. ರಾಜಭವನದಿಂದ ಹೊರಬರಬೇಕು. ಸಾಮಾನ್ಯರ ರಾಜ್ಯಪಾಲರ ಎನಿಸಿಕೊಳ್ಳಬೇಕು. ಆದಿವಾಸಿಗಳನ್ನು ಭೇಟಿಯಾಗಬೇಕು ಶಾಲೆಗಳಿಗೆ ಹೋಗಬೇಕು. ಕೇಂದ್ರದಿಂದ ಬರುವ ಅನುದಾನ ಸಾಮಾನ್ಯ ಜನರಿಗೆ ತಲುಪುವಂತೆ ನೋಡಿಕೊಳ್ಳಬೇಕು ಎಂದು ಸೂಚಿಸಿದ್ದಾರೆ. ಅವರ ಸೂಚನೆಯಂತೆಯೇ ರಾಜಭವನದಲ್ಲಿ ಕೂರದೆ ಸಾಮಾನ್ಯರ ರಾಜ್ಯಪಾಲನಾಗಿ ಕೆಲಸ ಮಾಡುತ್ತೇನೆ ಎಂದರು.


ಮೇಘಾಲಯದಲ್ಲಿ ಮೈಸೂರು ಮಾದರಿ...!

ಮೇಘಾಲಯದಲ್ಲಿ ಆಸ್ತಿಯ ಹಕ್ಕು ಕುಟುಂಬದ ಕಿರಿಯ ಮಗಳಿಗಿದ್ದು, ಮದುವೆಯಾದ ನಂತರ ಗಂಡ ಪತ್ನಿಯ ಮನೆಯಲ್ಲಿರಬೇಕು. ಶೇ.90ರಷ್ಟು ಆದಿವಾಸಿಗಳಿರುವ ಮೇಘಾಲಯದಲ್ಲಿ ಒಬ್ಬರೇ ಒಬ್ಬರು ಭಿಕ್ಷುಕರು ಕಾಣಿಸುವುದಿಲ್ಲ. ನವ ಶಿಲ್ಲಾಂಗ್ ನಗರವನ್ನು 10 ಸಾವಿರ ಕೋಟಿ ರೂ.ವೆಚ್ಚದಲ್ಲಿ ನಿರ್ಮಿಸಲಾಗುತ್ತಿದ್ದು, ಅದಕ್ಕೆ ಮೈಸೂರನ್ನು ಮಾದರಿಯಾಗಿ ಇಟ್ಟುಕೊಳ್ಳಿ ಎಂದು ಅಧಿಕಾರಿಗಳಿಗೆ ತಿಳಿಸಿದ್ದೇನೆ. ಮೇಘಾಲಯವೂ ಈಗ ಮೈಸೂರಿನವರದ್ದೆ ಆಗಿದ್ದು, ಇಲ್ಲಿಯ ಪ್ರವಾಸಿಗರು ಮೇಘಾಲಯಕ್ಕೆ ಬರಬೇಕು ಎಂದು ಆಹ್ವಾನ ನೀಡುತ್ತೇನೆ.

– ಸಿ.ಹೆಚ್.ವಿಜಯಶಂಕರ್, ಮೇಘಾಲಯ ರಾಜ್ಯಪಾಲ

ನಾಗರಿಕ ಸೇವಾ ಮಂಡಳಿ ರಚನೆ ಕೋರಿ ಪಿಐಎಲ್: ರಾಜ್ಯ ಸರ್ಕಾರಕ್ಕೆ 'ಹೈ' ನೋಟಿಸ್

ಬೆಂಗಳೂರು, ಆ.21– ಭಾರತೀಯ ಆಡಳಿತ ಸೇವೆ ಅಧಿಕಾರಿಗಳ ವರ್ಗಾವಣೆ ಸೇರಿದಂತೆ ಒಂದು ನಿರ್ದಿಷ್ಟ ಸ್ಥಳ ಮತ್ತು ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುವ ಕನಿಷ್ಠ ಸೇವಾವಧಿ ನಿಗದಿಪಡಿಸುವ, ಕರ್ತವ್ಯ ನಿರ್ವಹಣೆ ವೇಳೆ ಅವರ ಹಿತಕಾಯುವ ಉದ್ದೇಶ ಹೊಂದಿರುವ 'ನಾಗರಿಕ ಸೇವಾ ಮಂಡಳಿ' (ಸಿಎಸ್‌ಬಿ) ರಚನೆ ಮಾಡುವಂತೆ ಕೋರಿ ಸಲ್ಲಿಸಲಾದ ಅರ್ಜಿ ಸಂಬಂಧ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನೋಟಿಸ್ ಜಾರಿ ಮಾಡಿದೆ.



ಸುಪ್ರೀಂಕೋರ್ಟ್ ನಿರ್ದೇಶನದಂತೆ ರಾಜ್ಯದಲ್ಲಿ ನಾಗರಿಕ ಸೇವಾ ಮಂಡಳಿ ರಚಿಸಬೇಕು ಮತ್ತು ನಾಗರಿಕ ಸೇವಕ ಅಧಿಕಾರಿಗಳ ಕನಿಷ್ಠ ಸೇವಾವಧಿ ನಿಗದಿಪಡಿಸಲು ಕ್ರಮ ಕೈಗೊಳ್ಳುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಬೇಕು ಎಂದು ಕೋರಿ ಸಾಮಾಜಿಕ ಕಾರ್ಯಕರ್ತ ರಿಷಬ್ ಟ್ರಾಕ್ರೂ ಎಂಬುವರು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು.

ಈ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಕೆ.ವಿ. ಅರವಿಂದ್ ಅವರಿದ್ದ ವಿಭಾಗೀಯ ಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ವಕೀಲೆ ಎಸ್. ಸುಶೀಲಾ ಅವರು, ಈಗಾಗಲೇ ದೇಶದ 20 ರಾಜ್ಯಗಳಲ್ಲಿ ಸಿಎಸ್‌ಬಿ ರಚನೆ ಆಗಿದೆ. ಕರ್ನಾಟಕದಲ್ಲಿ 2014ರಲ್ಲಿ ಮಂಡಳಿ ರಚಿಸಿ ನಂತರ ಅದನ್ನು ಅಮಾನತಿನಲ್ಲಿ ಇರಿಸಲಾಗಿದೆ. ನಂತರ ಮಂಡಳಿ ರಚನೆ ಸಂಬಂಧ ಹೈಕೋರ್ಟ್‌ನ ವಿಭಾಗೀಯ ನ್ಯಾಯಪೀಠ 2021ರಲ್ಲಿ ಆದೇಶ ನೀಡಿದೆ. ಆದಾಗ್ಯೂ, ರಾಜ್ಯದಲ್ಲಿ ಈವರೆಗೆ ನಾಗರಿಕ ಸೇವಾ ಮಂಡಳಿ ರಚನೆ ಆಗಿಲ್ಲ ಎಂಬ ವಿಚಾರವನ್ನು ನ್ಯಾಯಪೀಠದ ಗಮನಕ್ಕೆ ತಂದರು.

ಇದಕ್ಕೆ ಉತ್ತರಿಸಿದ ಸರ್ಕಾರದ ಪರ ವಕೀಲರು, ಅರ್ಜಿದಾರರು ಜುಲೈ 2024ರ 11ರಂದು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ. ಆದರೆ, ಆತುರಾತುರವಾಗಿ ಮನವಿ ಪರಿಶೀಲನೆಗೂ ಮುನ್ನವೇ ಜುಲೈ 18ರಂದು ಹೈಕೋರ್ಟ್‌ಗೆ ಈ ಅರ್ಜಿ ಸಲ್ಲಿಸಿದ್ದಾರೆ. ಅಂತೆಯೇ, ನ್ಯಾಯಾಲಯದ ಮುಂದೆ ಮಂಡಿಸಿರುವ ವಿವರಗಳನ್ನು ಸರ್ಕಾರಕ್ಕೆ ಸಲ್ಲಿಸಿರುವ ಮನವಿಯಲ್ಲಿ ಅಡಕಗೊಳಿಸಿಲ್ಲ. ಪರಿಷ್ಕೃತ ಮನವಿ ಸಲ್ಲಿಸಿದರೆ, ಅದನ್ನು ಪರಿಶೀಲಿಸಿ ಸರ್ಕಾರ ಮುಂದಿನ ಕ್ರಮ ಕೈಗೊಳ್ಳಲಿದೆ ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ಈ ವಿಷಯದಲ್ಲಿ ಸರ್ಕಾರದ ಕ್ರಮ ನ್ಯಾಯಾಂಗ ನಿಂದನೆಗೆ ಸಮಾನವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಅಲ್ಲದೆ, ಈ ಸಂಬಂಧ ಸರ್ಕಾರದ ನಿಲುವೇನು ಎಂಬುದನ್ನು ವಿವರಿಸಿ ಎಂದು ವಿಚಾರಣೆಯನ್ನು ಸೆಪ್ಟೆಂಬರ್ 9ಕ್ಕೆ ಮುಂದೂಡಿತು.

ರಾಜ್ಯಪಾಲ ಸಿ.ಹೆಚ್.ವಿಜಯಶಂಕರ್‌ಗೆ ಅಭಿನಂದನೆ




ಮೈಸೂರಲ್ಲಿ ನಡೆಯುತ್ತಿರುವ ಜೈನ ಮುನಿಗಳ ಚಾತುರ್ಮಾಸ ಕಾರ್ಯಕ್ರಮಕ್ಕೆ ಆಗಮಿಸಿದ ಮೇಘಾಲಯದ ರಾಜ್ಯಪಾಲರಾದ ಸಿ.ಹೆಚ್.ವಿಜಯಶಂಕರ್ ಅವರನ್ನು ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಜವರೇಗೌಡರ ನೇತೃತ್ವದಲ್ಲಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಶಿಕ್ಷಕರ ಸಂಘದ ಅಧ್ಯಕ್ಷ ಸೋಮೇಗೌಡ, ಖಜಾಂಚಿ ಮಹದೇವ್, ಬೋಧಕೇತರ ನೌಕರ ಸಂಘದ ಅಧ್ಯಕ್ಷ ಆನಂದ್, ಮಂಜುನಾಥ್, ಜೈನ ಸಮಾಜದ ಮುಖಂಡರು ಹಾಗೂ ಇತರರು ಹಾಜರಿದ್ದರು

ವಿಜಯೇಂದ್ರ ಟಿಕೆಟ್ ಕೊಡಿಸುವ ಭರವಸೆ ನೀಡಿದ್ದಾರೆ, ನನ್ನ ಸ್ಪರ್ಧೆ ಖಚಿತ

ರಾಮನಗರ,ಆ.21–ಚನ್ನಪಟ್ಟಣ ಮೈತ್ರಿ ಟಿಕೆಟ್ ಕಗ್ಗಂಟು ಮುಂದುವರಿದಿದ್ದು, ಟಿಕೆಟ್ ಗಿಟ್ಟಿಸಿಕೊಳ್ಳಲು ಮಾಜಿ ಸಚಿವ ಸಿ.ಪಿ.ಯೋಗೇಶ್ವರ್ ಪದೇ–ಪದೆ ದೆಹಲಿ ಪ್ರವಾಸ ಮಾಡುತ್ತಿದ್ದಾರೆ. ರಾಜ್ಯ ಬಿಜೆಪಿ ನಾಯಕರ ಜೊತೆ ಸಿ.ಪಿ. ಯೋಗೇಶ್ವರ್ ಸೋಮವಾರ ದೆಹಲಿಗೆ ತೆರಳಲಿದ್ದಾರೆ.

ಟಿಕೆಟ್ ವಿಚಾರವಾಗಿ ವರಿಷ್ಠರ ಜೊತೆ ಸಭೆ ನಡೆಯಲಿದ್ದು, ಸಭೆಯಲ್ಲಿ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ವಿ.ಸೋಮಣ್ಣ, ಬಸವರಾಜ್ ಬೊಮ್ಮಾಯಿ, ಡಾ.ಅಶ್ವಥ್ ನಾರಾಯಣ್, ಸಿ.ಟಿ.ರವಿ, ಅರವಿಂದ್ ಬೆಲ್ಲದ್ ಭಾಗಿಯಾಗಲಿದ್ದಾರೆ. ಅಮಿತ್ ಶಾ ಹಾಗೂ ಜೆ.ಪಿ.ನಡ್ಡಾ ನೇತೃತ್ವದಲ್ಲಿ ಸಭೆ ನಡೆಸಿ ಬಳಿಕ ಕುಮಾರಸ್ವಾಮಿ ಜೊತೆಗೂ ಬಿಜೆಪಿ ನಾಯಕರು ಚರ್ಚೆ ನಡೆಸಲಿದ್ದಾರೆ.

ಈ ಕುರಿತು ಚನ್ನಪಟ್ಟಣದಲ್ಲಿ ಮಾಧ್ಯಮಗಳೊಂದಿಗೆ



ಮಾತನಾಡಿದ ಮಾಜಿ ಸಚಿವ ಸಿ.ಪಿ. ಯೋಗೇಶ್ವರ್ ಟಿಕೆಟ್ ಸಿಗುವ ವಿಶ್ವಾಸ ವ್ಯಕ್ತಪಡಿಸಿದರು. ರಾಜ್ಯ ಬಿಜೆಪಿ ನಾಯಕರು ಜವಾಬ್ದಾರಿ ತೆಗೆದುಕೊಂಡು ಈ ಚುನಾವಣೆ ನಡೆಸಬೇಕು. ಇದರಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಹಾಗೂ ಹೆಚ್‌ಡಿಕೆ ಹೊಣೆಗಾರಿಕೆ ಇದೆ ಚನ್ನಪಟ್ಟಣ ಕ್ಷೇತ್ರದಲ್ಲಿ ಮೈತ್ರಿ ಅಭ್ಯರ್ಥಿ ಗೆಲ್ಲಬೇಕು. ಮುಂದಿನ ವಾರ ಎಲ್ಲಾ ಗೊಂದಲಕ್ಕೂ ತೆರೆ ಬೀಳಲಿದೆ. 100ಕ್ಕೆ 100ರಷ್ಟು ನನಗೆ ಟಿಕೆಟ್ ಸಿಗುವ ಭರವಸೆ ಇದೆ ಎಂದರು.

ಮೊದಲು ಎರಡೂ ಪಕ್ಷದ ನಾಯಕರ ಸಮನ್ವಯ ಸಭೆ ಆಗಬೇಕು. ಈ ಸಂಬಂಧ ಇಂದು ದೆಹಲಿಗೆ ಹೋಗಬೇಕಿತ್ತು. ಆದರೆ ಕೆಲಸ ರಾಜಕೀಯ ವಿದ್ಯಮಾನಗಳಿಂದ ಪ್ರವಾಸ ಮುಂದೂಡಿದ್ದೇವೆ. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ನನಗೆ ಟಿಕೆಟ್ ಕೊಡುವ ಮಾತು ಕೊಟ್ಟಿದ್ದಾರೆ. ಆದರೆ ಇದು ಕುಮಾರಸ್ವಾಮಿ ಅವರ ಕ್ಷೇತ್ರ. ಹಾಗಾಗಿ ವರಿಷ್ಠರ ಜೊತೆ ಮಾತನಾಡಿ ತೀರ್ಮಾನ ಮಾಡುತ್ತೇವೆ ಎಂದಿದ್ದಾರೆ. ಈ ವಿಚಾರದಲ್ಲಿ ರಾಜ್ಯ ಬಿಜೆಪಿ ನಾಯಕರು ನನ್ನ ಜೊತೆ ಇದ್ದಾರೆ. ಹಳೇ ಮೈಸೂರು ಭಾಗದಲ್ಲಿ ಬಿಜೆಪಿ ಗೆಲ್ಲುವ ಏಕೈಕ ಕ್ಷೇತ್ರ ಇದು. ಹಾಗಾಗಿ ಎರಡು ಪಕ್ಷದ ನಾಯಕರಿಗೆ ಟಿಕೆಟ್ ಕೊಡಿ ಅಂತ ಕೇಳಿದ್ದೇನೆ. ಹೆಚ್‌ಡಿಕೆಯನ್ನು ಎರಡು ಬಾರಿ ಭೇಟಿ ಮಾಡಿದ್ದೇನೆ. ಅವರು ಕೂಡ ಟಿಕೆಟ್ ಕೊಡಲು ಒಪ್ಪಿದ್ದಾರೆ. ನಾನು ಚುನಾವಣೆ ಸ್ಪರ್ಧೆ ಮಾಡೇ ಮಾಡುತ್ತೇನೆ. ನನ್ನ ಮೊದಲ ಆದ್ಯತೆ ಮಾತೃಪಕ್ಷ ಬಿಜೆಪಿಗೆ. ಇಲ್ಲವಾದರೇ ಮುಂದಿನ ಯೋಚನೆ ಮಾಡುತ್ತೇನೆ ಎಂದು ತಿಳಿಸಿದರು.

ನಾಪತ್ತೆಯಾಗಿ ಚುನಾವಣೆಯಲ್ಲಿ ಸೋತ ಮಾವಿನಹಳ್ಳಿ ಸಿದ್ದೇಗೌಡರ ನಡೆ ಸಂಶಯಾಸ್ಪದವಾಗಿದೆ

ಮುಡಾ ಅಧ್ಯಕ್ಷ ಕೆ.ಮರೀಗೌಡ ತಿರುಗೇಟು

ಮೈಸೂರು, ಆ. 21(ಆರ್‌ಕೆ)– ಚುನಾವಣೆಯಲ್ಲಿ ಯಾರ ಜೊತೆ ಹೊಂದಾಣಿಕೆ



ಮಾಡಿಕೊಂಡು ಚಾಮುಂಡೇಶ್ವರಿ ಕ್ಷೇತ್ರದಿಂದ ನಾಪತ್ತೆಯಾಗಿ ಪರಾಭವಗೊಂಡ ಮೈಮುಲ್ ಮಾಜಿ ಅಧ್ಯಕ್ಷ ಮಾವಿನಹಳ್ಳಿ ಸಿದ್ದೇಗೌಡ ಈಗ ಪ್ರತ್ಯಕ್ಷವಾಗಿ ನನ್ನ ವಿರುದ್ಧ ಆರೋಪ ಮಾಡಿರುವುದು ಸಂಶಯಾಸ್ಪದವಾಗಿದೆ ಎಂದು ಮುಡಾ ಅಧ್ಯಕ್ಷ ಕೆ.ಮರೀಗೌಡ ತಿರುಗೇಟು ನೀಡಿದ್ದಾರೆ.

ಮುಡಾ ರಾದ್ಧಾಂತಕ್ಕೆ ಅಧ್ಯಕ್ಷ ಮರೀಗೌಡ ಕಾರಣ ಎಂಬ ಹೇಳಿಕೆಯು ಸತ್ಯಕ್ಕೆ ದೂರವಾದುದು ಎಂದು ಪತ್ರಿಕಾ ಹೇಳಿಕೆ ನೀಡಿರುವ ಅವರು, ಇಷ್ಟು ದಿನಗಳ ಕಾಲ ಭೂಗತರಾಗಿದ್ದ ಸಿದ್ದೇಗೌಡ ಈಗ ನೇರವಾಗಿ ನನ್ನ ವಿರುದ್ಧ ಆರೋಪ ಮಾಡಿರುವುದು ಸರಿಯಲ್ಲ ಎಂದಿದ್ದಾರೆ.

2024ರ ಮಾರ್ಚ್ 1ರಂದು ಮುಡಾ ಅಧ್ಯಕ್ಷನಾಗಿ ಅಧಿಕಾರ ವಹಿಸಿಕೊಂಡ ನಂತರ ನಾನೇ ಶೇ. 50:50ರ ಅನುಪಾತದಡಿ ಹಾಗೂ ಪ್ರೋತ್ಸಾಹದಾಯಕ ನಿವೇಶನ ಹಂಚಿಕೆ ಸಂಬಂಧ 2020ರ ಸಭೆಯ ನಿರ್ಣಯದಂತೆ ಕ್ರಮ ವಹಿಸಬಾರದೆಂದು ಆಯುಕ್ತರಿಗೆ ಟಿಪ್ಪಣಿ ನೀಡಿದ್ದೇನೆ. ಈ ನಿರ್ಣಯ ಕೈಗೊಂಡಿರುವುದು ಬಿಜೆಪಿ ಸರ್ಕಾರವಿದ್ದಾಗ ಎಂದು ಅವರು ತಿಳಿಸಿದ್ದಾರೆ. ಆ ಅವಧಿಯಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿಗೆ 2021ರ ಡಿಸೆಂಬರ್ 30ರಂದು ನಿವೇಶನ ನೀಡಲಾಗಿದೆ. ಅವರನ್ನು ತೇಜೋವಧೆ ಮಾಡಲು ಬಿಜೆಪಿ–ಜೆಡಿಎಸ್‌ನವರು ಮಾಡಿರುವ ಷಡ್ಯಂತರ ಎಂದಿರುವ ಮರೀಗೌಡರು, ಇನ್ನು ಮುಂದೆ ನನ್ನ ವಿರುದ್ಧ ಆರೋಪ ಮಾಡುವ ಮುನ್ನ ಎಚ್ಚರವಿರಲಿ ಎಂದು ಸಿದ್ದೇಗೌಡರು ವಾಗ್ದಾಳಿ ನಡೆಸಿದ್ದಾರೆ

ದೇವರಾಜ ಅರಸು ಸಾಮರಸ್ಯ ಸಮಸಮಾಜದ ಸುಧಾರಕರು

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಅಭಿಮತ



ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಕರ್ನಾಟಕ ಸಂಭ್ರಮ ವೇದಿಕೆಯಲ್ಲಿ ಡಿ.ದೇವರಾಜ ಅರಸು ಅವರ 109ನೇ ಜನ್ಮದಿನಾಚರಣೆಯಲ್ಲಿ ದೇವರಾಜ ಅರಸು ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು.

ಮೈಸೂರು, ಆ.21–ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗಗಳನ್ನು ಸಾಮಾಜಿಕ, ಆರ್ಥಿಕ ನೆಲೆಗಟ್ಟಿನಲ್ಲಿ ಬದಲಾವಣೆ ತಂದು ಸಮಸಮಾಜದ ಸುಧಾರಕರು ಡಿ.ದೇವರಾಜ ಅರಸು ಎಂದು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಹೇಳಿದರು.

ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಕರ್ನಾಟಕ ಸಂಭ್ರಮ ವೇದಿಕೆಯಲ್ಲಿ ಡಿ.ದೇವರಾಜ ಅರಸುರವರ 109ನೇ ಜನ್ಮದಿನಾಚರಣೆಯಲ್ಲಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು.

ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಚಂದ್ರಶೇಖರ್ ಮಾತನಾಡಿ, ವಸ್ತುಪ್ರದರ್ಶನ ಮುಂಭಾಗ ಕನ್ನಡಾಂಬೆ ಭುವನೇಶ್ವರಿ ಬಯಲು ರಂಗಮಂದಿರ ಸ್ಥಾಪಿಸಿ ವರ್ಷಪೂರ್ತಿ ಸಾಂಸ್ಕೃತಿಕ ಪೌರಾಣಿಕ ಜಾನಪದ ನೃತ್ಯರೂಪಕ ಕಾರ್ಯಕ್ರಮಗಳಿಗೆ ಅವಕಾಶ ಕಲ್ಪಿಸಿಕೊಡಬೇಕು ಹಾಗೂ ವಸ್ತುಪ್ರದರ್ಶನ ಆವರಣದಲ್ಲಿ ದೇವರಾಜ ಅರಸರ ಪ್ರತಿಮೆ ನಿರ್ಮಿಸಬೇಕೆಂದು ಮನವಿ ಮಾಡಿದರು.

ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಪಾಲಿಕೆ ಮಾಜಿ ಸದಸ್ಯ ರಘುರಾಜೇ ಅರಸ್, ಜಿ.ರಾಘವೇಂದ್ರ, ಚೇತನ್ ಕಾಂತರಾಜು, ಕನ್ನಡಸಂಭ್ರಮ ವ್ಯವಸ್ಥಾಪಕ ಕೃಷ್ಣ, ವಿನಯ್ ಕಣಗಾಲ್, ಒಂಟಿಕೊಪ್ಪಲ್ ಗುರುರಾಜ್, ರಮೇಶ್, ಚಕ್ರಪಾಣಿ, ರಂಗಸ್ವಾಮಿ ಪಾಪು, ಪದ್ಮನಾಭನ್ ಗುಂಡ, ರವಿಚಂದ್ರ, ಹರೀಶ್ ನಾಯ್ದು ಇನ್ನಿತರರು ಇದ್ದರು.

ಡೆಂಗ್ಯೂ ನಿಯಂತ್ರಣಕ್ಕಾಗಿ ಗೋಕುಲಂನಲ್ಲಿ ಔಷಧಿ ಸಿಂಪಡಣೆ



ಮೈಸೂರು ಮಹಾನಗರಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ ಮಂಜು ಅವರು ಗೋಕುಲಂನ ಬೃಂದಾವನ ಬಡಾವಣೆಯಲ್ಲಿ ತಮ್ಮ ಸ್ವಂತ ಖರ್ಚಿನಿಂದ ಡೆಂಗ್ಯೂ ನಿಯಂತ್ರಣಕ್ಕಾಗಿ ಖಾಸಗಿಯವರ ಮೂಲಕ ಔಷಧಿ ಸಿಂಪಡಿಸಿದರು. ಈ ವೇಳೆ ಬಡಾವಣೆಯ ಮರಲಿಂಗು, ಸುರೇಶ್, ಭಾಗ್ಯಮ್ಮ, ಲೋಕೇಶ್ ಇನ್ನಿತರರಿದ್ದರು.

ಕ್ರೀಡಾ ಪೋಷಕ ಪ್ರಶಸ್ತಿಗೆ ಅರ್ಜಿ ಆಹ್ವಾನ

ಮೈಸೂರು,ಆ.21–2023–24ನೇ ಸಾಲಿನ ರಾಜ್ಯದ ಕ್ರೀಡಾ ಪೋಷಕರನ್ನು ಗುರುತಿಸಿ ಗೌರವಿಸಿ ಕ್ರೀಡಾ ಪೋಷಕ ಪ್ರಶಸ್ತಿಯನ್ನು ನೀಡಲು ಅರ್ಹ ಕ್ರೀಡಾ ಪೋಷಕರಿಂದ ಅರ್ಜಿ ಆಹ್ವಾನಿಸಲಾಗಿದೆ. ಕ್ರೀಡಾ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡು ಕ್ರೀಡೆಯ ಅಭಿವೃದ್ಧಿಗೆ ನೆರವು ನೀಡಿ 5 ವರ್ಷಗಳಲ್ಲಿ ರಾಜ್ಯ, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಕ್ರೀಡಾ ಕ್ಷೇತ್ರದಲ್ಲಿ ಕ್ರೀಡಾಪಟುಗಳು ಸಾಧನೆಗೈಯಲು ಕೊಡುಗೆ ನೀಡಿದ ಕ್ರೀಡಾಪೋಷಕರು ಈ ಪ್ರಶಸ್ತಿಗೆ ಅರ್ಹರಾಗಿದ್ದು, ರಾಜ್ಯದ ಪುರುಷ ಮತ್ತು ಮಹಿಳಾ ಕ್ರೀಡಾ ಪೋಷಕರು ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಭರ್ತಿ ಮಾಡಿ ಸೆ.15ರೊಳಗಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಕಚೇರಿಗೆ ಸಲ್ಲಿಸಬಹುದು. ಅರ್ಜಿ ನಮೂನೆಯೊಂದಿಗೆ ಕಡ್ಡಾಯವಾಗಿ ರಾಷ್ಟ್ರ ಮತ್ತು ಅಂತರಾಷ್ಟ್ರಮಟ್ಟದ ಕ್ರೀಡೆಗಳಲ್ಲಿ ಪ್ರಶಸ್ತಿ ನೀಡಿದ ವರ್ಷ ಸೇರಿದಂತೆ ಕಳೆದ 5 ವರ್ಷಗಳ ಕ್ರೀಡಾ ಸಾಧನೆಯ ಪ್ರಸ್ತಾವನೆ, ವರದಿ, ಪ್ರಶಸ್ತಿ, ಪ್ರಮಾಣ ಪತ್ರಗಳನ್ನು ಸಲ್ಲಿಸುವ ಪ್ರಮಾಣ ಪತ್ರಗಳನ್ನು ಸ್ವಯಂ ದೃಢೀಕರಿಸಿ ಸಲ್ಲಿಸುವುದು. ಈ ಹಿಂದೆ ಈಗಾಗಲೇ ಈ ಪ್ರಶಸ್ತಿಯನ್ನು ಪಡೆದವರು ಅರ್ಹರಿರುವುದಿಲ್ಲ. ಮಾಹಿತಿಗಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರ ಕಚೇರಿಯ ನೋಟೀಸ್ ಬೋರ್ಡ್ ಅಥವಾ ದೂ.ಸಂ: 0821–2564179 ಸಂಪರ್ಕಿಸಬಹುದು.

ರಂಗ ಶಿಕ್ಷಕರ ಹುದ್ದೆಗೆ ಅರ್ಜಿ ಆಹ್ವಾನ

ಮೈಸೂರು,ಆ.21– ರಂಗಾಯಣದ ವತಿಯಿಂದ 2024–25ನೇ ಸಾಲಿನ ರಂಗಶಾಲೆಗೆ ಒಂದು ವರ್ಷದ ರಂಗ ಶಿಕ್ಷಣದಲ್ಲಿನ ಡಿಪ್ಲೊಮೋ ಕೋರ್ಸ್‌ನಲ್ಲಿನ ರಂಗಶಿಕ್ಷಕರ, ಸಂಗೀತ ಶಿಕ್ಷಕರ ಅವಶ್ಯಕತೆಯಿದ್ದು, ಸದರಿ ತಾತ್ಕಾಲಿಕ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಸಂದರ್ಶನದ ಮೂಲಕ ಆಯ್ಕೆ ಮಾಡಿಕೊಳ್ಳಲಾಗುತ್ತದೆ. ರಂಗಭೂಮಿಯಲ್ಲಿ ಅನುಭವವಿರುವ ಅಭ್ಯರ್ಥಿಗಳು ರಾಷ್ಟ್ರೀಯ ನಾಟಕ ಶಾಲೆಯಿಂದ ಪದವಿ, ರಾಜ್ಯದ ಯಾವುದೇ ರಂಗಶಿಕ್ಷಣ ಕೇಂದ್ರದಿಂದ ರಂಗಶಿಕ್ಷಣ ಪದವಿ, ಡಿಪ್ಲೊಮಾ ಪಡೆದವರಾಗಿರಬೇಕು. ರಂಗಭೂಮಿ ಅನುಭವ, ರಂಗಶಿಕ್ಷಣದಲ್ಲಿ ಶಿಕ್ಷಕರಾಗಿ ದುಡಿದ ಅನುಭವ ಇರುವ ಅರ್ಹ ಆಸಕ್ತರು ಅರ್ಜಿ ನಮೂನೆಯನ್ನು www.rangayanamysore.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಂಡು ಆ.28ರೊಳಗೆ ರಂಗಾಯಣದ ಉಪ ನಿರ್ದೇಶಕರ ವಿಳಾಸಕ್ಕೆ ಅರ್ಜಿ ಸಲ್ಲಿಸುವುದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ:0821–2512639 ಅನ್ನು ಸಂಪರ್ಕಿಸುವುದು.

ಎಸ್‌ಟಿ/ಎಸ್‌ಸಿ ವಿದ್ಯಾರ್ಥಿನಿಲಯಗಳಲ್ಲಿ ಸ್ಥಳಾವಕಾಶದ ಕೊರತೆ: ಪರಿಹಾರ ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ಹೈಕೋರ್ಟ್ ಸೂಚನೆ

ಬೆಂಗಳೂರು, ಆ.21– ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಹಾಸ್ಟೆಲ್‌ಗಳಲ್ಲಿ ಮಿತಿಗಿಂತ ಹೆಚ್ಚಿನ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಕಲ್ಪಿಸಿರುವುದಕ್ಕೆ ಹೈಕೋರ್ಟ್ ಮಂಗಳವಾರ ಅಸಮಾಧಾನ ವ್ಯಕ್ತಪಡಿಸಿದ್ದು, ಪರಿಹಾರ ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ಸೂಚನೆ ನೀಡಿದೆ.

ಈ ಕುರಿತು ಸ್ವಯಂಪ್ರೇರಿತವಾಗಿ ದಾಖಲಿಸಿಕೊಂಡಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಕೆ.ವಿ.ಅರವಿಂದ್ ಅವರಿದ್ದ ವಿಭಾಗೀಯ ಪೀಠ ಈ ಸೂಚನೆ ನೀಡಿದೆ. ವಿಚಾರಣೆ ವೇಳೆ ಸರ್ಕಾರಿ ಪರ ವಕೀಲರು, ರಾಜ್ಯದ ಎಸ್‌ಟಿ/ಎಸ್‌ಸಿ ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳ ಪ್ರವೇಶ ಮಿತಿ ಹಾಗೂ ಸದ್ಯ ಇರುವ ಸಂಖ್ಯೆ, ವಾರ್ಡನ ಹುದ್ದೆಗಳ ಮಾಹಿತಿ ಹೊಂದಿದ ಕಂಡಾಯ ವಿಭಾಗವಾರು ವರದಿಯನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು.

ವರದಿಯಲ್ಲಿ ಉತ್ತರ ಕನ್ನಡ ಜಿಲ್ಲೆ ಶಿರಸಿಯ ಮೆಟ್ರಿಕ್‌ಪೂರ್ವ ವಿದ್ಯಾರ್ಥಿ ನಿಲಯಗಳಲ್ಲಿ ಪ್ರವೇಶ ಮಿತಿ 50 ಇದ್ದು, ಅಲ್ಲಿ 150 ವಿದ್ಯಾರ್ಥಿಗಳು ಇದ್ದಾರೆ. ಕೊಪ್ಪಳದ ಹಾಸ್ಟೆಲ್‌ನಲ್ಲಿ 75 ಪ್ರವೇಶ ಮಿತಿ ಇದ್ದರೆ, 214 ವಿದ್ಯಾರ್ಥಿಗಳು ಇದ್ದಾರೆ. ರಾಜ್ಯದ ಬಹುತೇಕ ವಿದ್ಯಾರ್ಥಿ ನಿಲಯಗಳ ಸ್ಥಿತಿ ಇದೇ ಆಗಿದೆ. ಎಸ್ಸಿ–ಎಸ್ಟಿ ವಿದ್ಯಾರ್ಥಿಗಳನ್ನು ಈ ರೀತಿಯಾಗಿ ನಡೆಸಿಕೊಳ್ಳಲಾಗುತ್ತಿರುವ ಬಗ್ಗೆ ಸರ್ಕಾರ ತಕ್ಷಣ ಗಮನ ಹರಿಸಿ ಪರಿಹಾರ ಕ್ರಮಗಳನ್ನು ಕೈಗೊಳ್ಳುವ ತುರ್ತು ಅವಶ್ಯಕತೆ ಇದೆ. ಅಲ್ಲದೆ, 1890 ಹಿರಿಯ ವಾರ್ಡನ್ ಹುದ್ದೆಗಳಲ್ಲಿ 1342 ಭರ್ತಿ ಆಗಿದ್ದು, 548 ಹುದ್ದೆಗಳು ಖಾಲಿ ಇವೆ. 518 ಕಿರಿಯ ವಾರ್ಡನ್ ಹುದ್ದೆಗಳ ಪೈಕಿ 465 ಭರ್ತಿ ಆಗಿದ್ದು, 53 ಹುದ್ದೆಗಳು ಖಾಲಿ ಇವೆ. ಈ ನಿಟ್ಟಿನಲ್ಲಿಯೂ ಸರ್ಕಾರ ಗಮನಹರಿಸಬೇಕಿದೆ ಎಂದು ನ್ಯಾಯಪೀಠ ಹೇಳಿತು. ಹಾಸ್ಟೆಲ್‌ಗಳಲ್ಲಿ ಮಿತಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಿರುವುದರಿಂದ ಎಸ್‌ಟಿ/ಎಸ್‌ಸಿ ವಿದ್ಯಾರ್ಥಿಗಳು ಹಾಸ್ಟೆಲ್‌ಗಳಲ್ಲಿ ಘನತೆ–ಗೌರವದಿಂದ ಇರುವುದಕ್ಕೆ ಸರ್ಕಾರದ ಬಳಿ ಇರುವ ಪರಿಹಾರ ಕ್ರಮವೇನು, ಖಾಲಿ ಹುದ್ದೆಗಳ ಭರ್ತಿಗೆ ಯಾವ ಕ್ರಮ ಕೈಗೊಳ್ಳಲಾಗುವುದು ಎಂಬ ಬಗ್ಗೆ ವಿವರವಾದ ವರದಿಯನ್ನು ಸಲ್ಲಿಸುವಂತೆ ಸರ್ಕಾರಕ್ಕೆ ಸೂಚಿಸಿ ವಿಚಾರಣೆಯನ್ನು ಸೆ.30ಕ್ಕೆ ಮುಂದೂಡಿತು.

ರಂಗಾಯಣ ನಿರ್ದೇಶಕರಿಗೆ ಸ್ವಾಗತ...



ರಂಗಾಯಣದ ನಿರ್ದೇಶಕರಾಗಿ ಅಧಿಕಾರ ಸ್ವೀಕರಿಸಿದ ಸತೀಶ್ ತಿಪಟೂರು ಅವರನ್ನು ಕದಂಬ ರಂಗವೇದಿಕೆ ಪರವಾಗಿ ಅಧ್ಯಕ್ಷ ರಾಜಶೇಖರ ಕದಂಬ ಹೂಗುಚ್ಛ ನೀಡಿ, ಸ್ವಾಗತಿಸಿದರು. ಕನ್ನಡ–ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಸದಸ್ಯರಾದ ತಿಪ್ಪಣ್ಣ, ಯು.ಎಸ್.ರಾಮಣ್ಣ, ಅಶ್ವತ್ಥ ಕದಂಬ ಇದ್ದಾರೆ.

ಮೇಘಾಲಯ ರಾಜ್ಯಪಾಲರಿಗೆ ರಕ್ಷಾ ಬಂಧನ

ಮೈಸೂರು, ಆ.21– ಪ್ರಜಾಪಿತ ಬ್ರಹ್ಮಾ ಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಯಾದವಗಿರಿ ಸೇವಾ ಕೇಂದ್ರದಲ್ಲಿ ಏರ್ಪಡಿಸಿದ್ದ ರಕ್ಷಾ ಬಂಧನ ಮಹೋತ್ಸವದಲ್ಲಿ ಭಾಗವಹಿಸಿದ್ದ ಮೇಘಾಲಯ ರಾಜ್ಯಪಾಲ ಸಿ.ಎಚ್. ವಿಜಯಶಂಕರ್ ಅವರಿಗೆ ಬಿ.ಕೆ. ಲಕ್ಷ್ಮೀಜಿ ಶ್ರೀರಕ್ಷೆಯನ್ನು ನೀಡಿ ಶುಭ ಹಾರೈಸಿದರು.


ವಿಜಯಶಂಕರ್ ಮಾತನಾಡಿ, ರಕ್ಷಾ ಬಂಧನದಲ್ಲಿ ಪಾಲ್ಗೊಂಡಿದ್ದಕ್ಕೆ ಅತೀವ ಸಂತಸ ವ್ಯಕ್ತಪಡಿಸಿ ರಾಜಕೀಯ ಜೀವನದ ನೂತನ ಅಧ್ಯಾಯಕ್ಕೆ ತಾವು ಒಮ್ಮನಸ್ಸಿನಿಂದ ಮತ್ತು ಉತ್ಸಾಹದಿಂದ ಹೃದಯವನ್ನು ತೆರೆದುಕೊಂಡಿದ್ದೇನೆ ಎಂದರು.

60 ಶಾಸಕರಿರುವ ಈ ಪುಟ್ಟ ರಾಜ್ಯದ ಜನಸಂಖ್ಯೆಯಲ್ಲಿ ಹೆಚ್ಚಿನಂಶ ಬುಡಕಟ್ಟಿನವರೇ ಇದ್ದು, ಸರಳ ಜೀವನ ನಡೆಸುತ್ತಾರೆ. ಅಲ್ಲಿ ನಾನು ಮನಃ ಪೂರ್ತಿಯಾಗಿ ಜನಸೇವೆ ಮಾಡಲು ಸಿದ್ಧನಿದ್ದು ತಮ್ಮೆಲ್ಲರ ಆಶೀರ್ವಾದದ ಅಗತ್ಯವಿದೆ. ನಾನು ಸಾರ್ವಜನಿಕ ಕ್ಷೇತ್ರದಲ್ಲಿ ರಾಜ್ಯದ ಮಂತ್ರಿಯಾಗಿ, ಸಂಸದನಾಗಿ, ಶಾಸಕನಾಗಿ ಪಡೆದಿರುವ ಅನುಭವವನ್ನು ಅಲ್ಲಿಯ ಜನರ ಸೇವೆಯಲ್ಲಿ ವಿನಿಯೋಗಿಸಲು ಇಚ್ಛಿಸುತ್ತೇನೆ. ಈ ಬಗ್ಗೆ ಪ್ರಧಾನ ಮಂತ್ರಿಯವರೂ ಕೂಡ ನನಗೆ ಸಲಹೆ ಸೂಚನೆಗಳನ್ನು ನೀಡಿದ್ದು ಗ್ರಾಮೀಣ ಪ್ರದೇಶಗಳಿಗೆ ತೆರಳಿ ಅವರ ಜೊತೆಯಲ್ಲಿದ್ದು, ಕಷ್ಟ ಸುಖಗಳಲ್ಲಿ ಭಾಗಿಯಾಗಬೇಕು ಎಂದಿದ್ದಾರೆ. ಅಲ್ಲಿಂದ ನಾನು ಹಿಂತಿರುಗಿ ಬರುವಷ್ಟರಲ್ಲಿ ಅವರ ಋಣ ತೀರಿಸುತ್ತೇನೆ. ದೈವ ಮತ್ತು ತಮ್ಮೆಲ್ಲರ ಶುಭ ಹಾರೈಕೆ ನನ್ನೊಟ್ಟಿಗೆ ಇದೆ ಎಂದರು.



ಮೇಘಾಲಯ ರಾಜ್ಯಪಾಲ ಸಿ.ಎಚ್. ವಿಜಯಶಂಕರ್ ಅವರಿಗೆ ಬಿ.ಕೆ.ಲಕ್ಷ್ಮೀಜಿ ಶ್ರೀರಕ್ಷೆ ನೀಡಿ, ಶುಭ ಹಾರೈಸಿದರು.

ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ



ಮೈಸೂರು,ಆ.21– ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ವತಿಯಿಂದ ಪದವಿಪೂರ್ವ ಮತ್ತು ಸ್ನಾತಕೋತ್ತರ ಕೇಂದ್ರಕ್ಕಾಗಿ ಹಿಂದುಳಿದ ಸಮುದಾಯಗಳ ವಿದ್ಯಾರ್ಥಿಗಳನ್ನು ಬೆಂಬಲಿಸುವ ಉದ್ದೇಶ ದಿಂದ ವಿತರಣಾ ಕಾರ್ಯಕ್ರಮದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅರ್ಹ ವಿದ್ಯಾರ್ಥಿಗಳಿಗೆ 68 ಲ್ಯಾಪ್ ಟಾಪ್‌ಗಳನ್ನು ನೀಡಲಾಯಿತು.

ಪ್ರಾದೇಶಿಕ ನಿರ್ದೇಶಕ ಪ್ರೊ.ಟಿ.ಪಿ. ರೇಣುಕಾಮೂರ್ತಿ ಅವರು ಮಾತನಾಡಿ, ಲ್ಯಾಪ್‌ಟಾಪ್‌ಗಳನ್ನು ಶೈಕ್ಷಣಿಕ ಉದ್ದೇಶಕ್ಕೆ ಬಳಸಿಕೊಳ್ಳಬೇಕು. ಲ್ಯಾಪ್‌ಟಾಪ್‌ಗಳು ನಿಮ್ಮ ಯಶಸ್ಸಿಗೆ ಸಾಧನಗಳಾಗಿವೆ. ನಿಮ್ಮ ಕಲಿಕೆಯನ್ನು ಹೆಚ್ಚಿಸಲು ಮತ್ತು ನಿಮ್ಮ ಗುರಿಗಳನ್ನು ಸಾಧಿಸಲು ಬುದ್ಧಿವಂತಿಕೆಯಿಂದ ಬಳಸಿ ಎಂದು ಹೇಳಿದರು.

ನನ್ನ ಕಾಲೇಜು ದಿನಗಳಲ್ಲಿ, ನಮ್ಮಲ್ಲಿ ಲ್ಯಾಪ್‌ಟಾಪ್‌ಗಳಿರಲಿಲ್ಲ, ನಾವು ಮಾಹಿತಿಯನ್ನು ಪಡೆಯಲು ಮತ್ತು ನಮ್ಮ ಅಧ್ಯಯನವನ್ನು ಪೂರ್ಣಗೊಳಿಸಲು ಕಷ್ಟಪಡುತ್ತಿದ್ದೆವು. ಈಗ ನಿಮ್ಮ ಬೆರಳ ತುದಿಯಲ್ಲಿ ಅಮೂಲ್ಯವಾದ ಸಂಪನ್ಮೂಲವಿದೆ. ಅದರಿಂದ ಹೆಚ್ಚಿನದನ್ನು ಕಲಿತು ಪಡೆಯಿರಿ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಸಂಯೋಜಕರಾದ ಪ್ರೊ. ಆರ್.ಸುರೇಶ್, ಪ್ರೊ. ಅಲಿ ಅಹಮದ್, ಡಾ.ಕೀರ್ತಿಗೌಡ, ವಿಶೇಷಾಧಿಕಾರಿಯಾದ ಪ್ರಕೃತಿ ಪಿಎಸ್ಸಿ, ಎಸ್‌ಟಿ ವಿಭಾಗದ ಸಮಿತಿ ಸದಸ್ಯರಾದ ಡಾ. ಕವಿತಾ ಮತ್ತು ಡಾ.ಪುಷ್ಪಲತಾ .ಆರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ವರಮಹಾಲಕ್ಷ್ಮಿ ಸೆಲ್ಫಿ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಣೆ

ಮೈಸೂರು, ಆ.21– ಕೆಎಂಪಿಕೆ ಚಾರಿಟೆಬಲ್ ಟ್ರಸ್ಟ್ ವರಮಹಾಲಕ್ಷ್ಮಿ ಹಬ್ಬದ ಅಂಗವಾಗಿ ಮಹಿಳೆಯರಿಗಾಗಿ ಆಯೋಜಿಸಿದ ಆನ್‌ಲೈನ್ ವರಮಹಾಲಕ್ಷ್ಮಿ ಸೆಲ್ಫಿ ಸ್ಪರ್ಧೆಯಲ್ಲಿ 250ಕ್ಕೂ ಹೆಚ್ಚು ಸ್ಪರ್ಧಿಗಳು ಭಾಗವಹಿಸಿದ್ದು, ರಾಮಾನುಜಾ ರಸ್ತೆಯಲ್ಲಿರುವ ನಮೋ ಯೋಗ ಭವನದಲ್ಲಿ ವಿಜೇತರಾದ ರಿಷು ಪುರುಷೋತ್ತಮ್, ಪ್ರಮೀಳಾ ರಾಧಾಕೃಷ್ಣ, ಎಚ್.ಎಸ್. ಪ್ರೇಮಾವತಿ, ಗಾಯಿತ್ರಿ ಜಿ, ಚೈತ್ರ ಗುರುದತ್, ಹರ್ಷಿತ, ರೂಪಶ್ರೀ, ವಿಜಯಲಕ್ಷ್ಮಿ, ಕಲಾ, ಶೃತಿ, ಸುಧಾಬಾಯಿ, ಶಿಲ್ಪ ಅರುಣ್, ಹರ್ಷಿಣಿ ವಿಜಯ್, ನೇತ್ರಾವತಿ ಯಶವಂತ್ ಕುಮಾರ್, ಪ್ರೀತಿ ವಿನಯ್ ಅವರಿಗೆ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಬಹುಮಾನ ವಿತರಿಸಿದರು.

ನಂತರ ಮಾತನಾಡಿದ ಅವರು, ಮಕ್ಕಳಿಗೆ ಆಸ್ತಿಯನ್ನು ಮಾಡದೆ ಮಕ್ಕಳನ್ನೇ ಆಸ್ತಿ ಮಾಡಬೇಕು. ಮಾತ್ರವಲ್ಲದೆ ನಮ್ಮ ಧರ್ಮದ ಜಾಗೃತಿಯನ್ನು ಎಲ್ಲರಲ್ಲೂ ಮೂಡಿಸಬೇಕು. ಮಂದಿನ ಪೀಳಿಗೆಯ ಮಕ್ಕಳನ್ನು ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ ಪ್ರೇರೇಪಿಸಬೇಕು. ಈ ಮೂಲಕ ಹಿಂದೂ ಸನಾತನ ಸಂಸ್ಕೃತಿ ರಕ್ಷಿಸಬೇಕು ಎಂದರು.

ಕಾಂಗ್ರೆಸ್ ಯುವ ಮುಖಂಡ ಎನ್.ಎಂ. ನವೀನ್‌ಕುಮಾರ್ ಮಾತನಾಡಿ, ತಾಯಂದಿರನ್ನೆಲ್ಲಾ ತೊಡಗಿಸಿಕೊಂಡು ನಡೆಸಿಕೊಂಡು ಬರುವಂತಹ ಅತಿ ದೊಡ್ಡ ಹಬ್ಬ ಶ್ರೀ ವರಮಹಾಲಕ್ಷ್ಮಿ ವ್ರತ, ನಮ್ಮ ಸಂಸ್ಕಾರ ಸಂಸ್ಕೃತಿ ಉಳಿಯಬೇಕೆಂದರೆ ಇಂತಹ ಹಬ್ಬಗಳು ಎಲ್ಲಾ ಕಡೆಗಳಲ್ಲಿ ಒಟ್ಟುಗೂಡಿ ನಡೆಸಲ್ಪಡುವುದು ಅತಿ ಮುಖ್ಯವಾಗಿದೆ ಎಂದರು. ಪಾಲಿಕೆ ಮಾಜಿ ಸದಸ್ಯ ಮ.ವಿ.ರಾಮಪ್ರಸಾದ್, ಸಮೃದ್ಧಿ ವಾರ್ತಾ ಪತ್ರಿಕೆ ಸಂಪಾದಕಿ ಸಹನಾ, ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಚಿದನ್ವಿ ಟ್ರಸ್ಟ್ ಅಧ್ಯಕ್ಷೆ ನಾಗಮಣಿ, ಅಥರ್ವ ಸ್ಕಿಲ್ ಫೌಂಡೇಶನ್ ಅಧ್ಯಕ್ಷೆ ಪುಷ್ಪ, ವಿಕ್ರಂ ಅಯ್ಯಂಗಾರ್, ಅಜಯ್ ಶಾಸ್ತ್ರಿ, ಕೆ.ಆರ್. ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ, ಸಚಿಂದ್ರ, ಚಕ್ರಪಾಣಿ, ಇನ್ನಿತರರಿದ್ದರು.



ವರ ಮಹಾಲಕ್ಷ್ಮಿ ಸೆಲ್ಫಿ ಸ್ಪರ್ಧೆ ವಿಜೇತರಿಗೆ ಕೆಎಂಪಿಕೆ ಟ್ರಸ್ಟ್ ವತಿಯಿಂದ ಬಹುಮಾನ ವಿತರಿಸಲಾಯಿತು.

ವಿಚಿತ್ರ ಪ್ರೇಮಕಥೆ, ಪ್ರೀತಿಸಿ ಮದುವೆಯಾದ ಮೂವರು ಯುವತಿಯರು

ಅಮೆರಿಕಾ: ಸಲಿಂಗ ವಿವಾಹ ಅಂದರೆ ಇಬ್ಬರು ಪುರುಷರ ಅಥವಾ ಇಬ್ಬರು ಮಹಿಳೆಯರು ಪ್ರೀತಿಸಿ ಮದುವೆಯಾಗುವಂತದ್ದು ಇತ್ತೀಚಿನ ದಿನಗಳಲ್ಲಿ ಸಾಮಾನ್ಯವಾಗಿದೆ. ಆದರೆ ಇದೀಗ ಮತ್ತೊಂದು ವಿಚಿತ್ರ ಪ್ರೇಮ ಕಥೆ ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ವೈರಲ್ ಆಗುತ್ತಿದೆ. ಇಲ್ಲಿ ಮೂವರು ಯುವತಿಯರು ಒಬ್ಬರನ್ನೊಬ್ಬರು ಪ್ರೀತಿಸಿ ಮೂವರೂ ಮದುವೆಯಾಗಿದ್ದಾರೆ. ಸದ್ಯ ಇವರ ಮದುವೆಗೆ ಸಂಬಂಧಿಸಿದ ಫೋಟೋಗಳು ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ವೈರಲ್ ಆಗುತ್ತಿದೆ. ಈ ವಿಚಿತ್ರ ಸಂಬಂಧ ನಡೆದಿರುವುದು ಅಮೆರಿಕದ ಮಸಾಚುಸೆಟ್ಸ್‌ನಲ್ಲಿ. ಇಲ್ಲಿನ ಮೂವರು ಯುವತಿಯರು ಮದುವೆಯಾಗಿದ್ದು, ಒಂದೇ ಮನೆಯಲ್ಲಿ ಒಟ್ಟಿಗೆ ಜೀವನ ಸಾಗಿಸುತ್ತಿದ್ದಾರೆ. ಕೆಲವರು ಇವರ ಸಂಬಂಧವನ್ನು ದ್ವೇಷಿಸಿದರೆ, ಕೆಲವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ದೇಶ - ವಿದೇಶ

ಮೊಬೈಲ್‌ನಲ್ಲಿ ಸಾವಿರಾರು ನಗ್ನಚಿತ್ರ: ಅಮೆರಿಕದಲ್ಲಿ ಭಾರತೀಯ ವೈದ್ಯನ ಬಂಧನ

ಡೆಟ್ರಾಯಿಟ್: ಮಹಿಳೆಯರು, ಯುವತಿಯರು ಹಾಗೂ ಅಪ್ರಾಪ್ತ ವಯಸ್ಸಿನ ಹೆಣ್ಣು ಮಕ್ಕಳ ನಗ್ನ ಫೋಟೋ ತೆಗೆದು ಮೊಬೈಲ್‌ನಲ್ಲಿ ಸಂಗ್ರಹಿಸಿಕೊಂಡಿದ್ದ ಭಾರತೀಯ ಮೂಲದ ವೈದ್ಯನೊಬ್ಬನನ್ನು ಅಮೆರಿಕಾದ ಮಿಚಿಗನ್ ರಾಜ್ಯದ ಡೆಟ್ರಾಯಿಟ್ ನಗರದಲ್ಲಿ ಬಂಧಿಸಲಾಗಿದೆ.



ಈ ವಿಕೃತ ಕಾಮಿ ವೈದ್ಯ ಸ್ವಿಮ್ಮಿಂಗ್ ಶಾಲೆಗಳು, ಆಸ್ಪತ್ರೆಯ ಬೆಡ್‌ಗಳು ಸೇರಿದಂತೆ ಹಲವೆಡೆ ಮಹಿಳೆಯರು, ಮಕ್ಕಳು ಬಟ್ಟೆ ಬದಲಿಸುವ ವೇಳೆ ಬೆತ್ತಲೆಯಾಗಿದ್ದ ಫೋಟೋ ಹಾಗೂ ವಿಡಿಯೋ ಚಿತ್ರೀಕರಿಸಿದ್ದ ಎಂದು ತನಿಖೆ ವೇಳೆ ತಿಳಿದು ಬಂದಿದೆ. ಈತನ ಹೆಸರು ಡಾ.ಓಮೈರ್ ಏಜಾಜ್ (40). ರೋಚೆಸ್ಟರ್ ಹಿಲ್ಸ್‌ನಲ್ಲಿರುವ ಈತನ ಮನೆಯಿಂದಲೇ ಆರೋಪಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಈತನ ವಿರುದ್ಧ ಸಾಕ್ಷ್ಯಾಧಾರಗಳನ್ನು ತೋರಿಸಿ ವಿಚಾರಣೆ ನಡೆಸಿದ ವೇಳೆ ಆರೋಪಿ ತನ್ನ ಮೇಲಿನ ಆರೋಪ ಒಪ್ಪಿಕೊಂಡಿದ್ದಾನೆ. ತನ್ನ ಗಂಡನ ಮೊಬೈಲ್‌ನಲ್ಲಿ ಅಸಹ್ಯಕರವಾದ ಫೋಟೋ, ವಿಡಿಯೋಗಳು ಇವೆ ಎಂದು ಖುದ್ದು ವೈದ್ಯನ ಹೆಂಡತಿಯೇ ಪೊಲೀಸರಿಗೆ ಮಾಹಿತಿ ನೀಡಿದ್ದರು ಎಂಬ ಮಾಹಿತಿಯೂ ಸಿಕ್ಕಿದೆ.

100 ಕೋಟಿ ಮೌಲ್ಯದ ಆಸ್ತಿ ಬಿಟ್ಟು ನಿತ್ಯಾನಂದನ ಕೈಲಾಸ ಸೇರಿದ ಸುಂದರಿ

ಕಾಶಿ: ಭಾರತದ ಸುಶಿಕ್ಷಿತೆಯೊಬ್ಬಳು 100 ಕೋಟಿಗೂ ಹೆಚ್ಚು ಆಸ್ತಿಯನ್ನು ತ್ಯಜಿಸಿ ನಿತ್ಯಾನಂದ ಸ್ವಾಮಿಯ 'ಕೈಲಾಸ'ದಲ್ಲಿ ಸೇವೆಗೆ ನಿಂತಿದ್ದಾರೆ. ವಿಶ್ವಸಂಸ್ಥೆಯ ಸಭೆಯಲ್ಲಿ ಕೈಲಾಸದ ಪ್ರತಿನಿಧಿಯಾಗಿ ಭಾಗವಹಿಸಿ ಗಮನ ಸೆಳೆದಿದ್ದಳು. ಆಕೆಯೇ ವಿಜಯಪ್ರಿಯ,



ಕಾಶಿಯಲ್ಲಿ ಜನಿಸಿದ ಈಕೆ ಶೈಕ್ಷಣಿಕವಾಗಿ ಅನೇಕ ಸಾಧನೆ ಮಾಡಿದ್ದಾಳೆ. ಇಂಗ್ಲಿಷ್, ಫ್ರೆಂಚ್, ಹಿಂದಿ, ಕ್ರಿಯೋಲ್ ಮತ್ತು ಪಿಡ್ಜಿನ್ಸ್ ಹೀಗೆ ಹಲವು ಭಾಷೆಗಳು ಗೊತ್ತಿದೆ. 2014ರಲ್ಲಿ ಕೆನಡಾದ ಮ್ಯಾನಿಟೋಬಾ ವಿಶ್ವವಿದ್ಯಾಲಯದಿಂದ ಮೈಕ್ರೋಬಯಾಲಜಿಯಲ್ಲಿ ಪದವಿ ಪಡೆದಿದ್ದಾಳೆ ವಿಜಯಪ್ರಿಯ. ಜೊತೆಗೆ 2014 ರವರೆಗೂ ವಿಶ್ವವಿದ್ಯಾಲಯದ ಡೀನ್ ಹಾನರ್ಸ್ ಪಟ್ಟಿಯಲ್ಲಿದ್ದಳು. 2013 ಮತ್ತು 2014ರಲ್ಲಿ ಅಂತರ ರಾಷ್ಟ್ರೀಯ ಪದವಿಪೂರ್ವ ವಿದ್ಯಾರ್ಥಿವೇತನವನ್ನು ಸಹ ಪಡೆದಿದ್ದಾರೆ. 2023ರ ಮಾರ್ಚ್‌ನಲ್ಲಿ ವಿಶ್ವಸಂಸ್ಥೆಯ ಸಭೆಯಲ್ಲಿ 'ಕೈಲಾಸ'ದ ನಿಯೋಗವು ಎನ್‌ಜಿಒ ಹೆಸರಿನಲ್ಲಿ ಸಾರ್ವಜನಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದಾಗ ಈಕೆಯೇ ಪ್ರಮುಖ ಪ್ರತಿನಿಧಿಯಾಗಿ ನಿತ್ಯಾನಂದನ ಕೈಲಾಸದಿಂದ ಬಂದಿದ್ದಳು.

ಸೌಂದರ್ಯ ಹೆಚ್ಚಿಸಲು 6 ಲಕ್ಷ ಖರ್ಚು ಮಾಡಿ ಶಸ್ತ್ರಚಿಕಿತ್ಸೆಗೆ ಒಳಗಾದ ಮಹಿಳೆ ಸಾವು

ಬ್ರಿಟನ್: ಬ್ರಿಟನ್‌ನ ಮಹಿಳೆಯೊಬ್ಬರು ಕಾಸ್ಮೆಟಿಕ್ ಸರ್ಜರಿ ವೇಳೆ ಸಾವನ್ನಪ್ಪಿರುವ ಘಟನೆ ಬೆಳಕಿಗೆ ಬಂದಿದೆ. ಕೇಡೆಲ್ ಬ್ರೌನ್(38) ಮೃತ ಮಹಿಳೆ. ಈಕೆ 5,400 ಪೌಂಡ್ ಅಂದರೆ ಸುಮಾರು 6 ಲಕ್ಷ ರೂ. ವೆಚ್ಚದಲ್ಲಿ ಬಟ್ ಲಿಫ್ಟ್, ಹೊಟ್ಟೆ ಹಾಗೂ ಸ್ತನದ ಆಕಾರವನ್ನು ಹೆಚ್ಚಿಸುವ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ಆದರೆ ಇದೀಗ ಆರೋಗ್ಯವಾಗಿದ್ದ ಕೇಡೆಲ್ ಏಕಾಏಕಿ ಸಾವನ್ನಪ್ಪಿರುವುದು ವೈದ್ಯರ ನಿರ್ಲಕ್ಷ್ಯದಿಂದಲೇ ಎಂದು ಕುಟುಂಬಸ್ಥರು ಆರೋಪಿಸಿರುವುದಾಗಿ ದಿ ಸ್ಟ್ಯಾಂಡರ್ಡ್ ವರದಿ ಮಾಡಿದೆ. ಶಸ್ತ್ರಚಿಕಿತ್ಸೆಯಾದ ಕೇವಲ 10 ಗಂಟೆಗಳ ನಂತರ, ಕೇಡೆಲ್ ಆರೋಗ್ಯದಲ್ಲಿ ಏರುಪೇರಾಗಿದ್ದು, ಉಸಿರಾಟದ ಸಮಸ್ಯೆ ಕಾಣಿಸಿಕೊಂಡಿದ್ದು, ಕೆಲ ಗಂಟೆಗಳ ಬಳಿಕ ಮಹಿಳೆ ಸಾವನ್ನಪ್ಪಿರುವುದಾಗಿ ವೈದ್ಯರು ತಿಳಿಸಿದ್ದಾರೆ. ಆದರೆ ಮೃತದೇಹವನ್ನು ನೋಡಲು ಅನುಮತಿ ನೀಡಲಿಲ್ಲ ಮತ್ತು ಮರುದಿನ ವಿಮಾನ ನಿಲ್ದಾಣಕ್ಕೆ ಕಳುಹಿಸಲಾಯಿತು ಎಂದು ಕೇಡೆಲ್ ಸಹೋದರಿ ಲೀನ್ನೆ ಹೇಳಿಕೊಂಡಿದ್ದಾಳೆ.



ಕೇಡೆಲ್ ದೇಹವನ್ನು ಅಂತಿಮವಾಗಿ ಯುಕೆಗೆ ಹಿಂದಿರುಗಿಸಿದಾಗ, ಆಕೆಯ ಮೆದುಳು, ಶ್ವಾಸಕೋಶಗಳು, ಹೃದಯ ಮೃತದೇಹ ದಿಂದ ನಾಪತ್ತೆಯಾಗಿದ್ದವು. ವೈದ್ಯರ ನಿರ್ಲಕ್ಷ್ಯದಿಂದ ಸಾವು ಸಂಭವಿಸಿದೆ ಎಂದು ಕುಟುಂಬಸ್ಥರು ಆರೋಪಿಸಿದ್ದು, ಸದ್ಯ ತನಿಖೆ ಮುಂದುವರಿದಿದೆ.

ತಿರುಮಲದಲ್ಲಿ ಬೆಳಕಿಗೆ ಬಂತು ಹೊಸ ಹಗರಣ

ತಿರುಪತಿ: ಹೊಸ ಹಗರಣವೊಂದನ್ನು ತಿರುಮಲ ತಿರುಪತಿ ದೇವಸ್ಥಾನದ ವಿಜಿಲೆನ್ಸ್ ಅಧಿಕಾರಿಗಳು ಬೆಳಕಿಗೆ ತಂದಿದ್ದು, ನಕಲಿ ಟಿಕೆಟ್ ಖರೀದಿಸಿ ಶ್ರೀವಾರಿ ದರ್ಶನಕ್ಕೆ ತೆರಳುತ್ತಿದ್ದ ನಾಲ್ವರು ಭಕ್ತರನ್ನು ಪತ್ತೆ ಮಾಡಿದ್ದಾರೆ. ತಿರುಮಲ ತಿಮ್ಮಪ್ಪನ ದರ್ಶನಕ್ಕೆ ಬರುವ ಭಕ್ತಾದಿಗಳು ಸರ್ವ ದರ್ಶನಕ್ಕೆ ತೆರಳಿದರೆ ದೇವರ ದರ್ಶನಕ್ಕೆ 24 ಗಂಟೆ ಸಮಯ ತೆಗೆದುಕೊಳ್ಳುತ್ತದೆ. 300 ರೂ. ಟಿಕೆಟ್ ತೆಗೆದುಕೊಂಡರೆ ದರ್ಶನ ಸ್ವಲ್ಪ ಬೇಗ ಆಗುತ್ತದೆ. ಆದರೆ ಇದಕ್ಕೆ ನಾವು ಮೊದಲೇ ಟಿಕೆಟ್ ಕಾಯ್ದಿರಿಸಬೇಕಾಗುತ್ತದೆ. ಟಿಕೆಟ್ ಬುಕ್ ಮಾಡಿಕೊಳ್ಳದೇ ಬರುವ ಭಕ್ತರು ತಿರುಮಲದಲ್ಲಿ ಜನಜಂಗುಳಿಯನ್ನು ತಪ್ಪಿಸಿಕೊಂಡು ಬೇಗ ದರ್ಶನ ಪಡೆದುಕೊಳ್ಳಲು ಟಿಕೆಟ್‌ಗಾಗಿ ದಲ್ಲಾಳಿಗಳ ಮೊರೆ ಹೋಗುತ್ತಾರೆ. ಅಲ್ಲದೇ ಹೆಚ್ಚಿನ ಬೆಲೆಗೆ ಟಿಕೆಟ್ ಖರೀದಿಸುತ್ತಾರೆ. ಇದನ್ನೇ ಬಂಡವಾಳ ಮಾಡಿಕೊಂಡಿರುವ ದುಷ್ಕರ್ಮಿಗಳು ನಕಲಿ ಟಿಕೆಟ್ ಮಾರಾಟದಲ್ಲಿ ತೊಡಗಿದ್ದಾರೆ. ವಿಶೇಷ ಪ್ರವೇಶ ದರ್ಶನಕ್ಕೆ ನಾಲ್ಕು ಟಿಕೆಟ್‌ಗಳನ್ನು 11 ಸಾವಿರ ರೂಪಾಯಿಗೆ ನೀಡಿದ್ದ ರುದ್ರರಾಜು ಮತ್ತು ಅಮೃತಾ ಯಾದವ್ ಎಂಬುವವರ ವಿರುದ್ಧ ಪ್ರಕರಣ ದಾಖಲು ಮಾಡಿಕೊಂಡಿದ್ದಾರೆ.



ಸಮುದ್ರದ ಅಲೆಗಳ ಹೊಡೆತಕ್ಕೆ ಕೊಚ್ಚಿ ಹೋಯ್ತು 3 ಕೋಟಿ ರೂ. ಮನೆ

ನಾರ್ಥ್ ಕ್ಯಾರೋಲಿನ್: ಸುಂದರವಾದ ಮನೆಯೊಂದು ಸಮುದ್ರದ ಅಲೆಗಳ ಹೊಡೆತಕ್ಕೆ ಸಿಲುಕಿ ಧರಾಶಾಹಿ ಆಗಿದೆ. ಅಮೆರಿಕದ ನಾರ್ಥ್ ಕ್ಯಾರೋಲಿನ್‌ನಲ್ಲಿ ಅರ್ನೆಸ್ಟೋ ಚಂಡಮಾರುತಕ್ಕೆ 3 ಕೋಟಿ ರೂ.ಗೂ ಅಧಿಕ ವೆಚ್ಚದಲ್ಲಿ ನಿರ್ಮಾಣವಾಗಿದ್ದ ಮನೆ ನಾಶವಾಗಿದೆ. ಮನೆ ಬೀಳುವ 11 ಸೆಕೆಂಡ್ ಅವಧಿಯ ವಿಡಿಯೋ ವೈರಲ್ ಆಗಿದೆ. ನಾರ್ಥ್ ಕ್ಯಾರೋಲಿನ್ ಔಟರ್ ಬಾಕ್ಸ್ ಬಳಿಯ ಅಟ್ಲಾಂಟಿಕ್ ಸಮುದ್ರ ಕಿನಾರೆಯಲ್ಲಿ ಈ ಮನೆ ನಿರ್ಮಾಣ ಮಾಡಲಾಗಿತ್ತು. ಅಟ್ಲಾಂಟಿಕ್ ಸಮುದ್ರ ತೀರಕ್ಕೆ ಅರ್ನೆಸ್ಟೋ ಚಂಡಮಾರುತ ಅಪ್ಪಳಿಸಿತು. 1973ರಲ್ಲಿ ನಿರ್ಮಾಣವಾಗಿದ್ದ ಮನೆಯನ್ನು 2018ರಲ್ಲಿ ಓರ್ವ ವ್ಯಕ್ತಿ ಸುಮಾರು ರೂ 3 ಕೋಟಿ ನೀಡಿ ಖರೀದಿಸಿದ್ದರು. ಇದು 4 ಕೋಣೆ, 2 ಬಾತ್‌ರೂಂ ಹೊಂದಿತ್ತು. ಕಟ್ಟಡ ಅಪಾಯದ ಸ್ಥಿತಿಯಲ್ಲಿದ್ದ ಕಾರಣ ಮನೆಯಲ್ಲಿ ಯಾರೂ ಇರಲಿಲ್ಲ. ಭಾರಿ ಅಲೆಗಳಿಗೆ ಸಿಲುಕಿದ ವಿಂಟೇಜ್ ಲುಕ್ ಮನೆ ಕ್ಷಣಾರ್ಧದಲ್ಲಿ ಕೊಚ್ಚಿ ಹೋಗಿದ್ದು, ಅಲೆಗಳಲ್ಲಿ ಮನೆ ತೇಲುವಂತೆ ಕಂಡು ಬಂದಿದೆ. ಅಲೆಗಳ ಜೊತೆಯಲ್ಲಿ ಮನೆಯ ಕೆಲ ಭಾಗಗಳು ಕೊಚ್ಚಿ ಹೋಗಿವೆ ಎಂದು ವರದಿಯಾಗಿದೆ.



ಮೈಸೂರು ಮಿತ್ರ ಗುರುವಾರ 22 ಆಗಸ್ಟ್ 2024

ಗಣೇಶ ಉತ್ಸವದಲ್ಲಿ ಜನರಿಗೆ ತೊಂದರೆಯಾಗದಿರಲಿ

● ಪ್ರತಿಷ್ಠಾಪಕರಿಗೆ ಎಎಸ್‌ಪಿ ಸುಂದರರಾಜ್ ಎಚ್ಚರಿಕೆ ● ಸುಂಟಿಕೊಪ್ಪದಲ್ಲಿ ಆಚರಣಾ ಸಮಿತಿಗಳ ಪೂರ್ವಭಾವಿ ಸಭೆ



ಸುಂಟಿಕೊಪ್ಪ ಪೊಲೀಸ್ ಠಾಣೆಯಲ್ಲಿ ಎಎಸ್‌ಪಿ ಸುಂದರ ರಾಜ್ ನೇತೃತ್ವದಲ್ಲಿ ಗೌರಿ-ಗಣೇಶ ಆಚರಣಾ ಸಮಿತಿಗಳ ಪೂರ್ವಭಾವಿ ಸಭೆ ನಡೆಯಿತು.

ಸುಂಟಿಕೊಪ್ಪ, ಆ.21–ಗೌರಿ ಗಣೇಶ ಉತ್ಸವ ವೇಳೆ ಪ್ರತಿಷ್ಠಾಪಕರು ಸಾರ್ವಜನಿಕರಿಗೆ ತೊಂದರೆಯಾಗದಂತೆ ಎಚ್ಚರ ವಹಿಸಬೇಕು ಎಂದು ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸುಂದರ ರಾಜ್ ಸೂಚಿಸಿದರು.

ಸುಂಟಿಕೊಪ್ಪ ಪೊಲೀಸ್ ಠಾಣೆ ಆವರಣದಲ್ಲಿ ಬುಧವಾರ ಆಯೋಜಿಸಿದ್ದ ಸುಂಟಿಕೊಪ್ಪ ಹೋಬಳಿಯ ಗೌರಿ–ಗಣೇಶ ಆಚರಣಾ ಸಮಿತಿಗಳ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಗಣೇಶ ಮೂರ್ತಿ ಪ್ರತಿಷ್ಠಾಪನಾ ಸಮಿತಿಗಳು ಸರ್ಕಾರದ ಮಾರ್ಗಸೂಚಿಯನ್ನು ಪಾಲಿಸಬೇಕು. ಪೊಲೀಸ್ ಠಾಣೆ ಸೇರಿದಂತೆ ವಿವಿಧ ಇಲಾಖೆಗಳಿಂದ ಕಡ್ಡಾಯವಾಗಿ ಅನುಮತಿ ಪಡೆಯಬೇಕು. ಗಣೇಶ ಮೂರ್ತಿ ಪ್ರತಿಷ್ಠಾಪನೆ ಸ್ಥಳದಲ್ಲಿ ಸಿಸಿ ಕ್ಯಾಮರಾ ಅಳವಡಿಸಬೇಕು. ಇದರಿಂದ ಅಹಿತಕರ ಘಟನೆ ತಡೆಯಲು ಸಹಕರಿಯಾಗಲಿದೆ ಎಂದರು.

ಗಣೇಶ ಪ್ರತಿಷ್ಠಾಪನೆ ವೇಳೆ ವಿದ್ಯುತ್ ಸಂಪರ್ಕ ಅಳವಡಿಸುವಾಗ ಎಚ್ಚರಿಗೆ ವಹಿಸಬೇಕು. ಸ್ಥಳದಲ್ಲಿ ಸಮಿತಿಯ ಪದಾಧಿಕಾರಿಗಳು ಕಾವಲಿರಬೇಕು. ಮೂರ್ತಿಗಳ ವಿಸರ್ಜನೆಯ ಮೆರವಣಿಗೆ ಮಾರ್ಗಗಳ ಮಾಹಿತಿ ಹಾಗೂ ಸಮಯವನ್ನು ಪೊಲೀಸ್ ಠಾಣೆಗೆ ತಿಳಿಸಬೇಕು ಎಂದು ಹೇಳಿದರು.

ಸಭೆಯಲ್ಲಿ ಕುಶಾನಗರ ವೃತ್ತ ನಿರೀಕ್ಷಕ ರಾಜೇಶ್ ಕೋಟ್ಯಾನ್, ಸುಂಟಿಕೊಪ್ಪ ಪೊಲೀಸ್ ಠಾಣಾಧಿಕಾರಿ ಚಂದ್ರಶೇಖರ್, ಎಸ್‌ಐ ಭಾರತಿ, ಸಿಬ್ಬಂದಿ, ವಿವಿಧ ಗ್ರಾಮಸ್ಥರು ಹಾಜರಿದ್ದರು.

ವೀರಾಜಪೇಟೆಯಲ್ಲಿ ಈ ಬಾರಿ ಅದ್ದೂರಿ ಗಣೇಶೋತ್ಸವ

ಗೋಣಿಕೊಪ್ಪಲು, ಆ.21–ವೀರಾಜಪೇಟೆಯ ಪ್ರಸಿದ್ಧ ಬಸವೇಶ್ವರ ದೇವಸ್ಥಾನ ಆಶ್ರಯದಲ್ಲಿ ಈ ಬಾರಿ ಅದ್ದೂರಿಯಾಗಿ ಗೌರಿ–ಗಣೇಶೋತ್ಸವ ಆಚರಿಸಲಾಗುವುದು ಎಂದು ಗೌರಿ–ಗಣೇಶ ಉತ್ಸವ ಸಮಿತಿ ಅಧ್ಯಕ್ಷ ಎನ್.ಗೋಪಾಲಕೃಷ್ಣ ಕಾಮತ್ ತಿಳಿಸಿದ್ದಾರೆ.

ಕೊಡಗನ್ನು ಆಳಿದ್ದ ದೊಡ್ಡ ವೀರರಾಜೇಂದ್ರ ಒಡೆಯರ್ 1792ರಲ್ಲಿ ವೀರಾಜಪೇಟೆ ನಿರ್ಮಿಸಿದ್ದು, ಈ ವೇಳೆ ಬಸವೇಶ್ವರ ದೇವಸ್ಥಾನವೂ ನಿರ್ಮಾಣವಾಗಿತ್ತು. ಅಂದಿನಿಂದಲೂ ದೇವಸ್ಥಾನದಲ್ಲಿ ಪ್ರತಿವರ್ಷ ವಿಜೃಂಭಣೆಯಿಂದ ಗೌರಿ–ಗಣೇಶೋತ್ಸವ ಆಚರಿಸಲಾಗುತ್ತಿದೆ.

ಸೆ.6ರಂದು ಗೌರಿ ಪಲ್ಲಕ್ಕಿ ಮೆರವಣಿಗೆ ಹಾಗೂ ಪ್ರತಿಷ್ಠಾಪನೆ, 7ರಂದು ವಿನಾಯಕ ಪ್ರತಿಷ್ಠಾಪನೆ ಮತ್ತು 8 ರಿಂದ 16ರವರೆಗೆ ಮಧ್ಯಾಹ್ನ ಹಾಗೂ ರಾತ್ರಿ ಪೂಜಾ ಕಾರ್ಯಕ್ರಮ ಏರ್ಪಡಿಸಲಾಗಿದೆ. ಪ್ರತಿದಿನ ರಾತ್ರಿ 8 ಗಂಟೆಗೆ ಸಭಾ ಮತ್ತು ವಿವಿಧ ಕಲಾ ತಂಡಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಸಂಗೀತ ಸ್ಪರ್ಧೆ: ಸೆ.15ರಂದು ಬೆಳಗ್ಗೆ 11 ಗಂಟೆಗೆ ಬಸವೇಶ್ವರ ದೇವಸ್ಥಾನ ಹಾಗೂ ಎನ್.ವೆಂಕಟೇಶ ಕಾಮತ್ ಟ್ರಸ್ಟ್ ನೇತೃತ್ವದಲ್ಲಿ ವಾಯ್ಸ್ ಆಫ್ ವೀರಾಜಪೇಟೆ ಸಂಗೀತ ಸ್ಪರ್ಧೆ ನಡೆಯಲಿದೆ. ಜೂನಿಯರ್ ಹಾಗೂ ಸೀನಿಯರ್ ವಿಭಾಗದಲ್ಲಿ ಸಂಗೀತ ಸ್ಪರ್ಧೆ ಆಯೋಜಿಸಲಾಗಿದ್ದು, ರಾಜ್ಯ ವನ್ಯಜೀವಿ ಮಂಡಳಿ ಸದಸ್ಯ ಸಂಕೇತ್ ಪೂವಯ್ಯ ಚಾಲನೆ ನೀಡಲಿದ್ದಾರೆ ಎಂದು ಹಬ್ಬದ ಉಸ್ತುವಾರಿ ಹಿರಿಯ ನ್ಯಾಯವಾದಿ ಎನ್.ರವೀಂದ್ರನಾಥ್ ಕಾಮತ್ ತಿಳಿಸಿದ್ದಾರೆ.

ಇದೇ ವೇಳೆ ಬಾಳುಗೋಡು ಫೆಡರೇಷನ್ ಆಫ್ ಕೊಡವ ಸಮಾಜ ಅಧ್ಯಕ್ಷ ಕಳ್ಳಿಚಂಡ ವಿಷ್ಣು ಕಾರ್ಯಪ್ಪ ಅವರಿಗೆ 2024ನೇ ಸಾಲಿನ 'ಬಸವಶ್ರೀ' ಪ್ರಶಸ್ತಿ ನೀಡಲಾಗುವುದು. ಮುಖ್ಯ ಅತಿಥಿಗಳಾಗಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಎ.ಎಸ್.ಪೊನ್ನಣ್ಣ, ಮಾಜಿ ವಿಧಾನಪರಿಷತ್ ಸದಸ್ಯ ಚೆಪ್ಪುಡಿರ ಅರುಣ್ ಮಾಚಯ್ಯ ಮತ್ತಿತರರು ಪಾಲ್ಗೊಳ್ಳಲಿದ್ದಾರೆ.

ರಾಘವೇಂದ್ರಸ್ವಾಮಿ ಆರಾಧನಾ ಮಹೋತ್ಸವ...



ವಿರಾಜಪೇಟೆ ಚತ್ರಕೆರೆ ಬಳಿಯ ವೀರಾಂಜನೇಯಸ್ವಾಮಿ ದೇವಸ್ಥಾನದಲ್ಲಿ ಬುಧವಾರ ರಾಘವೇಂದ್ರ ಸ್ವಾಮಿ ಆರಾಧನಾ ಮಹೋತ್ಸವವನ್ನು ವಿಶೇಷ ಪೂಜೆ, ಅಭಿಷೇಕ ಹಾಗೂ ಅನ್ನ ಸಂತರ್ಪಣೆಯೊಂದಿಗೆ ಆಚರಿಸಲಾಯಿತು. ಪಟ್ಟಣ ಹಾಗೂ ಸುತ್ತಮುತ್ತಲಿನ ಭಕ್ತರು ಭಾಗವಹಿಸಿದ್ದರು.

ಇಂದು ಸಿಎಂ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ ಪ್ರತಿಭಟನೆ



ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾ ವಕ್ತಾರ ತಳೂರು ಕಿಶೋರ್ ಕುಮಾರ್ ಮಾತನಾಡಿದರು.

ಮಡಿಕೇರಿ: ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿಸಿ ಆ.22ರಂದು ಜಿಲ್ಲಾ ಬಿಜೆಪಿ ವತಿಯಿಂದ ನಗರದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಬಿಜೆಪಿ ಜಿಲ್ಲಾ ವಕ್ತಾರ ತಳೂರು ಕಿಶೋರ್ ಕುಮಾರ್ ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಡಾ ಮತ್ತು ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣಗಳ ಗಂಭೀರ ಆರೋಪ ಎದುರಿಸುತ್ತಿರುವ ಸಿದ್ದರಾಮಯ್ಯ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿ ತನಿಖೆಗೆ ಸಹಕರಿಸಬೇಕು. ಸಿದ್ದರಾಮಯ್ಯ ಜಾತಿ ಹೆಸರಿನಲ್ಲಿ ಪ್ರತಿಭಟನೆಗೆ ಕುಮ್ಮಕ್ಕು ನೀಡುತ್ತಿರುವುದು ಅವರ ಘನತೆಗೆ ಶೋಭೆ ತರುವುದಿಲ್ಲ ಎಂದರು.

ಹಿಂದೆ ಯಡಿಯೂರಪ್ಪ ಅವರ ಪ್ರಕರಣದಲ್ಲಿ ರಾಜ್ಯಪಾಲರು ಮಧ್ಯಪ್ರವೇಶ ಮಾಡಿದಾಗ ಸ್ವಾಗತಿಸಿದ ಸಿದ್ದರಾಮಯ್ಯ, ಇದೀಗ ತಮ್ಮ ವಿಚಾರದಲ್ಲಿ ರಾಜ್ಯಪಾಲರು ತೆಗೆದುಕೊಂಡ ಕ್ರಮಕ್ಕೆ ವಿರೋಧ ವ್ಯಕ್ತಪಡಿಸುತ್ತಿರುವುದು ಯಾಕೆ? ಎಂದು ಪ್ರಶ್ನಿಸಿದರು. ಬಿಜೆಪಿ ಪ್ರಧಾನ ಕಾರ್ಯದರ್ಶಿ ಮಹೇಶ್ ಜೈನಿ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ತಾವು ನಿರಪರಾಧಿ ಎಂದು ಸಾಬೀತುಪಡಿಸಲು ಕಾನೂನು ಹೋರಾಟದ ಹಾದಿ ಇದ್ದರೂ ಅಹಿಂದ ಸಂಘಟನೆಯನ್ನು ರಕ್ಷ ಕವಚವನ್ನಾಗಿ ಬಳಸಿಕೊಳ್ಳುತ್ತಿರುವುದು ಖಂಡನೀಯ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ವಕ್ತಾರ ಬಿ.ಕೆ. ಅರುಣ್ ಕುಮಾರ್, ಬಿಜೆಪಿ ನಗರಾಧ್ಯಕ್ಷ ಉಮೇಶ್ ಸುಬ್ರಮಣಿ ಉಪಸ್ಥಿತರಿದ್ದರು.

ಅಪರಿಚಿತ ವಾಹನ ಡಿಕ್ಕಿ ಪಾದಚಾರಿ ಸಾವು



ಸುಂಟಿಕೊಪ್ಪ, ಆ.21–ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ಪಾದಚಾರಿ ಮೃತಪಟ್ಟ ಘಟನೆ ಸುಂಟಿಕೊಪ್ಪ ಶಾಂತಗಿರಿ ತೋಟದ ಬಳಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ ಮಂಗಳವಾರ ತಡರಾತ್ರಿ ನಡೆದಿದೆ.

ಮಾದಾಪುರ ಸಮೀಪದ ಗರ್ವಾಲೆ ಗ್ರಾಮದ ನಿವಾಸಿ ಸುಬ್ಬು (82) ಮೃತಪಟ್ಟಿದ್ದು, ಈತ ತಡರಾತ್ರಿ 2 ಗಂಟೆಯಲ್ಲಿ ಕುಶಾಲನಗರ ಕಡೆಯಿಂದ ನಡೆದುಕೊಂಡು ಬರುತ್ತಿದ್ದರು. ಈ ವೇಳೆ ಶಾಂತಗಿರಿ ತೋಟದ ಬಳಿ ಅಪರಿಚಿತ ವಾಹನ ಡಿಕ್ಕಿ ಹೊಡೆದಿದೆ. ಪರಿಣಾಮ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಡಿವೈಎಸ್‌ಪಿ ಗಂಗಧಾರಪ್ಪ, ವೃತ್ತ ನಿರೀಕ್ಷಕ ರಾಜೇಶ್ ಕೋಟ್ಯಾನ್, ಸುಂಟಿಕೊಪ್ಪ ಠಾಣಾಧಿಕಾರಿ ಚಂದ್ರಶೇಖರ್ ಹಾಗೂ ಸಿಬ್ಬಂದಿ ಸ್ಥಳ ಪರಿಶೀಲಿಸಿದರು.

ಈ ಸಂಬಂಧ ಸುಂಟಿಕೊಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾರಾಯಣ ಗುರೂಜೀ ಜೀವನ ಪ್ರತಿಯೊಬ್ಬರಿಗೂ ಆದರ್ಶ



ಮಡಿಕೇರಿ ಓಂಕಾರ ಸದನ ಸಭಾಂಗಣದಲ್ಲಿ ನಡೆದ ನಾರಾಯಣ ಗುರು ಜಯಂತಿಯನ್ನು ಕಸಾಪ ಮಾಜಿ ಅಧ್ಯಕ್ಷ ಬಿ.ಎಸ್.ಲೋಕೇಶ್ ಸಾಗರ್ ಉದ್ಘಾಟಿಸಿದರು.

ಮಡಿಕೇರಿ, ಆ.21–ಜಾತಿ, ದ್ವೇಷದ ಗೋಡೆಯನ್ನು ಒಡೆದು ಎಲ್ಲರಲ್ಲಿ ಭ್ರಾತೃತ್ವ ಮತ್ತು ಸಮಾನತೆಯ ಪರಿಕಲ್ಪನೆ ಬಿತ್ತಿದ ಬ್ರಹ್ಮರ್ಷಿಶ್ರೀ ನಾರಾಯಣ ಗುರೂಜೀ ಜೀವನ ಮತ್ತು ಹೋರಾಟ ಆದರ್ಶ ಪೂರ್ಣವಾಗಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಬಿ.ಎಸ್.ಲೋಕೇಶ್ ಸಾಗರ್ ಹೇಳಿದರು.

ನಗರದ ಓಂಕಾರ ಸದನ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನಡೆದ ನಾರಾಯಣ ಗುರು ಜಯಂತಿದಲ್ಲಿ ಮಾತನಾಡಿದ ಅವರು, 1856ರಲ್ಲಿ ತಿರುವನಂತಪುರದ ಚೆಂಬಲಾಂತಿ ಎಂಬ ಹಳ್ಳಿಯಲ್ಲಿ ಕೆಳವರ್ಗದ ಈಳವ ಸಮುದಾಯದ ಮಾದನ್ ಆಶಾನ್ ಮತ್ತು ಕುಟ್ಟಿಯಮ್ಮ ದಂಪತಿ ನಾಲ್ಕನೇ ಮಗನಾಗಿ ಜನಿಸಿದರು. ಶಂಕರಾಚಾರ್ಯರ ಅದ್ವೈತದ ಸಾರದಲ್ಲಿ ತಮ್ಮ ದಾರ್ಶನಿಕತೆಯನ್ನು ಪ್ರತಿಪಾದಿಸಿದ ನಾರಾಯಣ ಗುರೂಜೀ, ಎಲ್ಲರನ್ನೂ ಒಂದಾಗಿ ಕಂಡರು. ಇರುವವನು ಒಬ್ಬನೇ ಪರಮಾತ್ಮ, ಒಂದೇ ತತ್ವ, ಒಂದೇ ಸತ್ಯ ಎಲ್ಲವೂ ಒಂದೇ ಅಂದಮೇಲೆ ಭೇದ–ಭಾವ, ಮೇಲು–ಕೀಳಿಲ್ಲ ಎಂದು ಪ್ರಶ್ನಿಸಿದವರು ಎಂದು ಸ್ಮರಿಸಿದರು.

ಜಿಲ್ಲಾ ಬಿಲ್ಲವ ಸಮಾಜದ ಅಧ್ಯಕ್ಷ ರಘು ಆನಂದ ಮಾತನಾಡಿ, ಬ್ರಹ್ಮರ್ಷಿಶ್ರೀ ನಾರಾಯಣ ಗುರೂಜೀ ಯಾವುದೇ ಸಮುದಾಯಕ್ಕೆ ಮೀಸಲಿರದೆ ವಿಶ್ವಕ್ಕೆ ಹಿಂದೂ ಸಮಾಜದ ಸಂದೇಶ ಸಾರಿದವರು. ಕೆಳವರ್ಗದ ಸಮುದಾಯದ ಪ್ರಧಾನ ಸ್ಥಾನ ನೀಡಿದ ಕೀರ್ತಿ ಇವರಿಗೆ ಸಲ್ಲುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತ ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕುಮಾರ, ಟಿ.ಕೆ.ಪಾಂಡುರಂಗ, ಬಾಲಕೃಷ್ಣ ಲೀಲಾವತಿ, ಆನಂದ ಬಾಲಕೃಷ್ಣ, ಮದೆ ಮೋಹನ್, ವಿದ್ವಾನ್ ಬಿ.ಸಿ.ಶಂಕರಯ್ಯ, ಮಣಜೂರು ಮಂಜುನಾಥ ಉಪಸ್ಥಿತರಿದ್ದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮಡಿಕೇರಿ, ಆ.21–ಸೋಮವಾರಪೇಟೆ ವಿದ್ಯುತ್ ವಿತರಣಾ ಕೇಂದ್ರ ವ್ಯಾಪ್ತಿ ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಆ.22ರಂದು ಬೆಳಗ್ಗೆ 10 ರಿಂದ ಸಂಜೆ 6 ಗಂಟೆವರೆಗೆ ಯಡೂರು, ತಲ್ತಾರೆಶೆಟ್ಟಳ್ಳಿ, ತಾಕೇರಿ, ಕಿರಗಂದೂರು, ಬಸವನಕಟ್ಟೆ, ಶಾಂತಳ್ಳಿ, ಕುಂದಳ್ಳಿ, ಬಾಚಳ್ಳಿ, ಮಲ್ಲಳ್ಳಿ, ಬೆಟ್ಟದಳ್ಳಿ, ಬೆಟ್ಟದಕೊಪ್ಪ, ಹರಗ, ಕಲ್ಕಂದೂರು, ಹೊಸಬೀಡು, ತೋಳೂರು ಶೆಟ್ಟಳ್ಳಿ, ಹರಪಳ್ಳಿ, ಕೂತಿ, ಕುಂಬಾರಗಡಿಗೆ ಹಾಗೂ ತಿತಿಮತಿ ಫೀಡರ್ ವ್ಯಾಪ್ತಿಯ ತಿತಿಮತಿ, ಮಾಯಾಮುಡಿ, ದೇವರಪುರ, ಹೆಬ್ಬಾಲೆ, ನೋಕ್ಯ, ದೇವರಪುರ, ಧನುಗಾಲ, ಕೋಣನಕಟ್ಟೆ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಕಾರ್ಯನಿರ್ವಾಹಕ ಇಂಜಿನಿಯರ್ ಅನಿತಾ ಬಾಯಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪುರುಷೋತ್ತಮ ನಿಧನ



ನಾಪೋಕ್ಲು, ಆ.21–ಸಮೀಪದ ಹೊದ್ದೂರು ಗ್ರಾಮದ ನಿವಾಸಿ ಹಾಗೂ ಮಾಜಿ ಶಾಸಕ ಡಿ.ಎಸ್.ಮಾದಪ್ಪ ಅವರ ಆಪ್ತ ಕೂಡಂಡ ಪುರುಷೋತ್ತಮ (62) ಅನಾರೋಗ್ಯದಿಂದ ಮಂಗಳವಾರ ನಿಧನರಾದರು.

ಇವರು ಜೆಡಿಎಸ್ ತಾಲೂಕು ಅಧ್ಯಕ್ಷರಾಗಿ, ಹೊದ್ದೂರು ಗ್ರಾಮ ಪಂಚಾಯಿತಿ, ಕೃಷಿ ಪತ್ತಿನ ಸಹಕಾರ ಸಂಘದ ಮಾಜಿ ಅಧ್ಯಕ್ಷ ಸೇರಿದಂತೆ ವಿವಿಧ ಸಂಘ–ಸಂಸ್ಥೆಯಲ್ಲಿ ಸೇವೆ ಸಲ್ಲಿಸಿದ್ದರು.

ಮೃತರು ಪತ್ನಿ ಸುರೇಖಾ, ಪುತ್ರ ಪ್ರಜ್ವಲ್ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಬುಧವಾರ ಮೃತರ ಸ್ವಗೃಹ ಆವರಣದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಸಂತಾಪ: ಕೊಡಗು ಏಲಕ್ಕಿ ಮಾರಾಟ ಸಹಕಾರ ಸಂಘದ ಅಧ್ಯಕ್ಷ ಸೂದನ ಎಸ್.ಈರಪ್ಪ ಸಂತಾಪ ಸೂಚಿಸಿದ್ದಾರೆ.

ಮೀನಾಕ್ಷಿ



ನಾಪೋಕ್ಲು, ಆ.21–ಸಮೀಪದ ಭಾಗಮಂಡಲ ಕೋರಂಗಾಲ ಗ್ರಾಮದ ದಿವಂಗತ ಅಂಬ್ರಾಟಿ ಶಿವಣ್ಣ ಪತ್ನಿ ಮೀನಾಕ್ಷಿ (72) ಅನಾರೋಗ್ಯದಿಂದ ಸೋಮವಾರ ನಿಧನರಾದರು.

ಮೃತರು ಮೂವರು ಪುತ್ರಿಯರು, ಪುತ್ರ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಮಂಗಳವಾರ ಮೃತರ ಸ್ವಗೃಹ ಆವರಣದಲ್ಲಿ ಅಂತ್ಯಕ್ರಿಯೆ ನೆರವೇರಿತು.

ದುಂದು ವೆಚ್ಚದ ಮದುವೆಗೆ ಕಡಿವಾಣ ಹಾಕಿ

● ಸಾಮೂಹಿಕ ವಿವಾಹದಲ್ಲಿ ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಸಲಹೆ ● 64 ಜೋಡಿಗಳು ನವಜೀವನಕ್ಕೆ ಪಾದಾರ್ಪಣೆ



ಮಹದೇಶ್ವರಬೆಟ್ಟದಲ್ಲಿ ನಡೆದ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ನವಜೀವನಕ್ಕೆ ಪಾದಾರ್ಪಣೆ ಮಾಡಿದ ಜೋಡಿಗಳಿಗೆ ಶ್ರೀ ಶಿವರಾತ್ರಿ ದೇಶೀಕೇಂದ್ರಸ್ವಾಮೀಜಿ, ಶ್ರೀ ಶಾಂತಮಲ್ಲಿಕಾರ್ಜುನಸ್ವಾಮೀಜಿ ಆಶೀರ್ವದಿಸಿದರು. ಸಚಿವ ರಾಮಲಿಂಗಾರೆಡಿ, ಶಾಸಕ ಎಂ.ಆರ್.ಮಂಜುನಾಥ್, ಜಿಲ್ಲಾಧಿಕಾರಿ ಶಿಲ್ಪನಾಗ್ ಇದ್ದರು.

> ಬೇರೆ ಕಡೆಯಾಗುವ ವಿವಾಹಕ್ಕಿಂತ ಧಾರ್ಮಿಕ ಕ್ಷೇತ್ರಗಳಲ್ಲಾಗುವ ವಿವಾಹಗಳು ವಿಭಿನ್ನವಾಗಿರುತ್ತದೆ. ಧಾರ್ಮಿಕ ಕ್ಷೇತ್ರಗಳಲ್ಲಿ ದಾಂಪತ್ಯ ಜೀವನಕ್ಕೆ ಕಾಲಿಡುವುದರಿಂದ ಭಕ್ತಿ ಭಾವನೆ ಮೂಡಲಿದೆ. ದಂಪತಿಗಳು ದ್ವೇಷ, ಅಸೂಯೆ ಬಿಟ್ಟು ಬದುಕಬೇಕು. ಇದರಿಂದ ಸಮಾಜಕ್ಕೂ ಒಳಿತಾಗುತ್ತದೆ. ಪರಸ್ಪರ ಅರ್ಥಮಾಡಿಕೊಂಡು ಜೀವನ ನಡೆಸಿದರೆ ಕುಟುಂಬದಲ್ಲಿ ಬಾಂಧವ್ಯ ಇರಲಿದೆ.
> –ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸುತ್ತೂರು ಮಠಾಧ್ಯಕ್ಷರು

ಹನೂರು, ಆ.21–ಸರಳ ಹಾಗೂ ಸಾಮೂಹಿಕ ವಿವಾಹಗಳಿಗೆ ಒತ್ತು ನೀಡುವ ಮೂಲಕ ದುಂದು ವೆಚ್ಚದ ಮದುವೆಗೆ ಕಡಿವಾಣ ಹಾಕಬೇಕು ಎಂದು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಸಲಹೆ ನೀಡಿದರು.

ಮಲೆಮಹದೇಶ್ವರಬೆಟ್ಟದ ದೇವಸ್ಥಾನ ರಂಗಮಂದಿರ ಆವರಣದ ಬುಧವಾರ ಮಹದೇಶ್ವರಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರ ವತಿಯಿಂದ ಆಯೋಜಿಸಿದ್ದ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ವಧು–ವರರಿಗೆ ಮಾಂಗಲ್ಯ, ವಸ್ತ್ರ ವಿತರಿಸಿ ಮಾತನಾಡಿದ ಅವರು, ಸರಳ ವಿವಾಹಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು. ಶ್ರೀಕ್ಷೇತ್ರ ಮಹದೇಶ್ವರಬೆಟ್ಟಕ್ಕೆ ಲಕ್ಷಾಂತರ ಭಕ್ತರು ಬರುತ್ತಾರೆ. ಪ್ರಾಧಿಕಾರ ರಚನೆಯಾದ ಬಳಿಕ ಬೆಟ್ಟದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳಾಗಿವೆ. ಇನ್ನಷ್ಟು ಅಭಿವೃದ್ಧಿ ಕಾರ್ಯಗಳಿಗೆ ಅಗತ್ಯ ನೆರವು ನೀಡಲಾಗುವುದು ಎಂದರು.

ರಾಜ್ಯದ ಕೆಲ ದೇವಾಲಯಗಳಿಗೆ 50 ಲಕ್ಷದಿಂದ 1 ಕೋಟಿವರೆಗೆ ಭಕ್ತರು ಭೇಟಿ ನೀಡುತ್ತಾರೆ. ಇಂತಹ ದೇವಸ್ಥಾನಗಳಲ್ಲಿ ಪ್ರಾಧಿಕಾರ ರಚನೆ ಮಾಡಲಾಗಿದೆ. ಮುಂದಿನ ನಾಲ್ಕೈದು ವರ್ಷಗಳಲ್ಲಿ ಅಭಿವೃದ್ಧಿಯಾಗಲಿದ್ದು, ಭಕ್ತರಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದು ತಿಳಿಸಿದರು.

ಸಾಲೂರು ಬೃಹನ್ಮಠಾಧ್ಯಕ್ಷರಾದ ಶ್ರೀ ಶಾಂತಮಲ್ಲಿಕಾರ್ಜುನಸ್ವಾಮೀಜಿ ಮಾತನಾಡಿ, ದೇವಸ್ಥಾನಗಳು ಸನಾತನ ಸಂಸ್ಕೃತಿಯ ಪ್ರತೀಕವಾಗಿದೆ. ಮಹದೇಶ್ವರಸ್ವಾಮಿ ಕ್ಷೇತ್ರಕ್ಕೆ ರಾಜ್ಯವಲ್ಲದೆ, ನೆರೆಯ ತಮಿಳುನಾಡಿನಿಂದಲೂ ಸಾಕಷ್ಟು ಭಕ್ತರು ಬರುತ್ತಿದ್ದು, ತನ್ನದೇ ಮಹತ್ವ ಪಡೆದುಕೊಂಡಿದೆ. ಕ್ಷೇತ್ರದಲ್ಲಿ ಸಾಮೂಹಿಕ ವಿವಾಹ ನಡೆಸಿಕೊಂಡು ಬರಲಾಗುತ್ತಿದೆ ಎಂದರು.

ಸಿಎಂ ಸಿದ್ದರಾಮಯ್ಯ ಗೈರು

ಮಹದೇಶ್ವರಬೆಟ್ಟ ಅಭಿವೃದ್ಧಿ ಪ್ರಾಧಿಕಾರಕ್ಕೆ ಮುಖ್ಯಮಂತ್ರಿ ಅಧ್ಯಕ್ಷರಾಗಿದ್ದು, ಕಳೆದ ವರ್ಷ ಸಿಎಂ ಸಿದ್ದರಾಮಯ್ಯ ಭಾಗಿಯಾಗಿದ್ದರು. ಆದರೆ, ಈ ಬಾರಿ ಸಿದ್ದರಾಮಯ್ಯ ಬರುತ್ತಾರೆ ಎನ್ನಲಾಗುತ್ತಿದ್ದರೂ ಕೊನೆ ದಿನಗಳಲ್ಲಿ ರದ್ದಾಯಿತು. ಪ್ರಾಧಿಕಾರದ ಉಪಾಧ್ಯಕ್ಷರಾಗಿರುವ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಕೂಡ ಗಜಪಯಣ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರಿಂದ ಸಾಮೂಹಿಕ ವಿವಾಹ ಕಾರ್ಯಕ್ರಮಕ್ಕೆ ಗೈರಾದರು.

ಶಾಸಕ ಎಂ.ಆರ್.ಮಂಜುನಾಥ್ ಮಾತನಾಡಿ, ಸರಳ ಹಾಗೂ ಸಾಮೂಹಿಕ ವಿವಾಹ ಆಗುವುದರಿಂದ ಕುಟುಂಬಗಳಿಗೆ ಆರ್ಥಿಕ ಹೊರೆ ತಪ್ಪಲಿದೆ. ಹನೂರು ಕ್ಷೇತ್ರ ಭೌಗೋಳಿಕವಾಗಿ ವಿಸ್ತಾರವಾಗಿದೆ. ಮುಜರಾಯಿ ಇಲಾಖೆಯಿಂದ ಶ್ರೀಕ್ಷೇತ್ರಕ್ಕೆ ಹೆಚ್ಚಿನ ಅನುದಾನ ಅಗತ್ಯವಿದೆ ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಶಿಲ್ಪನಾಗ್ ಮಹದೇಶ್ವರ ಬೆಟ್ಟದಲ್ಲಿ 1989ರಿಂದ ಸಾಮೂಹಿಕ ವಿವಾಹ ಮಹೋತ್ಸವವನ್ನು ನಡೆಸಲಾಗುತ್ತಿದೆ. ಇದುವರೆಗೆ 1867 ಜೋಡಿ ಶ್ರೀಕ್ಷೇತ್ರದಲ್ಲಿ ದಾಂಪತ್ಯ ಜೀವನಕ್ಕೆ ಕಾಲಿಟ್ಟಿವೆ. ಇಂದು 64 ಜೋಡಿಗಳು ನವಜೀವನಕ್ಕೆ ಪಾದಾರ್ಪಣೆ ಮಾಡಿವೆ. ಈ ಪುಣ್ಯ ಕ್ಷೇತ್ರದಲ್ಲಿ ವಿವಾಹವಾದವರಿಗೆ ಮಹದೇಶ್ವರನ ಆಶೀರ್ವಾದ ಲಭಿಸಲಿ. ಶಾಂತಿ ಸಮೃದ್ಧಿ, ಸುಖ ಜೀವನ ನಡೆಸುವಂತಾಗಲಿ ಎಂದು ಹಾರೈಸಿದರು.

ಕಾರ್ಯಕ್ರಮದಲ್ಲಿ ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ಚಾಮರಾಜನಗರ ಜಿಲ್ಲಾ ಹಾಲು ಉತ್ಪಾದಕರ ಸಹಾಕಾರ ಸಂಘದ ಅಧ್ಯಕ್ಷ ವೈ.ಸಿ.ನಾಗೇಂದ್ರ, ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಹೆಚ್.ವಿ.ಚಂದ್ರು, ಗ್ರಾಪಂ ಅಧ್ಯಕ್ಷೆ ಅರ್ಚನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ.ಕವಿತಾ, ಮಹದೇಶ್ವರಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರ ಕಾರ್ಯದರ್ಶಿ ಎ.ಇ.ರಘು, ಉಪಕಾರ್ಯದರ್ಶಿ ಚಂದ್ರಶೇಖರ್, ಇತರರು ಉಪಸ್ಥಿತರಿದ್ದರು.

ಜನರ ಒತ್ತಾಯದಂತೆ ಚಾಮುಂಡಿಬೆಟ್ಟ ಅಭಿವೃದ್ಧಿ ಪ್ರಾಧಿಕಾರ ರಚನೆ



ಮಹದೇಶ್ವರಬೆಟ್ಟದಲ್ಲಿ ಆಯೋಜಿಸಿದ್ದ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ವಧು–ವರರಿಗೆ ಸಚಿವ ರಾಮಲಿಂಗಾರೆಡ್ಡಿ ಹಾಗೂ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾಂಗಲ್ಯ ವಿತರಿಸಿದರು.

ಮೈಸೂರಿನ ಚಾಮುಂಡಿಬೆಟ್ಟ ಅಭಿವೃದ್ಧಿ ಪ್ರಾಧಿಕಾರ ರಚಿಸಬೇಕು ಎಂದು ಬಹಳ ಹಿಂದಿನಿಂದಲೂ ಪ್ರಸ್ತಾವನೆ ಇತ್ತು. ಜನರ ಒತ್ತಾಯವೂ ಇತ್ತು. ಅದರಂತೆ ಪ್ರಾಧಿಕಾರ ರಚಿಸಲಾಗಿದೆ ಎಂದು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಮಲೆಮಹದೇಶ್ವರಬೆಟ್ಟದ ದೇವಸ್ಥಾನ ರಂಗಮಂದಿರ ಆವರಣದಲ್ಲಿ ಬುಧವಾರ ಮಹದೇಶ್ವರಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಹಮ್ಮಿಕೊಂಡಿದ್ದ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರಾಧಿಕಾರ ಸಂಬಂಧ ರಾಜಮನೆತನದವರು ಕೋರ್ಟ್ ಮೆಟ್ಟಿಲೇರಿದ್ದಾರೆ. ಹೀಗಾಗಿ ಇದರ ಬಗ್ಗೆ ಹೆಚ್ಚು ಮಾತನಾಡುವುದಿಲ್ಲ ಎಂದರು.

ರಾಜ್ಯಪಾಲರಿಗೆ ಅಪಮಾನ ಮಾಡಿಲ್ಲ: ಕಾಂಗ್ರೆಸ್ ಪ್ರತಿಭಟನೆ ವೇಳೆ ಸಾಂವಿಧಾನಿಕ ಹುದ್ದೆಯಲ್ಲಿರುವ ರಾಜ್ಯಪಾಲರ ಭಾವಚಿತ್ರಕ್ಕೆ ಚಪ್ಪಲಿಯಿಂದ ಹೊಡೆದು, ದಹನ ಮಾಡಿ ಅವಮಾನ ಮಾಡಲಾಗಿದೆ ಎಂಬ ಬಿಜೆಪಿ ನಾಯಕರ ಆರೋಪದ ಬಗ್ಗೆ ಪ್ರತಿಕ್ರಿಯಿಸಿದ ಸಚಿವರು, ರಾಜ್ಯಪಾಲರಿಗೆ ಅವಮಾನ ಮಾಡುವ ಕೆಲಸ ಯಾವ ಮಂತ್ರಿಗಳಾಗಲೀ ಹಾಗೂ ಪಕ್ಷದ ಕಾರ್ಯಕರ್ತರಾಗಲೀ ಮಾಡಿಲ್ಲ. ಬಿಜೆಪಿಯವರೇ ಅವಮಾನ ಮಾಡಿ ನಮ್ಮ ಮೇಲೆ ಹಾಕುತ್ತಿದ್ದಾರೆ ಎಂದು ಹೇಳಿದರು.

ರಾಜ್ಯಪಾಲರು ತಮ್ಮ ಘನತೆಗೆ ತಕ್ಕಂತೆ ನಡೆದುಕೊಳ್ಳುತ್ತಿಲ್ಲ. ಬಿಜೆಪಿಯವರ ಕೈಗೊಂಬೆಯಾಗಿದ್ದಾರೆ ಎಂದು ನಮ್ಮವರು ಹೇಳಿದ್ದಾರೆ ಅಷ್ಟೇ. ರಾಜ್ಯಪಾಲರ ಭಾವಚಿತ್ರಕ್ಕೆ ಚಪ್ಪಲಿಯಿಂದ ಹೊಡೆದಿದ್ದರೆ ಅದು ತಪ್ಪು. ಪ್ರಧಾನಿ, ಮುಖ್ಯಮಂತ್ರಿ, ರಾಜ್ಯಪಾಲರು ಸೇರಿದಂತೆ ರಾಜಕೀಯ ನಾಯಕರ ಪ್ರತಿಕೃತಿ ದಹನ ಸಾಮಾನ್ಯ. ರಾಜ್ಯಪಾಲರು ಮಾಡಿದ ತಪ್ಪನ್ನು ಎತ್ತಿ ತೋರಿಸುವುದರಲ್ಲಿ ತಪ್ಪೇನು ಇಲ್ಲ ಎಂದು ಸ್ಪಷ್ಟನೆ ನೀಡಿದರು.

ಉತ್ತಮ ಶಿಕ್ಷಕ ಪ್ರಶಸ್ತಿಗೆ ಶ್ವೇತಾ ಆಯ್ಕೆ



ಬಿ.ಎನ್.ಶ್ವೇತಾ

ಚಾ.ನಗರ: ತಾಲೂಕಿನ ಗಡಿಭಾಗ ಚಿಕ್ಕಹೊಳೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ತಮಿಳು ಶಾಲೆಯಲ್ಲಿ ಕನ್ನಡ ಶಿಕ್ಷಕಿಯಾಗಿ 14 ವರ್ಷಗಳಿಂದ ಉತ್ತಮ ಸೇವೆ ಸಲ್ಲಿಸುತ್ತಿರುವ ನಗರದ ಬಿ.ಎನ್. ಶ್ವೇತಾ ಮಂಡ್ಯ ಜಿಲ್ಲೆಯ ಜಿವಿಕೆ ಪ್ರತಿಷ್ಠಾನ ವತಿಯಿಂದ ನೀಡುವ ಉತ್ತಮ ಶಿಕ್ಷಕ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಜಿವಿಕೆ ಪ್ರತಿಷ್ಠಾನದ 9ನೇ ವಾರ್ಷಿಕೋತ್ಸವದ ಅಂಗವಾಗಿ ಆ.24ರಂದು ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಈಕೆ ಎರಡು ಬಾರಿ ತಾಲೂಕು ಮಟ್ಟದ ಉತ್ತಮ ಶಿಕ್ಷಕಿ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಕಾರ್ಯಕ್ರಮದಲ್ಲಿ ಜಿವಿಕೆ ಪ್ರತಿಷ್ಠಾನ ಅಧ್ಯಕ್ಷ ಆರ್.ವಾಸು, ಹಿರಿಯ ಸಾಹಿತಿ ತೈಲೂರು ವೆಂಕಟಕೃಷ್ಣ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಪರಿಸರ ಕಾರ್ಯಕರ್ತರಿಂದ ಎಡಿಸಿಗೆ ಮನವಿ ಸಲ್ಲಿಕೆ



ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ ಅವರಿಗೆ ಪರಿಸರ ಕಾರ್ಯಕರ್ತರ ಸಂಘಟನೆ ಮುಖಂಡರು ಮನವಿ ಸಲ್ಲಿಸಿದರು.

ಚಾಮರಾಜನಗರ, ಆ.21–ಕೇರಳದ ವೈನಾಡಿನಲ್ಲಿ ನಡೆದ ಭೀಕರ ಭೂ ಕುಸಿತ ದುರಂತದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ತುರ್ತು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಪರಿಸರವಾದಿ ಪುಣಜನೂರು ದೊರೆಸ್ವಾಮಿ ನೇತೃತ್ವದಲ್ಲಿ ಜಿಲ್ಲೆಯ ಪರಿಸರ ಕಾರ್ಯಕರ್ತರ ಸಂಘಟನೆ ಮುಖಂಡರು ಬುಧವಾರ ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ ಅವರಿಗೆ ಮನವಿ ಸಲ್ಲಿಸಿದರು.

ನಂತರ ಪುಣಜನೂರು ದೊರೆಸ್ವಾಮಿ ಮಾತನಾಡಿ, ಚಾಮರಾಜನಗರ ಜಿಲ್ಲೆ ಅತಿ ಹೆಚ್ಚು ಬೆಟ್ಟಗುಡ್ಡ ಮತ್ತು ಅರಣ್ಯ ಪ್ರದೇಶದಿಂದ ಕೂಡಿದೆ. ಆದ್ದರಿಂದ ಮುನ್ನೆಚ್ಚರಿಕೆಯಿಂದ ಸರ್ಕಾರ ಮತ್ತು ಜಿಲ್ಲಾಡಳಿತ ಕ್ರಮ ವಹಿಸಬೇಕಿದೆ. ಅರಣ್ಯ ಒತ್ತುವರಿ, ಅಕ್ರಮ ಗಣಿಗಾರಿಕೆ, ರೆಸಾರ್ಟ್‌ಗಳು ಹೋಮ್ ಸ್ಟೇ, ಹೋಟೆಲ್‌ಗಳು, ಮರಗಳ ಮರಣ ಹೋಮ ಹಾಗೂ ಇನ್ನು ಅನೇಕ ಅಕ್ರಮಗಳನ್ನು ನಡೆಸಲಾಗುತ್ತಿದೆ. ಇದರಿಂದ ಪರಿಸರಸಕ್ಕೆ ಹನಿಯಾಗುವುದು ಖಂಡಿತ ಎಂದು ಹೇಳಿದರು.

ಬೇಡಿಕೆಗಳು: ಜಿಲ್ಲೆಯಲ್ಲಿ ಪಶ್ಚಿಮಘಟ ಪ್ರಾಧಿಕಾರ ರಚಿಸಬೇಕು. ಸೂಕ್ಷ್ಮ ಪರಿಸರ ವಲಯಗಳನ್ನು ಘೋಷಿಸಬೇಕು. ಗಣಿಗಾರಿಕೆ ಹಾಗೂ ಸೂಕ್ಷ್ಮ ಪರಿಸರ ವಲಯಗಳಲ್ಲಿ ಕಟ್ಟಡ ನಿರ್ಮಾಣ ನಿರ್ಬಂಧಿಸಬೇಕು. ಪರಿಸರ ಪರಿಣಾಮ ಅಧ್ಯಯನ (ಇಐಎ) ಬಲಪಡಿಸಬೇಕು. ಸುಸ್ಥಿರ ಕೃಷಿ ಮತ್ತು ವನೀಕರಣ ಪ್ರೋತ್ಸಾಹಿಸಬೇಕು. ಪವಿತ್ರ ಬನಗಳನ್ನು ರಕ್ಷಿಸಬೇಕು. ಪರಿಸರ ಸ್ನೇಹಿ ಪ್ರವಾಸೋದ್ಯಮವಕ್ಕೆ ಮಾರ್ಗಸೂಚಿ ತಯಾರಿಸಬೇಕು. ಪ್ರಕೃತಿ ಸಂರಕ್ಷಣೆಗಾಗಿ ನಿಧಿ ಕಾಯ್ದಿರಿಸಬೇಕು ಹಾಗೂ ಉಸ್ತುವಾರಿ ವ್ಯವಸ್ಥೆ ಸ್ಥಾಪಿಸಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಸಂಘಟನೆ ಸದಸ್ಯ ರಂಗಕರ್ಮಿ ಕೆ.ವೆಂಕಟರಾಜು, ಗಿರಿಜನ ಸಂಘದ ಅಧ್ಯಕ್ಷ ಮುತ್ತಯ್ಯ, ಡಾ. ವಿರಭದ್ರನಾಯ್ಕ್, ರಂಗಸ್ವಾಮಿ ನಾಯ್ಕ್, ಸಿ.ಎಂ.ವೆಂಕಟೇಶ್, ಅಬ್ರಾಹಂ ಡಿ.ಸಿಲ್ವ, ರೈತ ಸಂಘದ ಕಾಡಳ್ಳಿ ಚಿನ್ನಸ್ವಾಮಿ, ಗ್ರಾಮ ಪಂಚಾಯಿತಿ ಸದಸ್ಯ ಚಂದ್ರು ಮುಂತಾದವರು ಇದ್ದರು.

ಚಂದ್ರಶೇಖರ್ 3ನೇ ಬಾರಿ ರಾಷ್ಟ್ರಮಟ್ಟ ಕ್ರೀಡಾಕೂಟಕ್ಕೆ ಆಯ್ಕೆ



ಚಾಮರಾಜನಗರ, ಆ.21–ತಾಲೂಕಿನ ಆಲೂರು ಹೊಮ್ಮ ಗ್ರಾಮದ ಹೆಚ್.ಎಲ್.ಚಂದ್ರಶೇಖರ್ 3ನೇ ಬಾರಿ ರಾಷ್ಟ್ರ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟಕ್ಕೆ ಆಯ್ಕೆಯಾಗುವ ಮೂಲಕ ಜಿಲ್ಲೆಗೆ ಕೀರ್ತಿ ತಂದಿದ್ದಾರೆ.

ಇತ್ತೀಚೆಗೆ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಸರ್ಕಾರಿ ನೌಕರರ ರಾಜ್ಯ ಮಟ್ಟದ ಕ್ರೀಡಾಕೂಟದ 100 ಮೀಟರ್ ಓಟದಲ್ಲಿ ಪ್ರಥಮ, 200 ಮೀ. ಓಟದಲ್ಲಿ ದ್ವಿತೀಯ ಸ್ಥಾನ ಪಡೆದು ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಕಳೆದ ವರ್ಷ ಶಿವಮೊಗ್ಗದಲ್ಲಿ ನಡೆದ ರಾಜ್ಯ ಮಟ್ಟದ ಮಾಸ್ಟರ್ ಅಥ್ಲೆಟಿಕ್ಸ್ ಚಾಂಪಿಯನ್‌ನಲ್ಲಿ ಭಾಗವಹಿಸಿ 100, 200, 400 ಮೀಟರ್ ಓಟ ಹಾಗೂ 4X100 ರಿಲೇಯಲ್ಲಿ 4 ಚಿನ್ನದ ಪದಕ ಹಾಗೂ 4X100 ಮಿಕ್ಸೆಡ್ ರಿಲೇಯಲ್ಲಿ 1 ಬೆಳ್ಳಿ ಪದಕ ಪಡೆಯುವ ಮೂಲಕ ಉತ್ತರಪ್ರದೇಶದಲ್ಲಿ ನಡೆದ ರಾಷ್ಟ್ರ ಮಟ್ಟದ ಮಾಸ್ಟರ್ ಗೇಮ್ಸ್ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದರು.

ತಾಲೂಕಿನ ಆಲೂರು ಹೊಮ್ಮ ಗ್ರಾಮದ ಲೇಟ್ ಎಂ.ಲಿಂಗನಾಯಕ ಮತ್ತು ರಾಜಮ್ಮ ದಂಪತಿ ಪುತ್ರರಾದ ಇವರು ಪ್ರಸ್ತುತ ಮೈಸೂರಿನ ರೇಷ್ಮೆ ಇಲಾಖೆಯ ಸಿಲ್ಕ್ ಫಿಲೇಚರ್‌ನಲ್ಲಿ ಅಧೀಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಗಾಂಜಾ ಸಾಗಿಸುತ್ತಿದ್ದವನ ಬಂಧನ

ಕೊಳ್ಳೇಗಾಲ, ಆ.21– ಗಾಂಜಾ ಸಾಗಿಸುತ್ತಿದ್ದ ಆರೋಪಿಯನ್ನು ಬಂಧಿಸಿರುವ ಪಟ್ಟಣ ಠಾಣೆ ಪೊಲೀಸರು, 326 ಗ್ರಾಂ ಗಾಂಜಾ ವಶಪಡಿಸಿಕೊಂಡಿದ್ದಾರೆ.

ಮಾದೇಗೌಡ ಬಂಧಿತ ಆರೋಪಿ. ಈತ ಆ.19ರಂದು ಸಂಜೆ ಪಟ್ಟಣದಿಂದ ಕುರುಬನಕಟ್ಟೆಗೆ ಹೋಗುವ ರಸ್ತೆಯ ಆರ್.ಎಂ.ಚೌಲ್ಟ್ರಿ ಎದುರು ಗಾಂಜಾ ಸಾಗಿಸುತ್ತಿದ್ದ. ಈ ವೇಳೆ ದಾಳಿ ನಡೆಸಿದ ಆರಕ್ಷಕ ಉಪ ನಿರೀಕ್ಷಕ ಬಿ.ವಿ.ವರ್ಷಾ, ಆರೋಪಿಯನ್ನು ಬಂಧಿಸಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821– 2496522/23

ಡ್ರೈವರ್ ಬೇಕಾಗಿದ್ದಾರೆ
ಪಿಯುಸಿ ವಿದ್ಯಾರ್ಹತೆಯುಳ್ಳ ನುರಿತ ಡ್ರೈವರ್ ಬೇಕಾಗಿದ್ದಾರೆ. ಉತ್ತಮ ಸಂಬಳ ಹಾಗೂ ಉಚಿತ ವಸತಿ ನೀಡಲಾಗುವುದು. ವಯಸ್ಸು: 25 ರಿಂದ 35 ವರ್ಷ
9535332633

ಬೇಕಾಗಿದೆ
10 ರಿಂದ 20 ಎಕರೆ ಜಮೀನು ಭೋಗ್ಯಕ್ಕೆ ಬೇಕಾಗಿದೆ. ಮೈಸೂರಿನಿಂದ 70 ಕಿ.ಮೀ. ಒಳಗಡೆ.
7829668666, 9964227657

ಮಹಿಳೆ ಅಡುಗೆಯವರು ಬೇಕಾಗಿದ್ದಾರೆ
4 ಜನ ಕುಟುಂಬ ಸದಸ್ಯರ ಮನೆಯಲ್ಲಿ ರುಚಿಯಾಗಿ ಹಾಗೂ Non-Veg ಅಡುಗೆ ಮಾಡುವವರು ಬೇಕಾಗಿದ್ದಾರೆ. ಅನುಭವವುಳ್ಳವರಿಗೆ ಆದ್ಯತೆ. ದಟ್ಟಗಳ್ಳಿ 3ನೇ ಹಂತ, ಮೈಸೂರು ಸಮಯ: ಬೆಳಿಗ್ಗೆ 7 ರಿಂದ 10.30
9731053082

ಛತ್ರ ಖಾಲಿ ಇದೆ
ದಿನಾಂಕ 16.11.2024 ಹಾಗೂ 17.11.2024 ರಂದು (ಶನಿವಾರ ಹಾಗೂ ಭಾನುವಾರದಂದು) ಛತ್ರ ಖಾಲಿ ಇದೆ ಕುಸುಮ ಚಂದ್ರಶೇಖರ್ ಕನ್ವೆನ್ಷನ್ ಹಾಲ್ ಕೆ. ಆರ್. ಎಸ್ ರಸ್ತೆ,ಮೈಸೂರು.
ಆಸಕ್ತರು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ
9880897153 / 9901712818

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9108566022

ಮಾರಾಟಕ್ಕಿದೆ
20x30 ಮನೆ 50 ಲಕ್ಷ ದಟ್ಟಗಳ್ಳಿ
30x40 ಸೈಟ್ ಆದಿತ್ಯ ಸರ್ಕಲ್ ಹತ್ತಿರ
40x60 ಸೈಟ್ ಕ್ರೈಸ್ಟ್ ಪಬ್ಲಿಕ್ ಸ್ಕೂಲ್ ಹತ್ತಿರ
9945042875

ಬೇಕಾಗಿದ್ದಾರೆ
ಪ್ರಿಂಟಿಂಗ್ ಪ್ರೆಸ್‌ಗೆ KANNADA DTP, PHOTOSHOP & CORELDRAW ಡಿಸೈನರ್‌ಗಳು ಬೇಕಾಗಿದ್ದಾರೆ. ಅನುಭವ ಇದ್ದವರಿಗೆ ಮೊದಲ ಆದ್ಯತೆ
9449853308

ಸೈಟುಗಳು ಮಾರಾಟಕ್ಕಿವೆ
ಶಾರದಾದೇವಿನಗರ ಸರ್ಕಲ್ ಹತ್ತಿರ 30x40, 40x60
30x40 ಅಳತೆಯುಳ್ಳ ಮನೆ ಭೋಗ್ಯಕ್ಕಿದೆ ನಿವೇದಿತ ಪಾರ್ಕ್ ಹಿಂಭಾಗ, ಮೈಸೂರು
9945148025

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕು ಅನುಭವವುಳ್ಳವರಿಗೆ ಹಾಗೂ ಕುವೆಂಪುನಗರ ಸುತ್ತಮುತ್ತ ಇರುವವರಿಗೆ ಆದ್ಯತೆ.
9535370330

ಬಸವ ಮಾರ್ಗ ಫೌಂಡೇಶನ್
42ನೇ ಉಚಿತ ಕುಡಿತ ಬಿಡಿಸುವ ಶಿಬಿರ. ದಿನಾಂಕ: 12–09–24 ರಿಂದ 22–09–24 ರವರೆಗೆ
8803344999
9742919191

ಮನೆ ಬಾಡಿಗೆಗೆ ಇದೆ
2BHK ಶ್ರೀರಂಗಪಟ್ಟಣದಲ್ಲಿ ಮನೆ ಬಾಡಿಗೆಗೆ ದೊರೆಯುತ್ತದೆ.
9886800761

ಬೇಕಾಗಿದ್ದಾರೆ
ಮನೆಯ ಮಕ್ಕಳ ಆರೈಕೆಗಾಗಿ ದಾದಿ. ನಮ್ಮ ಮನೆಯಲ್ಲಿ 3 ತಿಂಗಳ ಮಗು ಮತ್ತು 3 ವರ್ಷದ ಮಗುವನ್ನು ನೋಡಿಕೊಳ್ಳಲು ನಾವು ಜವಾಬ್ದಾರಿಯುತ ಮತ್ತು ಕಾಳಜಿಯುಳ್ಳ ದಾದಿಯನ್ನು ಹುಡುಕುತ್ತಿದ್ದೇವೆ. ಸಮಯ ಬೆಳಿಗ್ಗೆ 8 ರಿಂದ ರಾತ್ರಿ 8 ರವರೆಗೆ. ಸ್ಥಳ: ದಟ್ಟಗಳ್ಳಿ 3ನೇ ಹಂತ, ಮೈಸೂರು
9663570750

ಮಾರಾಟಕ್ಕಿದೆ
ಮೈಸೂರು ನಗರದ ಹಳೇಕೆಸರೆ ಗ್ರಾಮದಲ್ಲಿ 20 ಗುಂಟೆ ಬಾಡಿಗೆಂಯು ಜಾಗದಲ್ಲಿರುವ ಮಣ್ಣಿನ ಇಂಟರಲಾಕ್ ಇಟ್ಟಿಗೆಂಯು ಫ್ಯಾಕ್ಟರಿ ಮಾರಾಟಕ್ಕೆ ಇದೆ. 35 HP ಪವರ್, 24 ಘಂಟೆ, ನೀರಿನ ವ್ಯವಸ್ಥೆ ಇದೆ. ಆಸಕ್ತರು ಕರೆ ಮಾಡಿ
9964088915

ಶ್ರೀ ಗೌರೀಶಂಕರ ಟ್ರಾವೆಲ್ಸ್
4–10–2024 (6 ದಿನ): ಅಯೋಧ್ಯೆ, ಪ್ರಯಾಗ್ ರಾಜ್, ಕಾಶಿ, ಗಯಾ, ಬುದ್ಧ ಗಯಾ.
16–10–24 (7 ದಿನ): ದೆಹಲಿ, ಆಗ್ರಾ, ಅಯೋಧ್ಯೆ, ಕಾಶಿ.
17–11–24 (10 ದಿನ): ಅಯೋಧ್ಯೆ, ಮುಕ್ತಿನಾಥ್, ಪೋಕ್ರಾ, ಕಠ್ಮಂಡು, ಲುಂಬಿನಿ, ಕಾಶಿ, ಇತ್ಯಾದಿ.
10–12–24 (9 ದಿನ): ಅಹಮದಾಬಾದ್, ಸೋಮನಾಥ್, ನಾಗೇಶ್ವರ್, ಮಾತೃಗಯಾ, ಉಜ್ಜಯಿನಿ, ಓಂಕಾರೇಶ್ವರ, ಇತ್ಯಾದಿ.
(ವಿಮಾನ, ಬಸ್, ಊಟ, ರೂಂ)
Mob: 9620002114

ಸೈಟ್ ಫಾರ್ ಸೇಲ್
ಈಸ್ಟ್ ಫೇಸಿಂಗ್ ಕಾರ್ನರ್ ಸೈಟ್ 28x40 ಮುಡಾ ಖಾತೆ, 36 ಲಕ್ಷ
9342123373

ಸೈಟು ಮಾರಾಟಕ್ಕಿದೆ
ಸೈಟು ನಂ. 1179, LIG 30x40 ಕೆಂಚಲಗೂಡು ಮೈಸೂರು, ನೇರ ಮಾಲೀಕರು
8884564771
8073895696

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8880558064

ನೀವು ಒಬ್ಬ ಟೀಚರ್ ಆಗ ಬೇಕೇ?
SSLC ಪಾಸ್ PUC, Degree ಪಾಸ್/ಫೇಲ್ NURSERY TEACHERS TRAINING ಟ್ರೈನಿಂಗ್ ನಂತರ ತಕ್ಷಣ ಕೆಲಸ ಬನ್ನಿ, ಸೇರಿ, ಪಾಸಾಗಿ, ಸಂಪಾದಿಸಿ PUC ಓದುತ್ತಿರುವವರು ಸಹ ಸೇರಬಹುದು. Jnana Gangothri Convent Rajendra Nagara Mysore Whatsapp/call
9113980741

ಬೋಳು ತಲೆಯ ಸಮಸ್ಯೆಯೇ?



ಕಿಮೋತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ವಾಭಾವಿಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

ಬೇಕಾಗಿದ್ದಾರೆ
ಮೈಸೂರಿನ ಇನ್ಫೋಸಿಸ್‌ಗೆ ಪುರುಷರು ಅಭ್ಯರ್ಥಿಗಳು
ಸೆಕ್ಯೂರಿಟಿ ಗಾರ್ಡ್ಸ್
ಆಕರ್ಷಕ ಸಂಬಳ : 21,000/–
ವಿದ್ಯಾರ್ಹತೆ: 10ನೇ ತರಗತಿ & ಪಿಯುಸಿ ತೇರ್ಗಡೆ
ವಯಸ್ಸು : 22 ರಿಂದ 40 ವರ್ಷ
78296 48007

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 6360485921

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಮತ್ತು ಹೆಬ್ಬಾಳು ಕೈಗಾರಿಕ ಪ್ರದೇಶದಲ್ಲಿರುವ ಪ್ರತಿಷ್ಠಿತ ಕಾರ್ಖಾನೆಗಳಿಗೆ ಹುಡುಗರು ಬೇಕಾಗಿದ್ದಾರೆ. ವಯಸು : 18 ರಿಂದ 35 ವರ್ಷ, ವಿದ್ಯಾರ್ಹತೆ: 7 ರಿಂದ PUC ಮತ್ತು ITI ರಿಯಾಯಿತಿ ದರದಲ್ಲಿ ಊಟ ಮತ್ತು ವಸತಿ ಸೌಲಭ್ಯವಿರುತ್ತದೆ.
8277047300

ಲಾವಣ್ಯ ವಧು–ವರರ ಮಾಹಿತಿ ಕೇಂದ್ರ
BA, BSC, B.Com, MA, MSc, M.Com MBA, MCA, Doctor Engineers 2nd Marriage also
9164743059

ಬೇಕಾಗಿದ್ದಾರೆ
ಮನೆ ಕೆಲಸಕ್ಕೆ ಒಂದು ಚಿಕ್ಕ ಕುಟುಂಬ ಬೇಕಾಗಿದ್ದಾರೆ
ವಿಳಾಸ : ವಿಜಯನಗರ 2ನೇ ಹಂತ, ಮೈಸೂರು–570017
ಉಳಿದುಕೊಳ್ಳಲು ಮನೆ ನೀಡಲಾಗುತ್ತದೆ.
ಮೊ. 93790 37937 / 78991 73171



Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

CHANGE OF NAME
I, JAYANTHI KRISHNAMURTHY, W/o. Raghuram Acharya, residing at Door No 189, 2nd Stage, 2nd Cross, 2nd Main, Gokulam, Mysore, have changed my name from JAYANTHI RAGHURAM ACHARYA to JAYANTHI KRISHNAMURTHY on my own free will in front of Notary S.V. Nagendra on 06/08/2024.
Sd/- JAYANTHI KRISHNAMURTHY

FLAT FOR SALE
2 BHK, fully furnished East Facing, Vijayanagara 3rd Stage.
9035649726

ಅನುಬಂಧ ಮ್ಯಾರೇಜಸ್
ಎಲ್ಲಾ ಜಾತಿಯ ವಧುವರರಿಗೆ ನೇರ ಸಂಪರ್ಕಿಸಿ ಮದುವೆ ವಿಳಂಬವಾದಲ್ಲಿ ಪರಿಹಾರ ಶತಸಿದ್ಧ
6361740552

ಬೇಕಾಗಿದ್ದಾರೆ
ಕೊಡಗು ಜಿಲ್ಲಾದ್ಯಂತ ಬ್ಯಾಂಕ್ ವೆರಿಫಿಕೇಶನ್ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. (ದ್ವಿಚಕ್ರ ವಾಹನ ಕಡ್ಡಾಯ)
ಶೇಖರ್:9945911118
ಅನಿಲ್:7026996123

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

WANTED
Sales Boys and Girls to work in a Sports Shop.
Full time: 10 am to 7pm
Part time: 5 pm to 9.30 pm
Mob: 8105368325

WANTED
English and Nursery teaching staff with fluency in English for reputed institution.
Send your resume through WhatsApp/Message
Contact no:
8971577685, 9980631121

ಪ್ರಮಾಣ ಪತ್ರ
ಮೈಸೂರು ಸಿಟಿ, ನೋಟ್ ಮುದ್ರಣ ನಗರ, ಬೆಲವತ್ತ ಗ್ರಾಮ, ಮನೆ ನಂ. 675 ರಲ್ಲಿ ವಾಸವಾಗಿರುವ ಶ್ರೀ ವಿನ್ಸೆಂಟ್‌ರವರ ಧರ್ಮಪತ್ನಿಯಾದ ಶ್ರೀ ರಾಕಿಣಿ (Rakini) ಪ್ರಮಾಣೀಕರಿಸುವುದೇನೆಂದರೆ, ನನ್ನ ಎಲ್ಲಾ ದಾಖಲಾತಿಗಳಲ್ಲಿ ನನ್ನ ಹೆಸರು ರಾಕಿಣಿ (Rakini) ಎಂದು ಇರುತ್ತದೆ. ಆದರೆ, ನನ್ನ ಹಾಸನ ವಿಭಾಗದ ಆರ್.ಪಿ.ಎಲ್. ಇನ್ಶೂರೆನ್ಸ್ ದಾಖಲಾತಿಯಲ್ಲಿ ನನ್ನ ಹೆಸರು ಮೋಕ್ಷರಾಕಿಣಿ.ಜೆ (Moksharakini.J) ಎಂದು ನಮೂದಾಗಿರುತ್ತದೆ. ಮೋಕ್ಷರಾಕಿಣಿ.ಜೆ (Moksharakini.J) ಮತ್ತು ರಾಕಿಣಿ (Rakini) ಎರಡೂ ಹೆಸರುಗಳು ನನ್ನದೇ ಆಗಿರುತ್ತದೆ ಎಂದು ನೋಟರಿ ಸಿ.ಆರ್. ಸೀತಾರಾಂ ರವರ ಮುಂದೆ ದಿನಾಂಕ 5–8–2024ರಂದು ಪ್ರಮಾಣೀಕರಿಸಿರುತ್ತೇನೆ.
ಸಹಿ/– ರಾಕಿಣಿ

HOUSE FOR SALE
30x40 South East, new corner ground floor duplex house in Vijayanagar 3rd Stage.
Price: 2.40 cr. negotiable.
Contact:
Mob: 8197707001

ಬೇಕಾಗಿದ್ದಾರೆ
ರೂಂ ಬಾಯ್ಸ್ – 2
ಶ್ರೀ ಗಣೇಶ್ ಪ್ರಸಾದ್ ಲಾಡ್ಜ್ # 1096, ಶಿವರಾಂ ಪೇಟೆ ಮುಖ್ಯ ರಸ್ತೆ, ಮೈಸೂರು–570001
9986756866

ಬೇಕಾಗಿದ್ದಾರೆ
ಕಂಪ್ಯೂಟರ್ ಆಫೀಸ್‌ನಲ್ಲಿ ಫ್ರಂಟ್ ಆಫೀಸ್ ಮತ್ತು ಅಕೌಂಟ್ಸ್ ನಿರ್ವಹಣೆಗಾಗಿ, ಡಿಪ್ಲೊಮಾ (ಸಿ.ಪಿ)/ ಬಿ.ಕಾಂ ಮಾಡಿರುವ 25 ವರ್ಷದೊಳಗಿನ ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ಕಂಪ್ಯೂಟರ್ ಮತ್ತು ಅಕೌಂಟ್ಸ್‌ನಲ್ಲಿ ಅನುಭವವುಳ್ಳವರಿಗೆ ಹೆಚ್ಚಿನ ಆದ್ಯತೆ
8073393505

ಬೇಕಾಗಿದ್ದಾರೆ
1) ಹೌಸ್‌ಕೀಪಿಂಗ್ ಪುರುಷರು / ಮಹಿಳೆಯರು – 4 ಹುದ್ದೆ
2) ರೂಂ ಬಾಯ್ – 2 ಹುದ್ದೆ
ಆಕರ್ಷಕ ವೇತನ. ಸಂಪರ್ಕಿಸಿ: ಹೋಟೆಲ್ ಗುಪ್ತ ಅಶೋಕ ರಸ್ತೆ, ಲಷ್ಕರ್ ಮೊಹಲ್ಲಾ, ಮೈಸೂರು–570 001
9886166044, 9886577795

Space for Lease
3 BHK / PG / Office / Agency
East facing 7th Cross, Anikethana Road, Kuvempunagar, new Gnanaganga School.
Mob: 9052674614

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಇಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ / ಯುವತಿಯರು ಬಂದರೆ ಬೇಕಾಗಿದ್ದಾರೆ. ESI / PF ನೊಂದಿಗೆ ಊಟ, ವಸತಿಯೊಂದಿಗೆ ಸಂಬಳ – ಓ.ಟಿ, 15200 – 86,000
7411565140, 7892046990

JOBNET
ಮೊಬೈಲ್‌ನಲ್ಲಿ ಕೆಲಸ
ಮನೆಯಲ್ಲೇ ಕುಳಿತು ಮೊಬೈಲ್ ಮೂಲಕ ಫಾರಂ ಫಿಲ್ಲಿಂಗ್ ಮಾಡಿ ಪ್ರತಿ ತಿಂಗಳಿಗೆ 10,000 ರಿಂದ 20,000 ಸಂಪಾದಿಸಿ
9731891409

SITES FOR SALE
MICROWAVE OVEN SERVICES INDIAN/IMPORTED CALL FOR MICROWAVE OVEN REPAIR
Mob: 9900237315, 9845963421, 08214266495

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಚಿಕ್ಕಯ್ಯನ ಛತ್ರದಲ್ಲಿ ಹೆಸರಾಂತ ಕಂಪನಿಗೆ ಅನುಭವವುಳ್ಳ SSLC ತನಕ ವ್ಯಾಸಂಗ ಮಾಡಿರುವ 50 ವರ್ಷ ಒಳಪಟ್ಟ, ಸೆಕ್ಯೂರಿಟಿ ಸೂಪರ್ ವೈಸರ್ ಹಾಗೂ 45 ವರುಷ ಒಳಪಟ್ಟ ಸೆಕ್ಯೂರಿಟಿ ಗಾರ್ಡುಗಳು ತಕ್ಷಣ ಬೇಕಾಗಿದ್ದಾರೆ. 8 ಗಂಟೆ ಪಾಳಿ/26 ದಿನಗಳು ವಾರದ ರಜೆ, ESI, PF ಕ್ಯಾಂಟೀನ್ ಸೌಲಭ್ಯವಿರುತ್ತದೆ. 19621 ಸಂಬಳ ದೊರೆಯುತ್ತದೆ. ಆಸಕ್ತರು ಕೂಡಲೇ ಈ ನಂಬರಿಗೆ ಸಂಪರ್ಕಿಸಿ
9731649064

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕಿನಲ್ಲಿ ನೈಟ್ ಶಿಫ್ಟ್ ಕೆಲಸಕ್ಕಾಗಿ ಪುರುಷರು/ ಹುಡುಗರು ಬೇಕಾಗಿದ್ದಾರೆ.
ಸಂಬಳ: 15000/–
7899754149

SITE FOR SALE
30x50, East face Dr. Shivarathri Rajendra Nagara, T. Narasipura, Road, Mysore.
9620657853
(Brokers not allowed)

WANTED
Kidspace play arena, for a company in Vijayanagar 3rd Stage
1) Receptionist
2) Attender (10th Pass)
Female candidates only living in and around Vijayanagar 3rd Stage, Mysore. Contact:
9900402149

WANTED
For reputed Civil Engineer Office
1) Diploma Civil or BE Civil Engg. CAD knowledge / should be essential - 1 Post
2) Any Graduate typing computer knowledge must be essential : 1 post
Only lady candidate apply whatsaap
9902642237
seema009in@gmail.com

FOR RENT
Commercial open space App: 750 sq.ft. 15x50 ft on New Sayyaji Rao Road, adjacent to Star hyundai Car Showroom. Contact:
9538608440 | 8105494550

HOUSE FOR RENT
2 BHK (site 30x50 dimension) D.No. A/2-04, 'Murthy Nilaya' AIISH Layout, Bogadi (South), Mysuru-26
Vegetarian only. Brokers Excuse. Contact:
8884565185 | 8073290552

ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ
ವಿದ್ಯಾಭ್ಯಾಸ : SSLC ಮೇಲ್ಪಟ್ಟು
ವಯಸ್ಸು : 23 ರಿಂದ 50ರ ಒಳಗಿರಬೇಕು
ಸಂಬಳ: ರೂ. 19,000/-
ಸೌಲಭ್ಯ : ESI / PF / BONUS/ Gratuity/Free Uniform & Insurance
9538014456
9538886654

ಬೇಕಾಗಿದ್ದಾರೆ
ಶಾಲೆಯಲ್ಲಿ ಕಸಗುಡಿಸಲು ಅಡುಗೆ ಮತ್ತಿತರ ಸಹಾಯಕ ಕೆಲಸಗಳಿಗೆ 40 ವಯಸ್ಸು ಮೀರದ ಆರೋಗ್ಯವಂತ ಮಹಿಳೆಯರು ಕೆಲಸದ ಸಮಯ ಬೆಳಿಗ್ಗೆ 9 ರಿಂದ ಸಂಜೆ 6 ಸಂಬಳ ಪ್ರತಿ ದಿನಕ್ಕೆ 300/– ಜ್ಞಾನ ಗಂಗೋತ್ರಿ ಕಾನ್ವೆಂಟ್ ರಾಜೇಂದ್ರ, ನಗರ ಮೈಸೂರು
9243580672

JOBS AT MYSORE
Retail Sales Trainees & Sales Executive
PUC passed
Fresher / Experienced
Salary 16,000
SEND RESUME TO:
kpmysore2007@gmail.com
9480361038

WANTED
1) Office Assistant
Computer & Tally knowledge contact with documents.
M/s. Ishtartha Chits Pvt. Ltd. Irwin Road, Mysuru
9980062066

2.5 BHK HOME INTERIORS @
Starting @ ₹2.5 Lacs*
Home Space Mart™
TALK TO OUR DESIGN TEAM
9108923123

30x40 Site for Sale
30x40 site is for sale in Bhairava Enclave near Maratikyathanahalli, Gaddige Road, just 100 mtrs from Bogadi-Gaddige Road.
Price: Rs. 4000 per sq.ft.
8792235466, 7204299814

neem BOND PLATINUM® PLYWOOD DOORS
10 YEARS WARRANTY
@ FACTORY DEPOT RATES
9731591267, 9901291267

ಕೆಲಸಕ್ಕೆ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ (ಪುರುಷರು) ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾ, ಹೂಟಗಳ್ಳಿ ಇಂಡಸ್ಟ್ರಿಯಲ್ ಏರಿಯಾ, ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾ (ESI, PF) ಸಂಬಳ 16000 ದಿಂದ 17000 ಕೊಡಲಾಗುವುದು ಕನ್ನಡ ಇಂಗ್ಲೀಷ್ ಬರೆಯಲು ಮಾತನಾಡಲು ಬರಬೇಕು. ಆಸಕ್ತಿ ಇದ್ದವರು ಸಂಪರ್ಕಿಸಿ:
8310098788

ಬೇಕಾಗಿದ್ದಾರೆ
ಯುವಕ ಮತ್ತು ಯುವತಿಯರು ಆಫೀಸ್ ಕೆಲಸ ಮತ್ತು Executive ಕೆಲಸ ಮಾಡಲು ಬೇಕಾಗಿದ್ದಾರೆ.
9845028614

20x40, 30x40 SITE FOR SALE
20x40 & 30x40 sites for sale in SBM attached layout, Railway layout, Bogadi. Price: 4300 / sq.ft. Just 200 mtrs. from Hari Vidyalaya School.
8792235466, 7204299814

WANTED FOR Bhaskar Heart Centre

Post	Qualification
Receptionist	Degree / PUC
Staff Nurses (F)	GNM / ANM
Laboratory Technician	CMLT / DMLT
Pharma Assistant	PUC / Degree

0821-2499188, 9880186386

Commercial Site for sale
45x60 commercial site on 60 feet road in KBL Gardenia Layout, attached to Vijayanagar 4th Stage. Prime location for commercial activities.
Price: Rs. 1.25 Cr.
8792235466, 7204299814

WANTED
Female Graduate for Pre-School in Bogadi.
Mob: 9113257683

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕಿನಲ್ಲಿ ಡೇ/ನೈಟ್ ಶಿಫ್ಟ್‌ನಲ್ಲಿ ಗಾಳಿ ಹಾಕಲು ಬೇಕಾಗಿದ್ದಾರೆ.
ಸಂಬಳ: 10,000/–
8892258814

TELECALLERS FEMALE EXECUTIVES
Fresher/Experienced Required for Bank Collections (Competitive Salary and Attractive Incentives.)
8495866511
7022328169
Location: Near Haradadevi Nagar CIrcle New Kantharaj Urs Road, Mysore-570022

FOR RENT
600 Sqft Area with Power and Toilet Suitable for office Space or Godown opp. Joy ICE Cream Factory.
9448051280

SITE FOR SALE
Dattagalli University Layout 30x40 Duplex House Sale Dattagalli
9880273834

HIRING IMMIDIATELY
Sapthagiri Service Mysore
Male Candidates Only with Computer Knowledge
Salary - 12,000 - 20,000
Age below 30 Years
9880151303

ಹೋಂ ನರ್ಸಿಂಗ್‌ನಲ್ಲಿ ಉದ್ಯೋಗಾವಕಾಶ
ವಯೋವೃದ್ಧರನ್ನು ಆರೈಕೆ ಮಾಡಲು Full Time, Day/ Night Shift ಕೆಲಸಕ್ಕೆ ಯುವತಿಯರು ಹಾಗೂ ಮಹಿಳೆಯರು ಬೇಕಾಗಿದ್ದಾರೆ. ವೇತನ: 10,000 ರಿಂದ 18,000 ಅನುಭವದ ಅಗತ್ಯವಿಲ್ಲ, ಉಚಿತ ತರಬೇತಿ ವಸತಿಯೊಂದಿಗೆ ಕೆಲಸ ನೀಡಲಾಗುವುದು.
9606714441
7349278501,0821-4242351

ತಕ್ಷಣ ಬೇಕಾಗಿದ್ದಾರೆ
1) ಸೆಕ್ಯೂರಿಟಿ ಸೂಪರ್‌ವೈಸರ್ – PUC/Any Degree (8 Hours)
2) ಸೆಕ್ಯೂರಿಟಿ ಗಾರ್ಡ್ಸ್– 10th, (8 Hours & 12 Hours)
3) ಹೌಸ್ ಕೀಪಿಂಗ್ – ಹುಡುಗ/ಮಹಿಳೆಯರು (ಮೇಟಗಳ್ಳಿ, ಕುವೆಂಪುನಗರ, ಶ್ರೀರಾಂಪುರ)
9739166772
9880419847

ಮಹಿಳೆಯರಿಗೆ ಸುವರ್ಣಾವಕಾಶ
ಮನೆಯಿಂದಲೇ ಪ್ಲಾಸ್ಟಿಕ್ ಹಾರಗಳನ್ನು ತಯಾರಿಸಿ ನಮಗೆ ಕೊಡಿ. ತರಬೇತಿ ನೀಡಿ ಕಚ್ಚಾ ಸಾಮಾಗ್ರಿಗಳನ್ನು ನಾವೇ ಕೊಡುತ್ತೇವೆ. ವಾರದ ಸಂಬಳ ಕೊಡುತ್ತೇವೆ. ಆಸಕ್ತಿ ಉಳ್ಳವರು ಸಂಪರ್ಕಿಸಿ
8867556624

ಬೇಕಾಗಿದ್ದಾರೆ
ಸ್ಟಾರ್ ಬಜಾಜ್ Star Bajaj (Authorised Main Dealer for Bajaj Two Wheeler-Mysore) Vontikoppal, Mysore-02 ಮಾರ್ಕೆಟಿಂಗ್ ಅಂಡ್ ಸೇಲ್ ಎಕ್ಸಿಕ್ಯೂಟಿವ್ Qualification - Any Degree Fresher or Experienced.
9739549252

ವಧು–ವರರ ಅನ್ವೇಷಣೆ
ಒಕ್ಕಲಿಗ, ಕುರುಬ, ಲಿಂಗಾಯತ, ನಾಯಕ ಎಲ್ಲಾ ಜಾತಿಯ ವಧು–ವರರು, ವಿಚ್ಛೇಧಿತರು, ವಿಧವಾ–ವಿಧವೆಯರು ಸಂಪರ್ಕಿಸಿ:
9980273659
9731066259

ತಕ್ಷಣ ಬೇಕಾಗಿದ್ದಾರೆ
Sri Sapthagiri Builders & Developers
Marketing Manager (Experience) 2 No.
Tele Callers - 3no. (Experience)
Driver Post- 2 No. (Experience)
9606977963
9591828444,9731667555

ಜಮೀನು ಮಾರಾಟಕ್ಕಿದೆ
ಚಲ್ಲಳ್ಳಿ (ಬಿಳಿಕೆರೆ ಹತ್ತಿರ) 30 ಕುಂಟೆ ಮತ್ತು 20 ಕುಂಟೆ, ಒಂದು ಕುಂಟೆಗೆ ರೂ.1,25,000/-
9620563026

ಬೇಕಾಗಿದ್ದಾರೆ
ಕೈಗಾರಿಕಾ ಪ್ರದೇಶ ಯಾದವಗಿರಿ, ಮೈಸೂರು
ಮಹಿಳೆಯರು : 12000
ಹುಡುಗರು: 16000
ಕೆಲಸದ ಸಮಯ: 9 ರಿಂದ 6.30
9448664411

ಮೈಸೂರು ಮಿತ್ರ 45 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಧರ್ಮ ಸಂದೇಶಗಳಿಂದ ಮಾತ್ರ ಶಾಂತಿಯುತ ಜೀವನ ಸಾಧ್ಯ

ಮರಳೆ ಗವಿಮಠದ ಮಠಾಧ್ಯಕ್ಷ ಡಾ. ಮುಮ್ಮಡಿ ಶಿವರುದ್ರ ಮಹಾಸ್ವಾಮಿ



ತಿ.ನರಸೀಪುರ ತಾಲೂಕು ಸೋಸಲೆ ತೋಪಿನ ಮಠದಲ್ಲಿ ಪ್ರಭುಶ್ರೀ ಷಡಕ್ಷರ ಮಹಾಶಿವಯೋಗಿಗಳವರ 71 ನೇ ವರ್ಷದ ಆರಾಧನಾ ಮಹೋತ್ಸವ ಹಾಗೂ ಲಿಂಗೈಕ್ಯ ವಿರೂಪಾಕ್ಷ ಮಹಾಸ್ವಾಮಿಗಳವರ 11 ನೇ ವರ್ಷದ ಸಂಸ್ಮರಣೋತ್ಸವ ಕಾರ್ಯಕ್ರಮ ವಿಜೃಂಭಣೆಯಿಂದ ನೆರವೇರಿತು .

ತಿ.ನರಸೀಪುರ, ಆ.21– ಧರ್ಮ ಸಂದೇಶಗಳಿಂದ ಮಾತ್ರವೇ ಶಾಂತಿಯುತ ಜೀವನ ನಡೆಸಲು ಸಾಧ್ಯ ಎಂದು ಶ್ರೀ ಕ್ಷೇತ್ರ ಮರಳೆ ಗವಿಮಠದ ಮಠಾಧ್ಯಕ್ಷ ಡಾ.ಮುಮ್ಮಡಿ ಶಿವರುದ್ರಮಹಾಸ್ವಾಮಿ ಹೇಳಿದರು.

ತಾಲೂಕಿನ ಸೋಸಲೆ ಗ್ರಾಮದಲ್ಲಿರುವ ಸುಕ್ಷೇತ್ರ ತೋಪಿನ ಮಠದಲ್ಲಿ ಬುಧವಾರ ಹಮ್ಮಿಕೊಳ್ಳಲಾಗಿದ್ದ ವೈರಾಗ್ಯ ಮೇರು, ವಿಶ್ವಗುರು ಷಡಕ್ಷರ ಮಹಾಶಿವಯೋಗಿಗಳವರ 71 ನೇ ವರ್ಷದ ಆರಾಧನಾ ಮಹೋತ್ಸವ ಹಾಗೂ ಲಿಂಗೈಕ್ಯ ವಿರೂಪಾಕ್ಷ ಮಹಾಸ್ವಾಮಿಗಳವರ 11ನೇ ವರ್ಷದ ಸಂಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಧಾರ್ಮಿಕ ಸಭೆಯ ದಿವ್ಯ ಸಾನ್ನಿಧ್ಯ ವಹಿಸಿ ಭಕ್ತಾದಿಗಳಿಗೆ ಆಶೀರ್ವಚನ ನೀಡಿ ಮಾತನಾಡಿದರು.

ತೋಪಿನಮಠವು ದೊಡ್ಡ ಪವಿತ್ರ ಕ್ಷೇತ್ರವಾಗಿದ್ದು ಗುರುಗಳ ದರ್ಶನ ಮಾಡಿ ಗದ್ದುಗೆ ಪೂಜೆ ಮಾಡಿದರೆ ಪಾಪಗಳೆಲ್ಲ ಕಳೆದು ಹೋಗಿ ಪುಣ್ಯ ಲಭಿಸಲಿದೆ. ಮನುಷ್ಯನಿಗೆ ತನ್ನ ಜೀವನದಲ್ಲಿ ಎಲ್ಲ ಪದವಿಗಳೂ ಬಂದು ಹೋಗಬಹುದು ಆದರೆ ಎಲ್ಲ ಪದವಿಗಳೂ ಪ್ರತಿಯೊಬ್ಬರಿಗೂ ಸಿಗಲು ಸಾಧ್ಯವಿಲ್ಲ. ಭಕ್ತಿ ಎಂಬ ಪದವಿ ಧರ್ಮ ಪ್ರಧಾನವಾದ ಸಮಾಜದಲ್ಲಿ ಶ್ರೇಷ್ಠವಾಗಿದೆ ಎಂದರು.

ಜಗತ್ತು ವೈಜ್ಞಾನಿಕ ಮತ್ತು ತಾಂತ್ರಿಕ ಯುಗದಲ್ಲಿ ಅದ್ವಿತೀಯ ಸಾಧನೆ ಮಾಡಿದ್ದರೂ, ಸಹ ಮಾನವ ಬದುಕುವ ಕಲೆಯನ್ನು ಮರೆತಿದ್ದಾನೆ. ಇಂದು ಮಾನವರು ಊಹೆಗೂ ನಿಲುಕದಷ್ಟು ಸಾಧನೆ ಮಾಡಿ ಆಕಾಶದೆತ್ತರಕ್ಕೆ ಹೋಗಿ ಹೊಸದಾಗಿ ಗ್ರಹಗಳ ಅನ್ವೇಷಣೆಯಲ್ಲಿ ತೊಡಗಿದ್ದು, ಕಡಲಾಳದಲ್ಲಿ ಹುದುಗಿರುವ ನೈಸರ್ಗಿಕ ಸಂಪತ್ತನ್ನು ಹೊರತೆಗೆಯುವಷ್ಟು ಸಮರ್ಥನಾಗಿದ್ದರೂ ಭೂಮಿಯ ಮೇಲೆ ಮನುಷ್ಯ ಮಾನವೀಯತೆಯಿಂದ ಹೇಗೆ ಬದುಕನ್ನು ನಡೆಸಬೇಕು ಎಂಬುದರಲ್ಲಿ ಸೋತಿದ್ದಾನೆ ಎಂದು ಹೇಳಿದರು.

ಮನುಷ್ಯನಲ್ಲಿ ಸಂಸ್ಕಾರದ ಕೊರತೆಯಿಂದ ಧರ್ಮದ ಮಾರ್ಗ ತೊರೆದು ಅಧರ್ಮದ ಮಾರ್ಗದಲ್ಲಿ ನಡೆಯುತ್ತಿರುವುದರಿಂದ, ಸುಜ್ಞಾನಿಯಾಗುವ ಬದಲು ಅಜ್ಞಾನಿಯಂತೆ ವರ್ತಿಸುತ್ತ, ದುಶ್ಚಟಗಳ ದಾಸನಾಗಿ ರಾಕ್ಷಸ ಪ್ರವೃತ್ತಿಯನ್ನು ಮೈಗೂಡಿಸಿಕೊಂಡು ಸಮಾಜದ ಅಶಾಂತಿಗೆ ಕಾರಣವಾಗುತ್ತಿದ್ದು, ಸಮಾಜದಲ್ಲಿ ಮನುಷ್ಯ ಹೇಗೆ ಬದುಕಬೇಕು ಎನ್ನುವುದನ್ನು ಕಲಿಯಲು ಸಾಧ್ಯವಾಗಿಲ್ಲ ಎಂದರು. ನಮ್ಮನ್ನು ನಾವು ಮೊದಲು ಬದಲಾವಣೆ ಮಾಡಿಕೊಳ್ಳಬೇಕು. ಗುರುವಿನ ಮಾರ್ಗದರ್ಶನದಲ್ಲಿ ಸಾಗಬೇಕು. ಇದರಿಂದ ಮಾತ್ರ ನಾವು ಜೀವನದಲ್ಲಿ ಯಶಸ್ಸು ಗಳಿಸಲು ಸಾಧ್ಯ ಎಂದು ತಿಳಿಸಿದರು.

ಕಾರ್ಯಕ್ರಮಕ್ಕೂ ಮೊದಲು ವಿಶೇಷವಾಗಿ ಅಲಂಕರಿಸಲಾಗಿದ್ದ ಗದ್ದುಗೆಗೆ ಮಹಾರುದ್ರಾಭಿಷೇಕ, ಮಹಾ ಮಂಗಳಾರತಿ ಕಾರ್ಯಕ್ರಮ ನೆರವೇರಿಸಲಾಯಿತು. ಇದೇ ವೇಳೆ ಡಾ.ಮುಮ್ಮಡಿ ಶಿವರುದ್ರ ಮಹಾಸ್ವಾಮಿಗಳವರ ಶಿವ ಪೂಜೆ ಹಾಗೂ ಪಾದಪೂಜೆ ಕಾರ್ಯಕ್ರಮ ನಡೆಯಿತು.

ಚಿದರವಳ್ಳಿ ಪಾರಮಾರ್ಥಿಕ ಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮಿ ಆಶೀರ್ವಚನ ನೀಡಿದರು. ಸೋಸಲೆ ತೋಪಿನ ಮಠದ ಇಮ್ಮಡಿ ಷಡಕ್ಷರ ಸ್ವಾಮಿಗಳು ಧಾರ್ಮಿಕ ಸಭೆಯ ದಿವ್ಯ ಸಾನ್ನಿಧ್ಯ ವಹಿಸಿದ್ದರು.

ಮಾಜಿ ಶಾಸಕಿ ಪರಿಮಳಾ ನಾಗಪ್ಪ, ಎಂ.ಎಲ್ ಹುಂಡಿ ಮಠದ ಗೌರಿ ಶಂಕರ ಸ್ವಾಮೀಜಿ, ಮುಡುಕುತೊರೆ ಮಠದ ಮಲ್ಲಿಕಾರ್ಜುನಸ್ವಾಮಿ, ಸರಗೂರು ಹಾಗೂ ಸೇತುವೆ ಮಠದ ಸ್ವಾಮಿಗಳು, ತೋಪಿನಮಠದ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ನಟರಾಜು, ಉಪಾಧ್ಯಕ್ಷ ಸುಧಾಕರ್, ವೀರಶೈವ ಲಿಂಗಾಯಿತ ಮಹಾಸಭಾದ ಅಧ್ಯಕ್ಷ ಶಾಂತರಾಜು, ಎಸ್.ಎಂ.ಆರ್. ಪ್ರಕಾಶ್, ಅಂಗಡಿ ಶೇಖರ್, ಫ್ಯಾನ್ಸಿ ಮೋಹನ್, ಚಿದರವಳ್ಳಿ ನವೀನ್, ಅಂಗಡಿ ನಾಗೇಶ್, ಹೆಳವರ ಹುಂಡಿ ಮೂರ್ತಿ, ಅಕ್ಕಿ ನಾಗಪ್ಪ, ಮುರುಡೇಶ್, ಸುಧೀರ್, ನೂತನ್, ಕರ್ನಾಟಕ ಸಹಕಾರಿ ಹಾಲು ಮಹಾಮಂಡಲದ ನಿರ್ದೇಶಕ ನಂಜುಂಡಸ್ವಾಮಿ ಸೇರಿದಂತೆ ಹರಗೂರು ಚರಮೂರ್ತಿಗಳು ಭಾಗವಹಿಸಿದ್ದರು.

ಮಕ್ಕಳನ್ನೂ ಕರೆತನ್ನಿ, ಸಂಸ್ಕಾರ ಬೆಳೆಸಿ....

ಪೋಷಕರು ತಮ್ಮ ಮಕ್ಕಳನ್ನು ಧಾರ್ಮಿಕ ಸಮಾರಂಭಗಳಿಗೆ ಕರೆತರುವ ಮೂಲಕ ಅವರಲ್ಲಿ ಸಂಸ್ಕಾರ ಬಿತ್ತುವ ಕೆಲಸ ಮಾಡಬೇಕು.ಮಕ್ಕಳನ್ನು ಮಠಕ್ಕೆ ಕರೆದೊಯ್ದು ಮಠವೆಂದರೇನು?ಸ್ವಾಮೀಜಿಗಳ ಆಚಾರ ವಿಚಾರದ ಬಗ್ಗೆ ಅವರಿಗೆ ಪರಿಚಯ ಮಾಡಿಕೊಟ್ಟಾಗ ಧರ್ಮ ಉಳಿಯಲು ಸಾಧ್ಯವಾಗುತ್ತದೆ ಎಂದರು.

ಲಿಂಗೈಕ್ಯ ಶ್ರೀಗಳು 40 ವರ್ಷ ಮಠದ ಕಾಂಪೌಂಡ್ ದಾಟಿರಲಿಲ್ಲ....!: ಮಠದ ಲಿಂಗೈಕ್ಯ ವಿರೂಪಾಕ್ಷ ಮಹಾಸ್ವಾಮೀಜಿಗಳು 40 ವರ್ಷಗಳಿಂದ ಮಠದಿಂದ ಆಚೆ ಬಾರದೇ ಒಳಗೆ ಇದ್ದು ಗದ್ದುಗೆ ಪೂಜೆ, ದರ್ಶನ ಮಾಡಿ ಎಲ್ಲ ಭಕ್ತ ಮಹಾಶಯರನ್ನು ಮಠಕ್ಕೆ ಕರೆಸಿಕೊಂಡು ಸಹಕಾರದೊಂದಿಗೆ ಮಠವನ್ನು ಬೆಳೆಸಿ ಸೇವೆ ಮಾಡುತ್ತಿದ್ದ ಅವರ ಗುಣ ನಿಜಕ್ಕೂ ಶ್ಲಾಘನೀಯ ಎಂದರು.

ಗಾವಡಗೆರೆಯಲ್ಲಿ ವಿಶ್ವ ಸೊಳ್ಳೆ ದಿನಾಚರಣೆ



ವಿಶ್ವ ಸೊಳ್ಳೆ ದಿನಾಚರಣೆಯ ಅಂಗವಾಗಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಹಿರೀಕ್ಯಾತನಹಳ್ಳಿ, ಆ.21– ಹುಣಸೂರು ತಾಲೂಕಿನ ಗಾವಡಗೆರೆ ಪ್ರಾಥಮಿಕ ಆರೋಗ್ಯ ಕೇಂದ್ರ, ಸರ್ಕಾರಿ ಪ್ರೌಢಶಾಲೆ ಹಾಗೂ ಬೆಳಕು ಜ್ಞಾನ ವಿಕಾಸ ಕೇಂದ್ರದ ವತಿಯಿಂದ ವಿಶ್ವ ಸೊಳ್ಳೆ ದಿನ ಆಚರಿಸಲಾಯಿತು. ಆರೋಗ್ಯ ನಿರೀಕ್ಷಣಾಧಿಕಾರಿ ಹೆಚ್.ಬಿ. ಹನುಮಂತ್ ಮಾತನಾಡಿ, ವಿಶ್ವ ಸೊಳ್ಳೆ ದಿನಾಚರಣೆ ಆಚರಿಸುವ ಮಹತ್ವದ ಬಗ್ಗೆ ತಿಳಿಸಿ, ಸೊಳ್ಳೆಯಿಂದ ಹರಡುವ ಕಾಯಿಲೆಗಳ ಬಗ್ಗೆ ಜಾಗೃತಿ ಮೂಡಿಸುವುದು ಸೊಳ್ಳೆಯಿಂದ ಹರಡುವ ಕಾಯಿಲೆಗಳು ಡೆಂಗ್ಯೂ, ಚಿಕನ್ ಗುನ್ಯಾ, ಜ್ವರ, ಮಲೇರಿಯಾ ಫೈಲೇರಿಯ ಮೆದುಳು ಜ್ವರ ಬಗ್ಗೆ ಮಾಹಿತಿ ನೀಡಿ ಸಾರ್ವಜನಿಕರು ಸೊಳ್ಳೆ ತಾಣಗಳಾದ ನೀರು ಶೇಖರಣ ತೊಟ್ಟಿಗಳು ಡ್ರಮ್‌ಗಳು ಘನತ್ಯಾಜ್ಯ ವಸ್ತುಗಳನ್ನು ಸ್ವಚ್ಛಗೊಳಿಸುವುದು ಮಲಗುವಾಗ ಕಡ್ಡಾಯವಾಗಿ ಸೊಳ್ಳೆ ಪರದೆ ಬಳಸುವುದು, ಯಾವುದೇ ಜ್ವರ ಇದ್ದರೆ ತಕ್ಷಣ ಆಸ್ಪತ್ರೆಗೆ ಭೇಟಿ ನೀಡುವಂತೆ ಮಾಹಿತಿ ನೀಡಿದರು. ನಂತರ ಶಾಲಾ ವಿದ್ಯಾರ್ಥಿಗಳಿಗೆ ಪ್ರತಿಜ್ಞೆ ಮಾಡಿಸಲಾಯಿತು.

ಶಾಲಾ ಮುಖ್ಯೋಪಾಧ್ಯಾಯ ಸಿದ್ದರಾಜು, ಸಮುದಾಯ ಆರೋಗ್ಯ ಅಧಿಕಾರಿಗಳಾದ ಧನಲಕ್ಷ್ಮಿ, ಶ್ವೇತಾ, ಮಹಾದೇವಿ, ಜ್ಞಾನ ವಿಕಾಸ ಮಹಿಳಾ ಸಂಘದ ಸದಸ್ಯರು ಹಾಗೂ ಪ್ರೌಢಶಾಲಾ ಸಹ ಶಿಕ್ಷಕರು, ವಿದ್ಯಾರ್ಥಿಗಳು ಹಾಜರಿದ್ದರು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

ಅರಸು ಮುಂದಿನ ಪೀಳಿಗೆಗಾಗಿ ಕೆಲಸ ಮಾಡುತ್ತಿದ್ದರು

ಕೃತಜ್ಞತಾ ಸಭೆಯಲ್ಲಿ ಸಂಸದ ಯದುವೀರ್



ಕಾರ್ಯಕ್ರಮದಲ್ಲಿ ಸಂಸದ ಯದುವೀರ್ ಮಾತನಾಡಿದರು

ಹಿರಿಕ್ಯಾತನಹಳ್ಳಿ, ಆ.21– ಪ್ರತಿಯೊಬ್ಬರೂ ಸಾಮಾನ್ಯವಾಗಿ ಮುಂಬರುವ ಚುನಾವಣೆಗೆ ಕೆಲಸ ಮಾಡಿದರೆ, ಅರಸು ಅವರು ಮುಂದಿನ ಪೀಳಿಗೆಗಾಗಿ ಕೆಲಸ ಮಾಡುತ್ತಿದ್ದರು ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದರು.

ಇಲ್ಲಿನ ಕಟ್ಟೆಮಳಲವಾಡಿ, ಗಾವಡಗೆರೆ ಗ್ರಾಮಗಳಲ್ಲಿ ಆಯೋಜಿಸಿದ್ದ ಕೃತಜ್ಞತಾ ಸಭೆಯಲ್ಲಿ ಮಾತನಾಡಿದ ಅವರು, ಲೋಕಸಭಾ ಚುನಾವಣೆಯಲ್ಲಿ ನನಗೆ ಮತದಾರರು ಜಾತಿ ಮತ ಮೀರಿ ಮತ ನೀಡಿದ್ದಾರೆ. ಜೆಡಿಎಸ್–ಬಿಜೆಪಿ ಒಟ್ಟಾಗಿ ಮತಯಾಚಿಸುವ ಮೂಲಕ ನನ್ನ ಗೆಲುವಿಗೆ ಶ್ರಮಿಸಿದ ಮತದಾರರು ಹಾಗೂ ಕಾರ್ಯಕರ್ತರಿಗೆ ನಾನು ಗೌರವ ತರುವ ಕೆಲಸ ಮಾಡುತ್ತೇನೆ. ಮೈಸೂರು–ಕೊಡಗು ಲೋಕಸಭಾ ಕ್ಷೇತ್ರವನ್ನು ದೇಶಕ್ಕೆ ಮಾದರಿಯಾಗಿಸುವ ಜೊತೆಗೆ ಪ್ರಧಾನಿ ಅವರ ಕನಸಿನ ವಿಕಸಿತ ಭಾರತ ನಿರ್ಮಾಣಕ್ಕೆ ಶ್ರಮಿಸಲಾಗುವುದು ಎಂದರು.

ಪ್ರಸ್ತುತ ಅನೇಕ ಸವಾಲು ಎದುರಿಸಿ ಕೆಲಸ ಮಾಡಬೇಕಿದೆ. ಮುಂದಿನ ಪೀಳಿಗೆಗೆ ಒಳ್ಳೆಯ ವಾತಾವರಣ ನಿರ್ಮಿಸಿಕೊಡಬೇಕಿದೆ. ಅಲ್ಲದೇ ಇಂದಿನ ಬದುಕಿನ ಪರಿಸ್ಥಿತಿ ಉತ್ತಮಗೊಳಿಸಬೇಕಾಗಿದೆ. ಆದ್ದರಿಂದ ಡಿ.ದೇವರಾಜ ಅರಸು ಅವರ ಮಾರ್ಗ ಅನುಸರಿಸಿ ಕೆಲಸ ಮಾಡಬೇಕಾಗಿದೆ. ಆದ್ದರಿಂದ ಎಲ್ಲರೂ ಒಗ್ಗಟ್ಟಿನಿಂದ ಕೈ ಜೋಡಿಸಬೇಕೆಂದು ಮನವಿ ಮಾಡಿದರು.

ಇದೇ ವೇಳೆ ಸಂಸದ ಯದುವೀರ್ ಅವರನ್ನು ಸನ್ಮಾನಿಸಲಾಯಿತು. ಗ್ರಾಪಂ ಅಧ್ಯಕ್ಷೆ ಚಿನ್ನು ಮುತ್ತು, ಜಿಲ್ಲಾ ಬಿಜೆಪಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಜಿಲ್ಲಾ ಉಪಾಧ್ಯಕ್ಷ ಸೋಮಶೇಖರ್, ಬಿಜೆಪಿ ರಾಜ್ಯ ಎಸ್‌ಸಿ ಮೋರ್ಚಾ ಮಾಜಿ ಉಪಾಧ್ಯಕ್ಷ ನಾಗರಾಜ್ ಮಲ್ಲಾಡಿ, ತಂಬಾಕು ಮಂಡಳಿ ಸದಸ್ಯ ದಿನೇಶ್, ಮಾಜಿ ಸದಸ್ಯ ಕಿರಣ್ ಕುಮಾರ್, ತಾಲೂಕು ಬಿಜೆಪಿ ಅಧ್ಯಕ್ಷ ಕಾಂತರಾಜು, ಪ್ರಧಾನ ಕಾರ್ಯದರ್ಶಿ ಸತೀಶ್, ತಾಲೂಕು ರೈತ ಮೋರ್ಚಾ ಅಧ್ಯಕ್ಷ ಪ್ರಸನ್ನ, ಮಂಜುನಾಥ್, ಮುಖಂಡರಾದ ಸೋಮಶೇಖರ್, ರಮೇಶ್ ಕುಮಾರ್, ಶ್ರೀಧರ್, ಪುಟ್ಟರಾಜು, ಆಂಜನೇಯ, ಆನಂದ್, ಸ್ವಾಮಿ, ನಾಗೇಂದ್ರ ಶೆಟ್ಟಿ, ದೇವರಾಜು ಸೇರಿದಂತೆ ಹಲವರಿದ್ದರು.

ನಂ.ಗೂಡಲ್ಲಿ ಶ್ರೀರಾಘವೇಂದ್ರಸ್ವಾಮಿ ಆರಾಧನಾ ಮಹೋತ್ಸವ



ನಂಜನಗೂಡು, ಆ.21– ನಗರದ ರಾಷ್ಟ್ರಪತಿ ರಸ್ತೆಯಲ್ಲಿರುವ ಶ್ರೀರಾಘವೇಂದ್ರಸ್ವಾಮಿಗಳ ಪ್ರತೀಕ ಸನ್ನಿಧಾನದಲ್ಲಿ ಶ್ರೀರಾಘವೇಂದ್ರ ತೀರ್ಥ ಗುರುಸಾರ್ವಭೌಮರ 353ನೇ ವರ್ಷದ ಆರಾಧನಾ ಮಹೋತ್ಸವ ಅಂಗವಾಗಿ ಬುಧವಾರ ಮಧ್ಯಾರಾಧನೆ ಸೇರಿದಂತೆ ಧಾರ್ಮಿಕ ಪೂಜಾ ಕೈಂಕರ್ಯಗಳು ಸಾಂಗವಾಗಿ ನೆರವೇರಿದವು.

ರಾಘವೇಂದ್ರಸ್ವಾಮಿಗಳ ವಿಗ್ರಹವಿರುವ ಏಕೈಕ ಮಠ ಎನ್ನುವ ಹೆಗ್ಗಳಿಕೆ ಹೊಂದಿರುವ ನಂಜನಗೂಡಿನಲ್ಲಿ ಮಂಗಳವಾರ ಪೂರ್ವಾರಾಧನೆಯೊಂದಿಗೆ ಚಾಲನೆಗೊಂಡಿತು. ಇನ್ನು ರಾಯರು ಬೃಂದಾವನಾ ಪ್ರವೇಶ ಮಾಡಿದ ದಿನದ ಸ್ಮರಣಾರ್ಥವಾಗಿ ಬುಧವಾರ ಹಲವು ಪೂಜಾ ಸೇವೆಗಳು ಜರುಗಿದವು. ರಾಯರ ಪಾದಪೂಜೆ ನಡೆಸಿದ ಬಳಿಕ ಮಠದ ಒಳಾವರಣದಲ್ಲಿ ರಥೋತ್ಸವ ಜರುಗಿತು. ರಾಯರಿಗೆ ವರ್ಣಾಂಕೃತದೊಂದಿಗೆ ಮುಂಜಾನೆ ಪಂಚಾಮೃತ ಅಭಿಷೇಕ ನಡೆಯಿತು. ನಂತರ ಮಹಾಮಂಗಳಾರತಿ ನೆರವೇರಿಸಲಾಯಿತು.

ಮಠದ ಗರ್ಭಗುಡಿ ಸೇರಿದಂತೆ ಒಳಾವರಣ, ಮುಖ್ಯ ಪ್ರಾಂಗಣದಲ್ಲಿ ಮಾಡಿದ್ದ ಬಗೆಬಗೆಯ ಹೂವಿನ ಅಲಂಕಾರ ಭಕ್ತರ ಕಣ್ಮನ ಸೆಳೆಯಿತು. ಬೆಳಗ್ಗೆಯಿಂದ ರಾತ್ರಿವರೆಗೂ ಭಕ್ತರು ಮಠಕ್ಕೆ ಭೇಟಿ ನೀಡಿ ರಾಯರ ದರ್ಶನ ಪಡೆದರು. ಮಧ್ಯಾಹ್ನ ಭಕ್ತರಿಗಾಗಿ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು. ವಿದ್ವಾನ್ ಸುಮುಖಸೂರ್ಯ ಅವರು ನಡೆಸಿಕೊಟ್ಟ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ಭಕ್ತರನ್ನು ಮಂತ್ರಮುಗ್ಧಗೊಳಿಸಿತು. ವಿದ್ವಾನ್ ಕೇಶವ್ ಮೋಹನ್‌ಕುಮಾರ್ ಅವರು ನಡೆಸಿಕೊಟ್ಟ ಕರ್ನಾಟಕ ಶಾಸ್ತ್ರೀಯ ಪಿಟೀಲು ವಾದನ ಭಕ್ತರನ್ನು ಮನಸೂರೆಗೊಳಿಸಿತು. ವಿದ್ವಾನ್ ಭಾನುಸಿಂಹ ಅವರು ಬುಧವಾರ ದಾಸವಾಣಿ ನಡೆಸಿಕೊಟ್ಟರು.

ಆರಾಧನಾ ಮಹೋತ್ಸವ ಆರಂಭಕ್ಕೂ ಮುನ್ನ ಧಾನ್ಯಪೂಜೆ, ಗೋಪೂಜೆ ಸಲ್ಲಿಸಿ ಧ್ವಜಾರೋಹಣ ನೆರವೇರಿಸಲಾಗಿತ್ತು ಗುರುವಾರ ಉತ್ತರಾಧನೆ ಅಂಗವಾಗಿ ರಥೋತ್ಸವ ನೆರವೇರಲಿದೆ. ಕಳೆದ ಮೂರು ದಿನಗಳಿಂದ ಭಕ್ತರು ಮಠಕ್ಕೆ ಸಾಗರೋಪಾದಿಯಲ್ಲಿ ಆಗಮಿಸಿ ರಾಯರ ಕೃಪೆಗೆ ಪಾತ್ರರಾಗುತ್ತಿದ್ದಾರೆ. ಆ.23ರಂದು ಸುಜ್ಞಾನೇಂದ್ರತೀರ್ಥರ ಆರಾಧನೆಯೊಂದಿಗೆ ಮಹೋತ್ಸವ ಸಂಪನ್ನಗೊಳ್ಳಲಿದೆ ಎಂದು ಮಠದ ವ್ಯವಸ್ಥಾಪಕ ಕೆ.ಸುಧಾಕರ್ ತಿಳಿಸಿದರು.

ಹುಣಸೂರಲ್ಲಿ ಛಾಯಾಗ್ರಹಣ ದಿನಾಚರಣೆ



ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಮಕ್ಕಳನ್ನು ಸನ್ಮಾನಿಸಲಾಯಿತು.

ಹುಣಸೂರು, ಆ.21– ನಗರದ ರಘು ಫೋಟೋ ವರ್ಲ್ಡ್‌ನಲ್ಲಿ 185ನೇ ಛಾಯಾಗ್ರಹಣ ದಿನಾಚರಣೆ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಶಾಸಕ ಜಿ.ಡಿ.ಹರೀಶ್‌ಗೌಡ, ಇತ್ತೀಚಿನ ದಿನಗಳಲ್ಲಿ ಡಿಜಿಟಲ್ ಕ್ಯಾಮರಾ ಹಾಗೂ ಲೆನ್ಸ್ ದರ ದುಬಾರಿಯಾಗಿದ್ದು, ಛಾಯಾಗ್ರಾಹಕರು ಹೊಸ ತಂತ್ರಜ್ಞಾನ ಅಳವಡಿಸಿಕೊಂಡು ಛಾಯಾಗ್ರಹಣದಲ್ಲಿ ಮುಂದುವರೆಯುವುದು ಸವಾಲಾಗಿದೆ ಎಂದರು. ಛಾಯಾಗ್ರಾಹಕರ ಸಹಕಾರ ಸಂಘ ಸ್ಥಾಪನೆ, ಸಂಘದ ನಿವೇಶನಕ್ಕೆ ಸಂಪೂರ್ಣ ಸಹಕಾರ ನೀಡುವುದಾಗಿ ತಿಳಿಸಿದ ಅವರು ಸಂಘದ ಸದಸ್ಯರು ಸಿಗುವ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ತಾಲೂಕು ಛಾಯಾಗ್ರಾಹಕರ ಸಂಘದ ಅಧ್ಯಕ್ಷ ರಾಮಸ್ವಾಮಿ ಮಾತನಾಡಿ 1992 ರಲ್ಲಿ ಸಂಘ ಸ್ಥಾಪನೆಯಾಗಿದ್ದು, ಇದೀಗ 106 ಸದಸ್ಯರಿದ್ದಾರೆ. ಸಂಘದ ಸದಸ್ಯರಿಗೆ ಅಂಚೆ ಇಲಾಖೆ ವಿಮೆ ಕಲ್ಪಿಸಲಾಗಿದೆ ಎಂದರು.

ಪೌರಾಯುಕ್ತ ಮಾನಸ ಮಾತನಾಡಿದರು. ಹಿರಿಯ ಛಾಯಾಗ್ರಾಹಕರಾದ ಸುರೇಶ್, ರೇಣುಕಾಮೂರ್ತಿ, ಸುಂದರ್ ರಾಜ್ ಪಿಳ್ಳೆ, ವೆಂಕಟೇಶ್ ಅವರನ್ನು ಸನ್ಮಾನಿಸಲಾಯಿತು. ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ಸಂಘದ ಸದಸ್ಯರ ಮಕ್ಕಳನ್ನು ಅಭಿನಂದಿಸಲಾಯಿತು. ಈ ವೇಳೆ ಸಂಘದ ಗೌರವಾಧ್ಯಕ್ಷ ಜೇವಿಯರ್, ಉಪಾಧ್ಯಕ್ಷ ದಾಮೋದರ್, ಕಾರ್ಯದರ್ಶಿ ಸುರೇಶ್, ಖಜಾಂಚಿ ಅರುಣ, ಸಂಘದ ಪದಾಧಿಕಾರಿಗಳು, ಸದಸ್ಯರು ಹಾಜರಿದ್ದರು.

ಆನೆ ಕಾರ್ಯಪಡೆ ಕಂಟ್ರೋಲ್ ರೂಂ ಉದ್ಘಾಟನೆ



ಆನೆ ಕಂಟ್ರೋಲ್ ರೂಂ ಅನ್ನು ಶಾಸಕ ದರ್ಶನ್ ಉದ್ಘಾಟಿಸಿದರು.

ಮಲ್ಲುಂಡಿ, ಆ.21– ಗ್ರಾಮೀಣ ಭಾಗದಲ್ಲಿ ಆನೆಗಳ ಹಾವಳಿ ಹೆಚ್ಚಾಗಿ ರೈತರ ಫಸಲುಗಳನ್ನು ನಾಶಪಡಿಸುವುದನ್ನು ತಡೆಗಟ್ಟಲು ಅರಣ್ಯ ಇಲಾಖೆ ಹೆಚ್ಚು ಗಮನ ಹರಿಸಲಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ಹೇಳಿದರು.

ಸಮೀಪದ ಹೆಡಿಯಾಲ ಗ್ರಾಮದಲ್ಲಿ ಆನೆ ಕಾರ್ಯಪಡೆ ಕಂಟ್ರೋಲ್ ರೂಂ ಉದ್ಘಾಟಿಸಿ ಮಾತನಾಡಿದ ಅವರು, ಕಾಡಂಚಿನ ಗ್ರಾಮಗಳಲ್ಲಿ ಕಾಡುಪ್ರಾಣಿಗಳ ಹಾವಳಿ ಹೆಚ್ಚಾಗಿ ರೈತರ ಫಸಲುಗಳನ್ನು ನಾಶಪಡಿಸುತ್ತಿದ್ದು, ಸರ್ಕಾರ ರೈತರ ಪರವಾಗಿ ಕೆಲಸ ಮಾಡುವ ನಿಟ್ಟಿನಲ್ಲಿ ಹೆಡಿಯಾಲ ಅರಣ್ಯ ಭಾಗಕ್ಕೆ 45 ಸಿಬ್ಬಂದಿಗಳನ್ನು ನೇಮಕ ಮಾಡಲಾಗಿದೆ ಎಂದರು.

ಮುಂದಿನ ದಿನಗಳಲ್ಲಿ ಕಾಡು ಪ್ರಾಣಿಗಳ ಹಾವಳಿ ತಪ್ಪಿಸಲು ಸರ್ಕಾರ ನಿರ್ಧಾರ ಕೈಗೊಂಡಿದೆ. ಕಾಡಂಚಿನ ಗ್ರಾಮಗಳಲ್ಲಿ ಮಹಿಳೆಯರಿಗೆ ರುಡ್‌ಸೆಟ್ ಸಂಸ್ಥೆ ವತಿಯಿಂದ ಹೊಲಿಗೆ ತರಬೇತಿ ನೀಡಿ ಮಹಿಳೆಯರಿಗೆ ಸ್ವಾವಲಂಬನೆ ಜೀವನ ನಡೆಸಲು ಅವಕಾಶ ಸಿಕ್ಕಿದೆ ಪ್ರತಿಯೊಬ್ಬರು ಇಂತಹ ತರಬೇತಿಯನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಸಹಾಯಕ ಸಂಯೋಜಕ ಸತೀಶ್, ರುಡ್‌ಸೆಟ್ ಸಂಸ್ಥೆಯ ಮುಖ್ಯಸ್ಥೆ ಕವಿತಾ ಮಾತನಾಡಿ, ಆನೆ ತಡೆಗಟ್ಟಲು ಈಗಾಗಲೇ ರೈಲ್ವೆ ಕಂಬಿಗಳನ್ನು ಅಳವಡಿಸಲಾಗಿದೆ. 1 ಕಿಲೋ ಮೀಟರ್ ದೂರ ಮೆಸ್ ನಿರ್ಮಿಸಲಾಗಿದೆ. ಮುಂದಿನ ದಿನಗಳಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲು ಸರ್ಕಾರದ ಜೊತೆ ಚರ್ಚೆ ಮಾಡಿ ಅನುದಾನ ನೀಡುತ್ತೇನೆ ಎಂದು ಭರವಸೆ ನೀಡಿ ಅರಣ್ಯ ಅಧಿಕಾರಿಗಳು ಪ್ರತಿ ಗ್ರಾಮಗಳಿಗೆ ಭೇಟಿ ನೀಡಿ, ರೈತರ ವಿಶ್ವಾಸ ಪಡೆದು ರೈತರ ಪರ ಕೆಲಸ ಮಾಡಿ ಎಂದು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಇದೇ ವೇಳೆ ಶಾಲಾ ಮಕ್ಕಳಿಗೆ ಬ್ಯಾಗ್, ಹಾಡಿ ವಿದ್ಯಾರ್ಥಿಗಳಿಗೆ ಸೋಲಾರ್ ದೀಪ ವಿತರಣೆ ಮಾಡಲಾಯಿತು. ಜಿಪಂ ಮಾಜಿ ಸದಸ್ಯ ಕೆ. ಮಾರುತಿ, ತಾಪಂ ಮಾಜಿ ಅಧ್ಯಕ್ಷ ನಾಗೇಶ್‌ರಾಜ್, ಅರಣ್ಯ ಅಧಿಕಾರಿ ಪ್ರಭಾಕರ್, ಸತೀಶ್, ಆರ್‌ಎಫ್‌ಓ ನಾರಾಯಣ್, ಗ್ರಾಪಂ ಮಾಜಿ ಅಧ್ಯಕ್ಷ ನೆಹಮತ್ ಉಲ್ಲಾಖಾನ್, ಗ್ರಾಪಂ ಸದಸ್ಯ ಅರ್ಸಫ್ ಅಲಿ, ನಾಗರಾಜೇಗೌಡ, ರುಡ್‌ಸೆಟ್ ಸಂಸ್ಥೆಯ ಸರಿತ, ಅರಣ್ಯ ಸಿಬ್ಬಂದಿಗಳಾದ ಮಹಾಂತೇಶ್, ರಘುನಾಥ್, ಮುಖಂಡರುಗಳಾದ ಶಿವನಾಗಪ್ಪ ಪಟೇಲ್ ಮಹದೇವಪ್ಪ ಸೇರಿದಂತೆ ಪ್ರಮುಖರು ಹಾಜರಿದ್ದರು.

ಯಾತ್ರಾರ್ಥಿಗಳಿಗೆ ಅರ್ಜಿ ಆಹ್ವಾನ

ನಂಜನಗೂಡು, ಆ.21– ಪ್ರಸಕ್ತ ಸಾಲಿನ ಮಹಾರಾಷ್ಟ್ರದ ನಾಗಾಪುರದ ದೀಕ್ಷಾ ಭೂಮಿಗೆ ಭೇಟಿ ನೀಡುವ ಯಾತ್ರಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಬಸ್‌ಗಳ ವ್ಯವಸ್ಥೆ ಮಾಡಲಾಗಿದ್ದು, ಯಾತ್ರಾರ್ಥಿಗಳು ಇಲಾಖೆ ವೆಬ್‌ಸೈಟ್: https//sw.kar.nic.in ನಲ್ಲಿ ಆನ್‌ಲೈನ್ ಮೂಲಕ ಆ.31ರ ಒಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಭೀಮರಾವ್ ಮಡ್ಡರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶ್ರಮಜೀವಿ ಶುಂಠಿ ಕೂಲಿಕಾರ್ಮಿಕರ ಸಂಘ ಅಸ್ತಿತ್ವಕ್ಕೆ

ಕಾರ್ಮಿಕ ಇಲಾಖೆಯಿಂದ ಶುಂಠಿ ಬೆಳೆಗಾರರಿಗೆ ಹಲವು ಸೌಲಭ್ಯಗಳು



ಶುಂಠಿ ಕೂಲಿಗಾರರು ನೂತನವಾಗಿ ಸ್ಥಾಪಿಸಿದ ಶ್ರಮಜೀವಿ ಶುಂಠಿ ಕೂಲಿ ಕಾರ್ಮಿಕರ ಸಂಘವನ್ನು ಉದ್ಘಾಟಿಸಿದ ಶಾಸಕ ಅನಿಲ್ ಚಿಕ್ಕಮಾದು.

ಹೆಚ್.ಡಿ.ಕೋಟೆ, ಆ.21– ಶುಂಠಿ ಬೆಳೆಗಾರರಿಗೆ ಅಸಂಘಟಿತ ಕಾರ್ಮಿಕ ಯೋಜನೆಯಡಿ ಬರುವುದರಿಂದ ಕಾರ್ಮಿಕ ಇಲಾಖೆಯಿಂದ ಹಲವು ಸೌಲಭ್ಯಗಳಿದ್ದು, ಅದರ ಸದುಪಯೋಗ ಪಡೆದುಕೊಳ್ಳುವಂತೆ ಶುಂಠಿ ಕೂಲಿ ಕಾರ್ಮಿಕರಿಗೆ ಶಾಸಕ ಅನಿಲ್ ಚಿಕ್ಕಮಾದು ಸಲಹೆ ನೀಡಿದರು.

ಪಟ್ಟಣದ ಹ್ಯಾಂಡ್‌ಪೋಸ್ಟ್ ಸಮೀಪವಿರುವ ಬೊಪ್ಪನಹಳ್ಳಿ ಗೇಟ್ ಹತ್ತಿರ ಹೆಚ್.ಡಿ. ಕೋಟೆ, ಸರಗೂರು ಮತ್ತು ಹುಣಸೂರು ತಾಲೂಕಿನ ಶುಂಠಿ ಕೂಲಿಗಾರರು ನೂತನವಾಗಿ ಸ್ಥಾಪಿಸಿದ ಶ್ರಮಜೀವಿ ಶುಂಠಿ ಕೂಲಿ ಕಾರ್ಮಿಕರ ಸಂಘವನ್ನು ಉದ್ಘಾಟಿಸಿ ಮಾತನಾಡಿದ ಅವರು, ತಾಲೂಕಿನಲ್ಲಿ ಮೂರು ತಾಲೂಕಿನ ಶುಂಠಿ ಕೂಲಿಗಾರರು ಸಂಘಟನೆಯ ಹಿತದೃಷ್ಟಿಯಿಂದ ನೂತನ ಸಂಘವನ್ನು ಸ್ಥಾಪನೆ ಮಾಡಿರುವುದು ಸಂತಸದ ವಿಚಾರ ಎಂದರು.

ಶುಂಠಿ ಬೆಳೆಗಾರರು ಅಸಂಘಟಿತ ಕಾರ್ಮಿಕರಡಿಯಲ್ಲಿ ಬರುವುದರಿಂದ ಕಾರ್ಮಿಕ ಇಲಾಖೆಯಿಂದ ಹಲವು ಸೌಲಭ್ಯಗಳಿದ್ದು ಅದರ ಸದುಪಯೋಗಪಡೆದುಕೊಳ್ಳುವಂತೆ ಕೂಲಿ ಕಾರ್ಮಿಕರಿಗೆ ಸೂಚಿಸಿದ ಅವರು, ಕೂಲಿ ಕಾರ್ಮಿಕರು ಮಳೆ ಬಿಸಿಲೆನ್ನದೆ ತಮ್ಮ ಜೀವನ ನಿರ್ವಹಣೆಗೆ ರೈತರಿಗೆ ಅನುವಾಗುವಂತೆ ಕೆಲಸಗಳನ್ನು ನಿರ್ವಹಿಸುತ್ತಿದ್ದು, ಈ ಸಂಘಟನೆಯ ಬೆಳವಣಿಗೆಗೆ ನಾವು ಶ್ರಮಿಸಲಾಗುವುದು ಎಂದರು.

ತಾಲೂಕು ಕಾರ್ಮಿಕ ನಿರೀಕ್ಷಕ ಹರ್ಷಿತಾ ಮಾತನಾಡಿ, ಅಸಂಘಟಿತ ಕಾರ್ಮಿಕರಿಗೆ ಇಲಾಖೆಯ ವತಿಯಿಂದ ಮತ್ತು ಸರ್ಕಾರದಿಂದ ಹಲವು ಸೌಲಭ್ಯಗಳಿದ್ದು, ಎಲ್ಲಾ ಕಾರ್ಮಿಕರು ನೋಂದಣಿ ಮಾಡಿಸಿ ಇ–ಶ್ರಮ್ ನೋಂದಣಿ ಮಾಡಿ ಸಿದ್ದೇ ಆದಲ್ಲಿ ಹಲವು ಸೌಲಭ್ಯಗಳು ದೊರೆಯಲಿದೆ, ಕೆಲಸದ ವೇಳೆ ಅಪಘಾತಗಳಾಗಲಿ, ಅವಘಡಗಳು ಸಂಭವಿಸಿದರೆ ವಿಮೆ ಸೌಲಭ್ಯ ದೊರೆಯಲಿದೆ. ಅಲ್ಲದೆ ಮಕ್ಕಳಿಗೆ ವಿದ್ಯಾಭ್ಯಾಸದ ನೆರವಿಗೆ ವಿದ್ಯಾರ್ಥಿ ವೇತನವು ಸಹ ದೊರೆಯಲಿದೆ ಎಂದು ಮಾಹಿತಿ ನೀಡಿದರು.

ಸಂಘದ ಅಧ್ಯಕ್ಷ ಮಗ್ಗೆ ಸುಂದ್ರ ಮಾತನಾಡಿ 'ನಮ್ಮ ಸಂಘದಲ್ಲಿ 5000 ಕ್ಕೂ ಹೆಚ್ಚಿನ ಸದಸ್ಯರಿದ್ದು, ಈ ಸದಸ್ಯರಿಗೆ ಸರ್ಕಾರದಿಂದ ಸಿಗಬೇಕಾದ ಸವಲತ್ತುಗಳನ್ನು ದೊರಕಿಸಿಕೊಡುವ ನಿಟ್ಟಿನಲ್ಲಿ ನಮ್ಮ ನೂತನ ಸಂಘ ಶ್ರಮಿಸಲಿದೆ' ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ 200 ಹೆಚ್ಚು ಮಂದಿಗೆ ಕಾರ್ಮಿಕ ಇಲಾಖೆಯ ವತಿಯಿಂದ ಈ–ಶ್ರಮ್ ನೋಂದಣಿಯನ್ನು ಮಾಡಲಾಯಿತು.

ಕಾರ್ಯಕ್ರಮದಲ್ಲಿ ಅಧ್ಯಕ್ಷ ಮಗ್ಗೆ ಸುಂದ್ರ, ಗೌರವಾಧ್ಯಕ್ಷ ನಾಗರಾಜು, ಉಪಾಧ್ಯಕ್ಷ ರಾಮಕೃಷ್ಣ, ಬೆಟ್ಟನಾಯಕ, ಪ್ರಧಾನ ಕಾರ್ಯದರ್ಶಿ ವೆಂಕಟೇಶ್, ಸಹಕಾರ್ಯದರ್ಶಿ ಸೋಮೇಶ್, ಸಂಘಟನಾ ಕಾರ್ಯದರ್ಶಿ ಪ್ರಕಾಶ್, ಖಜಾಂಚಿ ಮರಿಸಿದ್ದಯ್ಯ, ನಿರ್ದೇಶಕರಾಗಿ ರಾಜು, ಬೆಟ್ಟನಾಯಕ, ಮಹದೇವನಾಯಕ ತೇಜಕುಮಾರ್, ಗಿರೀಶ್, ಬೆಟ್ಟನಾಯಕ, ಚಿಕ್ಕಣ್ಣ, ದುಂಡರಾಜು ಗೋವಿಂದರಾಜು, ಜಿಲ್ಲಾ ಕಾರ್ಮಿಕ ಅಧಿಕಾರಿ ಚೇತನ ಮೈಮುಲ್ ನಿರ್ದೇಶಕ ಈರೇಗೌಡ, ಕಾರ್ಮಿಕ ಇಲಾಖೆಯ ಪರಶಿವಮೂರ್ತಿ, ಸರಿತಾ, ರಮ್ಯ, ರಶ್ಮಿಬಾಯಿ, ಮಧುರಾ ಇದ್ದರು.

> ಹೆಚ್.ಡಿ. ಕೋಟೆ, ಸರಗೂರು ಮತ್ತು ಹುಣಸೂರು ತಾಲೂಕಿನ ಶುಂಠಿ ಕೂಲಿಗಾರರು ನೂತನವಾಗಿ ಸ್ಥಾಪಿಸಿದ ಶ್ರಮಜೀವಿ ಶುಂಠಿ ಕೂಲಿ ಕಾರ್ಮಿಕರ ಸಂಘಕ್ಕೆ ಕಚೇರಿಯ ಅವಶ್ಯಕತೆ ಇದ್ದು, ಪಟ್ಟಣದ ಹ್ಯಾಂಡ್‌ಪೋಸ್ಟ್‌ನಲ್ಲಿರುವ ಎಪಿಎಂಸಿ ಮಾರುಕಟ್ಟೆಯ ಪಕ್ಕದಲ್ಲಿರುವ ನಿವೇಶನವನ್ನು ನೀಡಲು ಪ್ರಯತ್ನಿಸಲಾಗುವುದು.
> -ಅನಿಲ್ ಚಿಕ್ಕಮಾದು, ಶಾಸಕ

ಮೈಸೂರಿಗೆ ಬಂದಿತು ದಸರಾ ಆನೆ ಹಿಂಡು; ನೋಡಲು ನಿಂತಿತು ಅರಮನೆ ನಗರಿ ಜನರ ದಂಡು

ಅರಣ್ಯ ಭವನ ಆವರಣದಲ್ಲಿ ರಿಲ್ಯಾಕ್ಸ್ ಮೂಡ್‌ಗೆ ಜಾರಿದ ದಸರಾ ಗಜಪಡೆ




ಅಭಿಮನ್ಯು



ಭೀಮ



ರೋಹಿತ್



ಏಕಲವ್ಯ




ವರಲಕ್ಷ್ಮಿ



ಲಕ್ಷ್ಮೀ



ಕಂಜನ್



ಧನಂಜಯ



ಗೋಪಿ

ಮೈಸೂರು,ಆ.21(ಪಿಎಂ)– ಮೈಸೂರಿಗೆ ಬಂದಿತು ಆನೆ ಹಿಂಡು, ನೋಡಲು ನಿಂತಿತು ಜನರ ದಂಡು... ಹೌದು, ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಯಾದ ಗಜಪಡೆ ಬುಧವಾರ ಸಂಜೆ ವೇಳೆಗೆ ಲಾರಿಗಳಲ್ಲಿ ಮೈಸೂರಿಗೆ ಆಗಮಿಸಿದವು. ಅವುಗಳನ್ನು ಕಂಡ ಸಾರ್ವಜನಿಕರು, ಪುಳಕಗೊಂಡರಲ್ಲದೆ, ಗಜಪಡೆಯ ಗತ್ತು–ಗಮ್ಮತ್ತು ಕಂಡು ರೋಮಾಂಚನಗೊಂಡರು.

ಹುಣಸೂರು ತಾಲೂಕಿನ ವೀರನಹೊಸಳ್ಳಿ ಬಳಿ ಬುಧವಾರ ಬೆಳಗ್ಗೆ ಗಜಪಯಣ ಸಮಾರಂಭದಲ್ಲಿ ಗಾಂಭೀರ್ಯದಲ್ಲಿ ಪೂಜಾ ವಿಧಿವಿಧಾನ ಸ್ವೀಕರಿಸಿದ ಗಜಪಡೆಯು, ಬಳಿಕ ಲಾರಿಗಳನ್ನೇರಿ ಸಂಜೆ ವೇಳೆಗೆ ಸುರಕ್ಷಿತವಾಗಿ ಮೈಸೂರಿಗೆ ಆಗಮಿಸಿದವು. ನಂತರ ಇಲ್ಲಿನ ಅರಣ್ಯ ಭವನ ಆವರಣದಲ್ಲಿ ಜನದಟ್ಟಣೆಯ ನಡುವೆಯೂ ಯಾವುದೇ ರೀತಿಯ ಅಂಜಿಕೆ ಹಾಗೂ ಗಾಬರಿಗೆ ಒಳಗಾಗದೇ ಅಭಿಮನ್ಯು ನೇತೃತ್ವದ ಎಲ್ಲಾ 9 ಆನೆಗಳು ಸುರಕ್ಷಿತವಾಗಿ ಲಾರಿಗಳಿಂದ ಇಳಿದವು.

ತದನಂತರ ಅರಣ್ಯ ಭವನದ ಆವರಣದಲ್ಲಿ ಸಜ್ಜುಗೊಳಿಸಿದ್ದ ಸ್ಥಳದಲ್ಲಿ ತಮ್ಮ ಮಾವುತ ಹಾಗೂ ಕಾವಾಡಿಗಳೊಂದಿಗೆ ವಿಶ್ರಾಂತಿಗೆ ಜಾರಿದವು. ಪೊಲೀಸ್ ಹಾಗೂ ಅರಣ್ಯ ಇಲಾಖೆ ಬೆಂಗಾವಲು ವಾಹನಗಳೊಂದಿಗೆ ಲಾರಿಗಳಲ್ಲಿ ಆನೆಗಳನ್ನು ಸುರಕ್ಷಿತವಾಗಿ ಕರೆತರಲಾಯಿತು.

ಹುಣಸೂರು ರಸ್ತೆ ಮೂಲಕ ಮೈಸೂರು ನಗರಕ್ಕೆ ಆಗಮಿಸಿದ ಗಜಪಡೆ, ಕೃಷ್ಣರಾಜ ಬುಲೇವಾರ್ಡ್ ರಸ್ತೆ ಮೂಲಕ ಅಶೋಕಪುರಂನಲ್ಲಿರುವ ಅರಣ್ಯ ಇಲಾಖೆಯ ಅರಣ್ಯ ಭವನ ಆವರಣ ತಲುಪಿದವು. ಆನೆಗಳನ್ನು ಹೊತ್ತ ಲಾರಿಗಳು ಮೈಸೂರು ನಗರಕ್ಕೆ ಪ್ರವೇಶ ಪಡೆಯುತ್ತಿದ್ದಂತೆ ಸಾರ್ವಜನಿಕರು ಆನೆಗಳನ್ನು ಕಂಡು ಕೌತುಕದಿಂದ ಅವುಗಳ ಆಟಪಾಠಗಳನ್ನು ನೋಡಲಾರಂಭಿಸಿದರು. ಅಲ್ಲದೆ, ತಮ್ಮ ಮೊಬೈಲ್ ಕ್ಯಾಮರಾಗಳಲ್ಲಿ ಅವುಗಳನ್ನು ಚಿತ್ರೀಕರಿಸಿ ಸಂಭ್ರಮಿಸಿದರು. ಸದ್ಯಕ್ಕೆ ಫುಲ್ ರಿಲ್ಯಾಕ್ಸ್ ಮೂಡ್‌ನಲ್ಲಿರುವ ಗಜಪಡೆಗೆ ಅರಣ್ಯ ಇಲಾಖೆ ವಿಶೇಷ ಕಾಳಜಿ ವಹಿಸಿ ತಾಲೀಮಿಗೆ ಸಜ್ಜುಗೊಳಿಸಲು ಸಿದ್ಧತೆ ನಡೆಸಿದೆ. ಬುಧವಾರ ಹಾಗೂ ಗುರುವಾರ ಅರಣ್ಯ ಭವನದಲ್ಲೇ ವಾಸ್ತವ್ಯ ಹೂಡಲಿರುವ ಗಜಪಡೆಯನ್ನು ಆ.23ರಂದು ಸಾಂಪ್ರದಾಯಿಕ ಪೂಜೆ ಸಲ್ಲಿಸಿ ವಿಜೃಂಭಣೆಯಿಂದ ಅರಮನೆಗೆ ಬೀಳ್ಕೊಡಲಾಗುತ್ತದೆ. ನಂತರ ಕಾಲ್ನಡಿಗೆಯಲ್ಲಿ ಅರಮನೆಯತ್ತ ಸಾಗುವ ಗಜಪಡೆಗೆ ಜಿಲ್ಲಾಡಳಿತದಿಂದ ಅರಮನೆ ಜಯಮಾರ್ತಾಂಡ ದ್ವಾರದಲ್ಲಿ ವಿಶೇಷ ಪೂಜೆ ಸಲ್ಲಿಸಿ ಸ್ವಾಗತಿಸಲಾಗುತ್ತದೆ. ಅಭಿಮನ್ಯು ನೇತೃತ್ವದ ಈ ಮೊದಲ ತಂಡದ ಆನೆಗಳಿಗಾಗಿ ಅರಮನೆ ಆವರಣದಲ್ಲಿ ಶೆಡ್‌ಗಳನ್ನು ನಿರ್ಮಿಸಲಾಗಿದ್ದು, ಇಲ್ಲಿ ವಾಸ್ತವ್ಯ ಹೂಡಲಿರುವ ಗಜಪಡೆಯನ್ನು ಆ.24ರಿಂದ ತಾಲೀಮಿಗೆ ಅಣಿಗೊಳಿಸಲಾಗುತ್ತದೆ. ಎರಡನೇ ತಂಡದಲ್ಲಿ ಆಗಮಿಸಲಿರುವ ಐದು ಆನೆಗಳೂ ಒಳಗೊಂಡಂತೆ ಒಟ್ಟು 14 ಆನೆಗಳು ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲಿವೆ. ಈ ಎಲ್ಲವೂ ಜಂಬೂಸವಾರಿ ಮಾರ್ಗವಾದ ಸಯ್ಯಾಜಿರಾವ್ ರಸ್ತೆಯಲ್ಲಿ ನಿತ್ಯ ಸಾಗುವ ಮೂಲಕ ತಾಲೀಮು ನಡೆಸಲಿವೆ. ಇದಕ್ಕೆ ಅಗತ್ಯವಿರುವ ಎಲ್ಲಾ ತಯಾರಿಯನ್ನು ಅರಣ್ಯ ಇಲಾಖೆ ಹಾಗೂ ಜಿಲ್ಲಾಡಳಿತ ಜಂಟಿಯಾಗಿ ಸಜ್ಜುಗೊಳಿಸಿಕೊಳ್ಳುತ್ತಿದೆ.

ಸುಸೂತ್ರವಾಗಿ ಲಾರಿಯಿಂದ ಇಳಿದವು: ದೊಡ್ಡ ಕಿವಿಗಳು, ಉದ್ದನೆಯ ಸೊಂಡಿಲು ಒಳಗೊಂಡಂತೆ ಬೃಹದಾಕಾರದ ಆನೆಗಳನ್ನು ಲಾರಿಗಳಲ್ಲಿ ಕರೆತರುವುದು ಸುಲಭದ ಕೆಲಸವಲ್ಲ. ಇದಕ್ಕೆ ಸಾಕಷ್ಟು ಎಚ್ಚರಿಕೆ ವಹಿಸುವುದು ಅಗತ್ಯವಿದ್ದು, ಅಂತೆಯೇ ಎಲ್ಲಾ ಸುರಕ್ಷಿತ ಕ್ರಮಗಳೊಂದಿಗೆ ದಸರಾ ಗಜಪಡೆಯ ಮೊದಲ ತಂಡವನ್ನು ಮೈಸೂರಿಗೆ ಕರೆತರಲಾಗಿದೆ. ಅವುಗಳನ್ನು ಅರಣ್ಯ ಭವನದ ಆವರಣದಲ್ಲಿ ಲಾರಿಯಿಂದ ಅತ್ಯಂತ ಜಾಗರೂಕತೆಯಿಂದ ಕೆಳಗಿಳಿಸಲಾಯಿತು.

ಮೊದಲ ತಂಡದಲ್ಲಿ ಆಗಮಿಸಿದ ಗಂಡಾನೆಗಳಾದ ಅಭಿಮನ್ಯು, ಧನಂಜಯ, ಗೋಪಿ, ಭೀಮ, ಕಂಜನ್, ರೋಹಿತ್, ಏಕಲವ್ಯ, ಹೆಣ್ಣಾನೆಗಳಾದ ವರಲಕ್ಷ್ಮೀ, ಲಕ್ಷ್ಮೀಯನ್ನು ಸುಸೂತ್ರವಾಗಿ ಲಾರಿಗಳಿಂದ ಕೆಳಕ್ಕೆ ಇಳಿಸುವಲ್ಲಿ ಅರಣ್ಯ ಇಲಾಖೆ ಯಶಸ್ವಿಯಾಯಿತು. ಈ ಪೈಕಿ ಗೋಪಿ ಆನೆ ಮಾತ್ರ ತನ್ನ ಮುಂದಿನ ಕಾಲುಗಳನ್ನು ನೆಲದ ಮೇಲಿಟ್ಟು ಇಳಿಯಲು ಸ್ವಲ್ಪ ತಡವರಿಸಿತು. ಕಾರಣ ಗೋಪಿ ಬಂದಿದ್ದ ಲಾರಿಯ ಹಿಂಭಾಗವು ಅರಣ್ಯ ಭವನದಲ್ಲಿನ ಉದ್ಯಾನವನದ ಮೆಟ್ಟಿಲಿಗೆ ತುಸು ಎತ್ತರವಾದ ಕಾರಣ ಗೋಪಿಯ ಕಾಲುಗಳನ್ನು ನೆಲಕ್ಕೆ ಇಡಲು ಮೊದಲಿಗೆ ಹಿಂಜರಿಯಿತು. ಬಳಿಕ ಮಾವುತ ಹಾಗೂ ಕಾವಾಡಿಗಳ ಉತ್ತೇಜನದಿಂದ ಸುರಕ್ಷಿತವಾಗಿ ತನ್ನ ಮುಂಭಾಗದ ಕಾಲುಗಳನ್ನು ನೆಲಕ್ಕೂರಿ ಸುಸೂತ್ರವಾಗಿ ಇಳಿಯಿತು. ಮೈಸೂರು ಉಪ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ ವಿಭಾಗ) ಡಾ.ಐ.ಬಿ.ಪ್ರಭುಗೌಡ ಸೇರಿದಂತೆ ಅಧಿಕಾರಿಗಳು ಸ್ಥಳದಲ್ಲಿದ್ದು, ಆನೆಗಳನ್ನು ಸುರಕ್ಷಿತವಾಗಿ ಬರಮಾಡಿಕೊಂಡರು.

ಮೊದಲ ಬಾರಿಗೆ ಮೈಸೂರಿಗೆ ಬಂದ ಏಕಲವ್ಯ...

ಬರೋಬ್ಬರಿ 8 ಬಾರಿ ಅಂಬಾರಿ ಹೊತ್ತಿದ್ದ ಅರ್ಜುನ ಆನೆಯ ಸ್ಥಾನವನ್ನು ತುಂಬಲಿದೆ ಎಂದು ಗುರುತಿಸಿರುವ ಏಕಲವ್ಯ ಎಂಬ ಗಂಡಾನೆ ಇದೇ ಮೊದಲ ಬಾರಿಗೆ ಮೈಸೂರಿಗೆ ಆಗಮಿಸಿದ್ದು, ಇಲ್ಲಿನ ಜನಮನ, ವಾಹನ ದಟ್ಟಣೆ ನಡುವೆಯೂ ಯಾವುದೇ ರೀತಿಯ ಗಾಬರಿಗೆ ಒಳಗಾಗದೇ ಉತ್ಸಾಹದಿಂದ ವರ್ತಿಸುವ ಮೂಲಕ ಜನತೆಯ ಗಮನ ಸೆಳೆಯಿತು.

ಮೊಟ್ಟ ಮೊದಲಿಗೆ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲಿರುವ ಈ ಆನೆ ಸೌಮ್ಯ ಸ್ವಭಾವ ಹೊಂದಿದೆ ಎಂದು ಗುರುತಿಸಲಾಗಿದೆ. 2022ರಲ್ಲಿ ಮೂಡಿಗೆರೆ ಅರಣ್ಯ ಪ್ರದೇಶದಲ್ಲಿ ಇದನ್ನು ಸೆರೆಹಿಡಿಯಲಾಗಿದೆ. ವಾಹನ ಹಾಗೂ ಪಟಾಕಿ ಶಬ್ದಗಳಿಗೆ ಇದು ಅಂಜುವುದಿಲ್ಲ ಎನ್ನುವುದು ಇದರ ವಿಶೇಷ ಗುಣ. 39 ವರ್ಷ ವಯೋಮಾನದ ಈ ಆನೆಯು 2.88 ಮೀ. ಎತ್ತರ ಹೊಂದಿದ್ದು, 4000ದಿಂದ 4200 ಕೆಜಿವರೆಗೆ ತೂಕ ಹೊಂದಿದೆ. ಮತ್ತಿಗೋಡು ಆನೆ ಶಿಬಿರದಲ್ಲಿ ಇದು ಆಶ್ರಯ ಪಡೆದಿದೆ. ಮಾವುತ ಸೃಜನ್ ಹಾಗೂ ಕಾವಾಡಿ ಇದಾಯತ್ ಇದರ ಯೋಗಕ್ಷೇಮ ನೋಡಿಕೊಂಡು ಲಾಲನೆ ಪಾಲನೆ ಮಾಡುವ ಜವಾಬ್ದಾರಿ ಹೊತ್ತಿದ್ದಾರೆ.

ಆಂಧ್ರಪ್ರದೇಶದ ಫಾರ್ಮಾ ಕಂಪನಿಯಲ್ಲಿ ಸ್ಫೋಟ: ಮೂವರು ಸಾವು, 25 ಮಂದಿಗೆ ಗಾಯ

ಅನಕಪಲ್ಲಿ, ಆ.21– ಆಂಧ್ರಪ್ರದೇಶದ ಅನಕಪಲ್ಲಿ ಜಿಲ್ಲೆಯ ಫಾರ್ಮಾ ಕಂಪನಿಯೊಂದರಲ್ಲಿ ರಿಯಾಕ್ಟರ್ ಸ್ಫೋಟಗೊಂಡ ಪರಿಣಾಮ ಕನಿಷ್ಠ ಮೂವರು ಸಾವನ್ನಪ್ಪಿದ್ದಾರೆ ಮತ್ತು 25 ಮಂದಿ ಗಾಯಗೊಂಡಿದ್ದಾರೆ ಎಂದು ಮಾಧ್ಯಮ ವರದಿಗಳು ತಿಳಿಸಿವೆ. ಅಚ್ಯುತಪುರಂ ವಿಶೇಷ ಆರ್ಥಿಕ ವಲಯದಲ್ಲಿರುವ ಎಸ್ಸೆಂಟಿಯಾ ಕಂಪನಿಯಲ್ಲಿ ಈ ಸ್ಫೋಟ ಸಂಭವಿಸಿದೆ. ಮಧ್ಯಾಹ್ನ ಊಟದ ಸಮಯದಲ್ಲಿ ಸ್ಫೋಟ ಸಂಭವಿಸಿದ್ದು, ಈ ವೇಳೆ ಹೆಚ್ಚಿನ ಕಾರ್ಮಿಕರು ಹೊರಗಿದ್ದರು. ಹೀಗಾಗಿ ದೊಡ್ಡ ಅನಾಹುತವೊಂದು ತಪ್ಪಿದಂತಾಗಿದೆ ಎಂದು ವರದಿಯಾಗಿದೆ. ಗಾಯಾಳುಗಳನ್ನು ಎನ್‌ಟಿಆರ್ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಜಿಲ್ಲಾಧಿಕಾರಿ, ಪೊಲೀಸ್ ವರಿಷ್ಠಾಧಿಕಾರಿ ಸೇರಿದಂತೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸುತ್ತಿದ್ದಾರೆ.

ಸುಂದರಿಯ ಸವಿನುಡಿಗೆ ಮಾರುಹೋಗಿ ಲಕ್ಷಾಂತರ ರೂ. ಕಳೆದುಕೊಂಡ 60ರ ಹರೆಯದ ಅರ್ಚಕ!

ಪಾಂಡವಪುರ, ಆ.21–ಫೇಸ್‌ಬುಕ್‌ನಲ್ಲಿ ಪರಿಚಯವಾದ 20ರ ಹರೆಯದ ಯುವತಿಯ ರೂಪಕ್ಕೆ ಮರುಳಾಗಿ 60 ವರ್ಷದ ಅರ್ಚಕ ಸುಮಾರು 1.40 ಲಕ್ಷ ರೂ. ಕಳೆದುಕೊಂಡಿರುವ ಬಗ್ಗೆ ಮಂಡ್ಯ ಜಿಲ್ಲಾ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಅರ್ಚಕನ ಜೊತೆ ಚಾಟ್ ಮಾಡಿದ ಯುವತಿ ತನ್ನ ಭಾವಚಿತ್ರ ಮಾತ್ರವಲ್ಲದೆ, ಸಿನಿಮಾ ಹಾಡುಗಳಿಗೆ ವಿವಿಧ ಭಂಗಿಗಳಲ್ಲಿ ನೃತ್ಯ ಮಾಡಿರುವ ವೀಡಿಯೋ ಹಂಚಿಕೊಂಡಿದ್ದಾಳೆ. ಈಕೆಗೆ ಪಾಂಡವಪುರ ತಾಲೂಕು ಪಟ್ಟಸೋಮನಹಳ್ಳಿ ಅರ್ಚಕ ವಿಜಯಕುಮಾರ್ ಹಂತ ಹಂತವಾಗಿ ಸುಮಾರು 1.40 ಲಕ್ಷ ರೂ.ಗಳನ್ನು ಆನ್‌ಲೈನ್ ಮೂಲಕ ವರ್ಗಾವಣೆ ಮಾಡಿ ಮೋಸ ಹೋಗಿದ್ದಾನೆ.

ವಿವರ: ಅರ್ಚಕ ವಿಜಯಕುಮಾರ್ ಫೇಸ್‌ಬುಕ್ ಮತ್ತು ಇನ್‌ಸ್ಟಾಗ್ರಾಂ ಗೀಳು ಅಂಟಿಸಿಕೊಂಡಿದ್ದರು. ಇವರ ಫೇಸ್‌ಬುಕ್ ಖಾತೆಗೆ ಸಿರಿ ರೇಷ್ಮಾ ಎಂಬ ಖಾತೆಯಿಂದ ರಿಕ್ವೆಸ್ಟ್ ಬಂದಿದೆ. ಫೇಸ್‌ಬುಕ್‌ನ ಡಿಪಿಯಲ್ಲಿ ಸುಂದರ ಯುವತಿಯ ಭಾವಚಿತ್ರವಿದ್ದುದರಿಂದ ವಿಜಯಕುಮಾರ್ ರಿಕ್ವೆಸ್ಟ್ ಅನ್ನು ಅಕ್ಸೆಪ್ಟ್ ಮಾಡಿ ಮೆಸೆಂಜರ್ ಮೂಲಕ ಚಾಟಿಂಗ್ ಆರಂಭಿಸಿದ್ದಾರೆ. ದಿನ ಕಳೆದಂತೆ ಇಬ್ಬರ ಮಧ್ಯೆಯೂ ಆತ್ಮೀಯತೆ ಬೆಳೆದಿದೆ. ನಂತರ ವಾಟ್ಸಪ್ ನಂಬರ್‌ಗಳನ್ನು ವಿನಿಮಯ ಮಾಡಿಕೊಂಡಿದ್ದಾರೆ. ವಿಜಯಕುಮಾರ್ ಯುವತಿಯ ಕಷ್ಟ–ಸುಖಗಳನ್ನು ಆಲಿಸಲು ಆರಂಭಿಸಿದ್ದು, ಆಕೆ ತಾನು ಅನಾಥೆ, ಯಾರೂ ಇಲ್ಲ ಎಂದು ಹೇಳಿಕೊಂಡು ಆಗಿಂದಾಗ್ಗೆ ವಿಜಯಕುಮಾರ್‌ರಿಂದ ಹಣ ಕೇಳಿದ್ದಾಳೆ. ಆಕೆ ಕೇಳಿದಾಗಲೆಲ್ಲಾ ವಿಜಯಕುಮಾರ್ ಫೋನ್ ಪೇ ಹಾಗೂ ಗೂಗಲ್ ಪೇ ಮೂಲಕ ಹಣ ಕಳುಹಿಸಿದ್ದಾನೆ. ಹೀಗೆ ಅವರು ಕಳೆದುಕೊಂಡಿದ್ದು 1.40 ಲಕ್ಷ.

ತಾನು ಹಣ ಸಹಾಯ ಮಾಡುತ್ತಿದ್ದ ಸುಂದರಿಯನ್ನು ಭೇಟಿ ಮಾಡಲು ನಿರ್ಧರಿಸಿದ ವಿಜಯಕುಮಾರ್, ಆಕೆಯ ಭೇಟಿ ಪ್ರಸ್ತಾವನೆ ಮುಂದಿಟ್ಟಾಗ ವಿವಿಧ ಕಾರಣಗಳನ್ನು ಹೇಳಿ ಆಕೆ ನಿರಾಕರಿಸುತ್ತಲೇ ಬಂದಳು. ಕೆಲವೊಮ್ಮೆ ಸಿಗುವುದಾಗಿ ಹೇಳಿ ಸ್ಥಳಕ್ಕೆ ಹೋದಾಗ ಆಕೆ ಸಿಗುತ್ತಲೇ ಇರಲಿಲ್ಲ. ನಂತರ ವಿಜಯಕುಮಾರ್ ಅವರ ಮೆಸೇಜ್‌ಗಳಿಗೂ ಪ್ರತಿಕ್ರಿಯೆ ಇರಲಿಲ್ಲ. ಅದೇ ವೇಳೆ ಇನ್‌ಸ್ಟಾಗ್ರಾಂನಲ್ಲಿ ಸಿರಿ ಎಂಬ ಹೆಸರಿನಲ್ಲಿದ್ದ ಖಾತೆಯಲ್ಲಿ ಅದೇ ಯುವತಿಯ ಫೋಟೋ ಮತ್ತು ರೀಲ್ಸ್ ವೀಡಿಯೋ ಇರುವುದನ್ನು ಕಂಡ ವಿಜಯಕುಮಾರ್, ಆಕೆಗೆ ಮೆಸೇಜ್ ಮಾಡಿದಾಗಲೇ ತಾನು ಮೋಸ ಹೋಗಿರುವುದು ಮನವರಿಕೆ ಆಗಿದೆ. ವಾಸ್ತವವಾಗಿ ತೆಲಂಗಾಣದ ನಿವಾಸಿ ಸಿರಿ ಅವರಿಗೆ ಇನ್‌ಸ್ಟಾಗ್ರಾಂನಲ್ಲಿ 7 ಲಕ್ಷಕ್ಕೂ ಅಧಿಕ ಫಾಲೋವರ್ಸ್ ಇದ್ದಾರೆ. ಇವರ ಫೋಟೋ ಮತ್ತು ರೀಲ್ಸ್ ಅನ್ನು ಡೌನ್‌ಲೋಡ್ ಮಾಡಿಕೊಂಡಿದ್ದ ವಂಚಕರು, ಅದನ್ನು ಬಳಸಿಕೊಂಡು ಪಾಂಡವಪುರ ಅರ್ಚಕರಿಗೆ ಮೋಸ ಮಾಡಿದ್ದಾರೆ. ಇದೀಗ ಅರ್ಚಕ ಸೈಬರ್ ಕ್ರೈಂ ಠಾಣೆಗೆ ದೂರು ಸಲ್ಲಿಸಿದ್ದಾರೆ. ಈ ಅರ್ಚಕನಿಗೆ ಹಣವೂ ಹೋಯಿತು, ಹುಡುಗಿಯೂ ಸಿಗಲಿಲ್ಲ ಎಂಬ ಪರಿಸ್ಥಿತಿ ಉಂಟಾಗಿದೆ.

ಅಗತ್ಯ ಬಿದ್ದರೆ ಕುಮಾರಸ್ವಾಮಿಯನ್ನ ಮುಲಾಜಿಲ್ಲದೆ ಬಂಧಿಸುತ್ತೇವೆ...?

- ಮುಖ್ಯಮಂತ್ರಿ ಸಿದ್ದರಾಮಯ್ಯ ಖಡಕ್ ನುಡಿ
- ಅಕ್ರಮ ಗಣಿ ಪ್ರಕರಣದಲ್ಲಿ ಕುಮಾರಸ್ವಾಮಿ ಹೆದರಿದ್ದಾರೆ

ಬೆಂಗಳೂರು, ಆ.21(ಕೆಎಂಶಿ)–ಜಂತಕಲ್ ಗಣಿ ಹಗರಣಕ್ಕೆ ಸಂಬಂಧಿಸಿದಂತೆ



ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರನ್ನು ಬಂಧಿಸುವ ಅಗತ್ಯಬಿದ್ದರೆ ಮುಲಾಜಿಲ್ಲದೆ, ಬಂಧನಕ್ಕೊಳಪಡಿಸುತ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕುಮಾರಸ್ವಾಮಿಯವರನ್ನು ಬಂಧಿಸುವ ಪರಿಸ್ಥಿತಿ ಎದುರಾಗಿಲ್ಲ. ಅಗತ್ಯ ಬಿದ್ದರೆ, ಅದರಲ್ಲಿ ಮುಲಾಜು ನೋಡುವುದಿಲ್ಲ ಎಂದರು. ಅಕ್ರಮ ಗಣಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕುಮಾರಸ್ವಾಮಿಯವರು ಈಗಾಗಲೇ ಹೆದರಿದ್ದಾರೆ. ರಾಜ್ಯಪಾಲರು ತನಿಖೆಗೆ ಅನುಮತಿ ನೀಡಬಹುದು ಎಂಬ ಭಯ ಅವರನ್ನು ಕಾಡುತ್ತಿದೆ. ಲೋಕಾಯುಕ್ತ ಮತ್ತು ಎಸ್‌ಐಟಿ ತನಿಖಾ ವರದಿ ನೀಡಿ, ರಾಜ್ಯಪಾಲರನ್ನು ಅನುಮತಿ ಕೋರಿದ್ದರೂ, ಇದುವರೆಗೂ ಅವರು ಅನುಮತಿ ನೀಡಿಲ್ಲ. ನನ್ನ ವಿಚಾರದಲ್ಲಿ ತಕ್ಷಣ ಕ್ರಮಕೈಗೊಳ್ಳುತ್ತಾರೆ. ಕುಮಾರಸ್ವಾಮಿ ವಿಚಾರದಲ್ಲಿ ಮೀನಾಮೇಷ ಎಣಿಸುತ್ತಿದ್ದಾರೆ. ಇದನ್ನು ತಾರತಮ್ಯ ಎನ್ನದೇ ಏನನ್ನಬೇಕು ಎಂದು ಪ್ರಶ್ನಿಸಿದರು. ಮುಡಾ ಸೇರಿದಂತೆ ಕೆಲವು ವಿಚಾರಗಳ ಬಗ್ಗೆ ಕುಮಾರಸ್ವಾಮಿ ಇಂದು ನನ್ನ ಬಗ್ಗೆ ಮಾತನಾಡಿರುವ ಬಗ್ಗೆ ಮಾಹಿತಿ ಇಲ್ಲ. ಆದರೆ ಅವರು ಬಾಯಿಗೆ ಬಂದಂತೆ ಮಾತನಾಡುತ್ತಾರೆ. ಅವರ ಎಲ್ಲಾ ಆರೋಪಗಳು ಹಿಟ್ ಅಂಡ್ ರನ್‌ನಂತೆ ಇರುತ್ತವೆ.

ಜೇಬಿನಲ್ಲಿ ಪೆನ್‌ಡ್ರೈವ್ ಇದೆ ಎನ್ನುತ್ತಾರೆ. ಲಕೋಟೆಯಲ್ಲಿ ದಾಖಲೆ ಇದೆ ಎಂದು ಹೆದರಿಸುತ್ತಾರೆ. ಇಂತಹದ್ದಕ್ಕೆಲ್ಲ ನಾನು ಬೆಲೆ ಕೊಡುವವನಲ್ಲ ಎಂದರು.

ಸರ್ಕಾರ ಅಭಿವೃದ್ಧಿ ಕೆಲಸದಲ್ಲಿ ರಾಜಕೀಯ ಮಾಡದೇ, ರಾಜ್ಯದ ಜನರ ಅಭಿವೃದ್ಧಿ ಪರವಾಗಿಯೇ ನಮ್ಮ ನಿರ್ಣಯಗಳಿರುತ್ತವೆ ಎಂದರು. ರೈತರ ಬೆಳೆಗಳಿಗೆ ಬೆಂಬಲ ಬೆಲೆ ನೀಡುವ ಬಗ್ಗೆ ಮಾತನಾಡಿ, ಹೆಸರುಕಾಳು ಬೆಳೆಗೆ ಬೆಂಬಲ ಬೆಲೆ ನೀಡುವ ಬಗ್ಗೆ ಶೀಘ್ರವಾಗಿ ಕ್ರಮ ಕೈಗೊಳ್ಳಲು ಕೇಂದ್ರ ಸರ್ಕಾರಕ್ಕೆ ಈಗಾಗಲೇ ಪತ್ರ ಬರೆಯಲಾಗಿದೆ ಎಂದರು. ಇದೇ ಸಂದರ್ಭದಲ್ಲಿ ಮಾತನಾಡಿದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಬಿಜೆಪಿಯಲ್ಲಿ ಆಂತರಿಕ ಸಮಸ್ಯೆಯಿದೆ. ಅದನ್ನು ಸರಿ ಮಾಡಿಕೊಳ್ಳಲು ಈಗ ಮತ್ತೊಮ್ಮೆ ಪ್ರತಿಭಟನೆ ಮಾಡುತ್ತಿದ್ದಾರೆ. ಅವರ ಆರೋಪಗಳಲ್ಲಿ ಯಾವುದೇ ಹುರುಳಿಲ್ಲ ಎಂದು ವ್ಯಂಗ್ಯವಾಡಿದರು. ಮುಡಾ ಅಕ್ರಮ ಎಂದು ಮೈಸೂರು ಚಲೋ ಮಾಡಿದರು. ಅದಕ್ಕೆ ಈಗಾಗಲೇ ನಾವು ಉತ್ತರ ಕೊಟ್ಟಿದ್ದೇವೆ. ಈಗ ಪ್ರತಿಭಟನೆ ಮಾಡುವವರನ್ನು ಬೇಡ ಎನ್ನಲು ಆಗುತ್ತದೆಯೇ, ಬೇಡ ಎಂದು ಹೇಳಿದವರು ಯಾರು ಎಂದು ಕುಟುಕಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಡಬಲ್ ಐಸ್ಮಾರ್ಟ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕೃಷ್ಣಂ ಪ್ರಣಯ ಸಖಿ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ವೇದ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕೃಷ್ಣಂ ಪ್ರಣಯ ಸಖಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಭೀಮಾ (ಕ)	4 ಪ್ರದರ್ಶನಗಳು
ರಾಜಕಮಲ್	
ತಂಗಾಲಾನ್ (ತ)	4 ಪ್ರದರ್ಶನಗಳು
ಸಂಗಂ	
ಭೀಮಾ (ಕ)	4 ಪ್ರದರ್ಶನಗಳು
ಲಿಡೋ	
ಗೌರಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸ್ತ್ರೀ–2 (ಹಿ)	4 ಪ್ರದರ್ಶನಗಳು
ಪ್ರಭಾ	
ಡಬಲ್ ಐಸ್ಮಾರ್ಟ್ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಭೀಮಾ (ಕ): ಬೆ.10.20ಕ್ಕೆ, ರಾ.10.20ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಮ.1.05ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ.
ಸ್ಕ್ರೀನ್ 2	ಗೌರಿ (ಕ): ಬೆ.10.50ಕ್ಕೆ, ಸಂ.4.30ಕ್ಕೆ, ವೇದಾ (ಹಿಂ): ಮ.1.25ಕ್ಕೆ, ಮಿ. ಬಚ್ಚನ್ (ತೆ): ರಾ.7.10ಕ್ಕೆ, ಡಿಮೊಂಟ್ ಕಾಲೋನಿ 2 (ತ): ರಾ.10.10ಕ್ಕೆ.
ಸ್ಕ್ರೀನ್ 3	ಇಟ್ ಎಂಡ್ಸ್ ವಿಥ್ ಅಸ್ (ಇಂ): ಬೆ.10.50ಕ್ಕೆ, ತಂಗಲಾನ್ (ತ): ಮ.1.25ಕ್ಕೆ, ಡಬಲ್ ಇಸ್ಮಾರ್ಟ್ (ತೆ): ಸಂ.4.25ಕ್ಕೆ, ಖೇಲ್ ಖೇಲ್ ಮೇನ್ (ಹಿ): ರಾ.7.30ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 4	ಸ್ತ್ರೀ 2 (ಹಿಂ): ಬೆ.10.15ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಭೀಮಾ (ಕ): ಮ.1.15ಕ್ಕೆ, ರಘು ತಾತ (ತ): ಸಂ.4.20ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಸ್ತ್ರೀ 2 (ಹಿಂ): ಬೆ.8.05ಕ್ಕೆ, ಭೀಮಾ (ಕ): ಬೆ.10.30ಕ್ಕೆ, ಡಬಲ್ ಇಸ್ಮಾರ್ಟ್ (ತೆ): ಮ.1.25ಕ್ಕೆ, ಗೌರಿ (ಕ): ಸಂ.4.25ಕ್ಕೆ, ನುನಕ್ಕುಝಿ (ಮ): ರಾ.7ಕ್ಕೆ, ರಘು ತಾತ (ತ): ರಾ.9.30ಕ್ಕೆ.
ಸ್ಕ್ರೀನ್ 2	ಸ್ತ್ರೀ 2 (ಹಿಂ): ಬೆ.10ಕ್ಕೆ, ಭೀಮಾ (ಕ): ಮ.12.50ಕ್ಕೆ, ಮ.3.45ಕ್ಕೆ, ಸಂ.6.50ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ರಾ.9.45ಕ್ಕೆ.
ಸ್ಕ್ರೀನ್ 3	ಕೃಷ್ಣಂ ಪ್ರಣಯ ಸಖಿ (ಕ): ಬೆ.10ಕ್ಕೆ, ಮ.1ಕ್ಕೆ, ವೇದ (ಹಿಂ): ಸಂ.4.05ಕ್ಕೆ ರಾ.9.45ಕ್ಕೆ, ಸ್ತ್ರೀ 2 (ಹಿಂ): ಸಂ.6.55ಕ್ಕೆ.
ಸ್ಕ್ರೀನ್ 4	ತಂಗಲಾನ್ (ತ): ಬೆ.10.05ಕ್ಕೆ, ಸಂ.6.45ಕ್ಕೆ, ಸ್ತ್ರೀ 2 (ಹಿಂ): ಮ.1ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಮ.3.50ಕ್ಕೆ, ಡಬಲ್ ಇಸ್ಮಾರ್ಟ್ (ತೆ): ರಾ.9.40ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,

2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ಬೇಸಿಗೆ ರೇಸ್

8ನೇ ದಿನ, ಗುರುವಾರ, 22–08–2024

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ

I. ಶುಂಠಿಕೊಪ್ಪ ಪ್ಲೇಟ್–1200 ಮೀ. ರೇಟೆಡ್ 00 ರಿಂದ 25. ಮಧ್ಯಾಹ್ನ 2.00ಕ್ಕೆ
1. ಪ್ಲೈಯಿಂಗ್ ಫಾಲ್ಕನ್ 2. ಟವರ್ ಕ್ವೆಸ್ಟ್ 3. ಕಂಟ್ರಿಸ್ ಲೈಟ್

II. ಕೆಮ್ಮಣ್ಣುಗುಂಡಿ ಪ್ಲೇಟ್ ಡಿ.II–1400 ಮೀ. ರೇಟೆಡ್ 20 ರಿಂದ 45. ಮ.2.30ಕ್ಕೆ
1. ಸರ್ವೋತ್ತಮ 2. ನ್ಯಾಚುರಲ್ ಸ್ಪೀಡ್ 3. ಡಿ ಲಾರ್ಡ್

III. ಆನೆಕಲ್ಲು ಪ್ಲೇಟ್ –1200 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1. ಡಿ. ರೋಮನ್ ರೀಜನ್ಸ್ 2. ಸಿಲ್ವರ್ ಸ್ಪ್ರಿಂಗ್ 3. ರೈಸಿಂಗ್ ಸನ್

IV. ಕೆಮ್ಮಣ್ಣುಗುಂಡಿ ಪ್ಲೇಟ್ ಡಿ.I–1400 ಮೀ. ರೇಟೆಡ್ 20 ರಿಂದ 45. ಮ.3.30ಕ್ಕೆ
1. ಸೀ ಗಾಡ್ 2. ಡ ಬೀಟ್ 3. ಕಾನ್ಫಿಡೆಂಟ್ ಗೇಮ್

V. ಮೈಸೂರು ರೇಸ್ ಕ್ಲಬ್ ಮಿಲಿಯನ್–1600 ಮೀ. 3 ವರ್ಷ (ಟರ್ಮ್ಸ್). ಸಂ.4.00ಕ್ಕೆ
1. ರಾಯಲ್ ಡಿಫೆಂಡರ್ 2. ಶಿ ರೌಕ್ 3. ಅಭೂಷಣ್

VI. ಮೂಡಿಗೆರೆ ಪ್ಲೇಟ್ –1200 ಮೀ. ರೇಟೆಡ್ 60 ಮತ್ತು ಮೇಲ್ವರ್ಗ. ಸಂಜೆ4.30ಕ್ಕೆ
1. ಕಾಂಟ್ರಿಬ್ಯೂಟರ್ 2. ಗೋಲ್ಡ್ ಕೈಟ್ 3. ಟಾವ್ ಕ್ರೂಸಿಯರ್

VII. ಬ್ಯೂಗಲ್ ರಾಕ್ ಪ್ಲೇಟ್ –1600 ಮೀ. ರೇಟೆಡ್ 40 ರಿಂದ 65. ಸಂ.5.00ಕ್ಕೆ
1. ಎಕ್ಸ್‌ಯು ಬರೆನ್ಸ್ 2. ಸಾಕ್ರೇಟ್ಸ್ 3. ಅತುಲ್ಯ

ದಿನದ ಅತ್ಯುತ್ತಮ	ರಾಯಲ್ ಡಿಪೆಂಡರ್
ಡಬ್ಬಲ್	ಸೀ ಗಾಡ್, ಎಕ್ಸ್‌ಯು ಬರೆನ್ಸ್
ಜಾಕ್‌ಪಾಟ್	3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್	4, 5, 6 ಮತ್ತು 7
I ಟ್ರೆಬಲ್	2, 3 ಮತ್ತು 4
II ಟ್ರೆಬಲ್	5, 6 ಮತ್ತು 7
ಎಕ್ಸ್‌ಆಕ್ಟ್	1 ರಿಂದ 7

ಟಿಪ್‌ಸ್ಟರ್ ಪಿಜೆಸಿ

ವಿಶ್ವ ಸೊಳ್ಳೆ ದಿನ: ಪ್ರತಿಜ್ಞಾ ವಿಧಿ ಸ್ವೀಕಾರ

ಮೈಸೂರು,ಆ.21– 'ವಿಶ್ವ ಸೊಳ್ಳೆ ದಿನ' ಆಚರಣೆ ಪ್ರಯುಕ್ತ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಚೇರಿಯ ಆವರಣದಲ್ಲಿರುವ ವೈದ್ಯರ ಭವನದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ|| ಕುಮಾರಸ್ವಾಮಿ.ಪಿ.ಸಿ ಅಧ್ಯಕ್ಷತೆಯಲ್ಲಿ ಆ.20 ರಂದು ಪ್ರತಿಜ್ಞಾ ವಿಧಿ ಸ್ವೀಕರಿಸುವ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ಜಿಲ್ಲಾ ರೋಗ ವಾಹಕ ಆಶ್ರಿತ ರೋಗಗಳ ನಿಯಂತ್ರಣ ಅಧಿಕಾರಿಗಳಾದ ಡಾ|| ಸುವರ್ಣ, ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳಾದ ಡಾ|| ಜಯಂತ್ ಭಾಗವಹಿಸಿದ್ದರು.

ಮಕ್ಕಳು ಸ್ಟಾರ್ಟಪ್ ಮೂಲಕ ಕಂಪನಿ ತೆರೆಯಲು ಪೋಷಕರು ಪ್ರೋತ್ಸಾಹಿಸುತ್ತಿದ್ದಾರೆ

ಅಕ್ಷಯ ಡಿಸೈನ್ ಸಲ್ಯೂಷನ್ ಸಿಇಓ ಡಾ.ಮಹೇಶ್‌ರಾವ್ ಅಭಿಮತ

ಮೈಸೂರು, ಆ.21(ಎಸ್‌ಪಿಎನ್)– ಈ ಹಿಂದೆ ಪೋಷಕರು ತಮ್ಮ ಮಕ್ಕಳಿಗೆ ಓದು ಮುಗಿದ ತಕ್ಷಣ ಯಾವುದಾದರು ಖಾಸಗಿ ಕಂಪನಿ ಇಲ್ಲವೇ ಸರ್ಕಾರಿ ಉದ್ಯೋಗಕ್ಕೆ ಸೇರಬೇಕು ಎನ್ನುವ ಮನಸ್ಥಿತಿ ಇತ್ತು. ಪ್ರಸ್ತುತ ಆ ಮನಸ್ಥಿತಿ ಬದಲಾಗಿದ್ದು, ಸ್ಟಾರ್ಟಪ್‌ಗಳ ಮೂಲಕ ಕಂಪನಿ ತೆರೆಯಲು ಪ್ರೋತ್ಸಾಹಿಸುತ್ತಿದ್ದಾರೆ ಎಂದು ಅಕ್ಷಯ ಡಿಸೈನ್ ಸಲ್ಯೂಷನ್ಸ್ ಸಿಇಓ ಡಾ.ಮಹೇಶ್ ರಾವ್ ಅಭಿಪ್ರಾಯಪಟ್ಟರು.

ಮೈಸೂರು ಜೆಎಲ್‌ಬಿ ರಸ್ತೆಯ ಎಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ (ಇಂಡಿಯಾ) ಮೈಸೂರು ಘಟಕದ ವತಿಯಿಂದ ಆಯೋಜಿಸಿದ್ದ ವಿಶ್ವ ವಾಣಿಜ್ಯೋದ್ಯಮ ದಿನಾಚರಣೆ ಅಂಗವಾಗಿ 'ಉದ್ಯಮವನ್ನು ಪ್ರಾರಂಭಿಸುವಲ್ಲಿ ಅವಕಾಶಗಳು ಮತ್ತು ಸವಾಲುಗಳು' ವಿಷಯ ಕುರಿತು ಮಾತನಾಡಿದರು.

ಈ ಹಿಂದೆ ಭಾರತೀಯರಲ್ಲಿ ತಮ್ಮ ಮಕ್ಕಳು ಓದು ಮುಗಿದ ತಕ್ಷಣ ಯಾವುದಾದರೊಂದು ಕಂಪನಿಯಲ್ಲಿ ಕೆಲಸಕ್ಕೆ ಸೇರಲಿ ಇಲ್ಲವೇ ಸರ್ಕಾರಿ ಹುದ್ದೆಗೆ ಸೇರಿಕೊಳ್ಳಲಿ ಎನ್ನುವ ಮನೋಭಾವವಿತ್ತು. ಕಾಲ ಬದಲಾದಂತೆ ಸ್ಟಾರ್ಟಪ್‌ಗಳ ಮೂಲಕ ಕಂಪನಿಯನ್ನು ತೆರೆಯಲು ಪ್ರೋತ್ಸಾಹಿಸುವ ಮಟ್ಟಕ್ಕೆ ಭಾರತೀಯ ಪೋಷಕರ ಮನಸ್ಥಿತಿ ಬದಲಾಗಿರುವುದು ಒಳ್ಳೆಯ ಬೆಳವಣಿಗೆ ಎಂದರು.

ಈ ಮನಸ್ಥಿತಿ ಬದಲಾವಣೆಗೆ ನಮ್ಮ ದೇಶದಲ್ಲಾಗುತ್ತಿರುವ ವ್ಯವಹಾರಿಕ ಬದಲಾವಣೆಯೇ ಕಾರಣ ಎಂದ ಅವರು, ಯುವಕರು, ಕಾಲೇಜು ಶಿಕ್ಷಣ ಪಡೆಯುವಾಗಲೇ ಕಂಪನಿ ತೆರೆಯುವ ಬಗ್ಗೆ ವಿವಿಧ ಮೂಲಗಳಿಂದ ಆ ಕ್ಷೇತ್ರದ ಜ್ಞಾನ ಮತ್ತು ಅನುಭವ ಪಡೆದುಕೊಳ್ಳುತ್ತಿದ್ದಾರೆ. ಅಲ್ಲದೆ, ಆ ವ್ಯವಹಾರಕ್ಕೆ ಬೇಕಾದ ಹಣಕಾಸಿನ ಮೂಲಗಳು ಬ್ಯಾಂಕ್‌ಗಳ ಮೂಲಕ ಸುಲಭವಾಗಿ ದೊರೆಯುತ್ತಿವೆ. ಅದಕ್ಕಾಗಿ ಇಂದಿನ ಯುವಕರ ಮನಸ್ಥಿತಿ ಸ್ಟಾರ್ಟಪ್ ಮೂಲಕ ಉದ್ಯಮ ತೆರೆಯಲು ಮುಂದಾಗುತ್ತಿದ್ದು, ಇದಕ್ಕೆ ಪೋಷಕರು ಸಹಾ ಒಪ್ಪಿಗೆ ಸೂಚಿಸಿದ್ದಾರೆ ಎಂದರು.

ಭಾರತದಲ್ಲಿ ಹೊಸ ಉದ್ಯಮ ಸ್ಥಾಪಿಸಲು ಸಾಕಷ್ಟು ಅವಕಾಶಗಳನ್ನು ಮುಕ್ತವಾಗಿಸಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರ ಕೈಗಾರಿಕೆಗಳನ್ನು ಸ್ಥಾಪಿಸಲು ಕಾನೂನಿನಲ್ಲಿ ಹಲವು ಬದಲಾವಣೆ ತಂದಿವೆ. ಅಲ್ಲದೆ, ಉದ್ಯಮ ಸ್ಥಾಪನೆಗೆ ಬೇಕಾದ ಮಾನವ ಸಂಪನ್ಮೂಲ ದೊರೆಯುತ್ತಿದೆ. ಹಾಗಾಗಿ ವಿದ್ಯಾರ್ಥಿಗಳಲ್ಲಿ ಹೊಸ ಉದ್ಯಮ ಸ್ಥಾಪಿಸಲು ಸ್ವಲ್ಪ ಜ್ಞಾನ, ಅನುಭವವಿದ್ದರೂ ಉದ್ಯಮ ಸ್ಥಾಪನೆಗೆ ಮುಂದಾಗುತ್ತಿದೆ ಎಂದು ಅಭಿಪ್ರಾಯಪಟ್ಟರು.

ಈ ವೇಳೆ ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ (ಇಂಡಿಯಾ) ಮೈಸೂರು ಘಟಕದ ಅಧ್ಯಕ್ಷ ಡಾ.ಆರ್. ದೀಪು, ಕಾರ್ಯದರ್ಶಿ ಡಾ.ಎಸ್.ಎ.ಮೋಹನ್ ಕೃಷ್ಣ, ಉದ್ಯಮಿ ಎ.ಎಸ್.ಸತೀಶ್ ಸೇರಿದಂತೆ ಇತರರಿದ್ದರು.



ವಿಶ್ವ ವಾಣಿಜ್ಯೋದ್ಯಮ ದಿನಾಚರಣೆ ಅಂಗವಾಗಿ 'ಉದ್ಯಮವನ್ನು ಪ್ರಾರಂಭಿಸುವಲ್ಲಿ ಅವಕಾಶಗಳು ಮತ್ತು ಸವಾಲುಗಳು' ವಿಷಯ ಕುರಿತು ಅಕ್ಷಯ ಡಿಸೈನ್ ಸಲ್ಯೂಷನ್ಸ್ ಸಿಇಓ ಡಾ.ಮಹೇಶ್ ರಾವ್ ಮಾತನಾಡಿದರು.

ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ, ಕೊಲೆ ಖಂಡಿಸಿ ಎಸ್‌ಎಫ್‌ಐ ಪ್ರತಿಭಟನೆ



ಮೈಸೂರಿನ ಹಳೇ ಜಿಲ್ಲಾಧಿಕಾರಿ ಕಚೇರಿ ಎದುರು ಎಸ್‌ಎಫ್‌ಐ ವತಿಯಿಂದ ಬುಧವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು,ಆ.21(ಪಿಎಂ)– ಕೊಲ್ಕತ್ತಾದ ಆರ್‌ಜಿ ಕರ್ ಆಸ್ಪತ್ರೆಯಲ್ಲಿ ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ ಹಾಗೂ ಕೊಲೆಯನ್ನು ಖಂಡಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ವತಿಯಿಂದ ಬುಧವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಹಳೇ ಜಿಲ್ಲಾಧಿಕಾರಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ವೈದ್ಯ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ನಡೆಸಿ ಕ್ರೂರವಾಗಿ ಕೊಲೆ ಮಾಡಿರುವ ಪ್ರಕರಣ ಸಂಬಂಧ ನಿಷ್ಪಕ್ಷಪಾತ ತನಿಖೆ ನಡೆಸಿ, ತಪ್ಪಿತಸ್ಥರನ್ನು ಬಂಧಿಸಿ ಗಲ್ಲು ಶಿಕ್ಷೆ ವಿಧಿಸಬೇಕು. ಆರ್‌ಜಿ ಕರ್ ವೈದ್ಯಕೀಯ ಕಾಲೇಜು ಪ್ರಾಂಶುಪಾಲರನ್ನು ಕರ್ತವ್ಯದಿಂದ ವಜಾಗೊಳಿಸಬೇಕು ಎಂದು ಒತ್ತಾಯಿಸಿದರು. ಬಿಹಾರದ ಮುಜಾಫರ್‌ಪುರ ಜಿಲ್ಲೆಯಲ್ಲಿ ದಲಿತ ಸಮುದಾಯದ 14 ವರ್ಷದ ಬಾಲಕಿಯನ್ನು ಅಪಹರಿಸಿ, ಸಾಮೂಹಿಕ ಅತ್ಯಾಚಾರ ಮಾಡಿದ ಕಾಮುಕರಿಗೆ ಕಠಿಣ ಶಿಕ್ಷೆ ವಿಧಿಸಬೇಕು. ಶಾಲಾ–ಕಾಲೇಜು, ವಿವಿಗಳು ಹಾಗೂ ವಿದ್ಯಾರ್ಥಿನಿಯರ ಹಾಸ್ಟೆಲ್‌ಗಳಿಗೆ ಹೆಚ್ಚಿನ ಪೊಲೀಸ್ ಗಸ್ತು ನಿಯೋಜಿಸಬೇಕು. ಅಲ್ಲದೆ, ಇಲ್ಲಿ ಲೈಂಗಿಕ ಕಿರುಕುಳ ವಿರೋಧಿ ಸಮಿತಿಗಳನ್ನು ರಚನೆ ಮಾಡಬೇಕು ಎಂದು ಆಗ್ರಹಿಸಿದರು. ಮಹಿಳೆಯರ ಮೇಲಿನ ಅತ್ಯಾಚಾರ ಹಾಗೂ ದೌರ್ಜನ್ಯ ತಡೆಗಟ್ಟಲು ಪ್ರೊ.ವರ್ಮಾ ಸಮಿತಿ ಶಿಫಾರಸ್ಸುಗಳನ್ನು ಜಾರಿಗೊಳಿಸಬೇಕು. ನಗರದ ಹೊರವಲಯ ಹಾಗೂ ನಗರದೊಳಗಿನ ಸೂಕ್ಷ್ಮ ಪ್ರದೇಶಗಳನ್ನು ಗುರುತಿಸಿ ಸಿಸಿ ಕ್ಯಾಮರಾಗಳನ್ನು ಅಳವಡಿಸಬೇಕು ಎಂದು ಒತ್ತಾಯಿಸಿದರು. ಡಿವೈಎಫ್‌ಐ ಜಿಲ್ಲಾ ಸಂಚಾಲಕ ರಾಘವೇಂದ್ರ, ಎಸ್‌ಎಫ್‌ಐ ಜಿಲ್ಲಾಧ್ಯಕ್ಷ ಟಿ.ಎಸ್.ವಿಜಯ್‌ಕುಮಾರ್, ಕಾರ್ಯದರ್ಶಿ ಡಿ.ಅಭಿ, ಎಸ್‌ಎಫ್‌ಐ ಮೈಸೂರು ವಿವಿ ಘಟಕದ ಅಧ್ಯಕ್ಷ ಎಸ್.ಕೆ.ಚಿರಾಗ್, ಕಾರ್ಯಕರ್ತರಾದ ದ್ಯಾವನಗೌಡ, ಶಿವಕುಮಾರ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಜೂಜಾಟದಲ್ಲಿ ತೊಡಗಿದ್ದ ಆರು ಮಂದಿ ಬಂಧನ

ಮೈಸೂರು, ಆ.21(ಎಂಕೆ)– ಇಸ್ಪೀಟ್ ಜೂಜು ಅಡ್ಡೆ ಮೇಲೆ ದಾಳಿ ನಡೆಸಿರುವ ಸಿಸಿಬಿ ಪೊಲೀಸರು, ಜೂಜಾಟದಲ್ಲಿ ತೊಡಗಿದ್ದ 6 ಮಂದಿ ಹಾಗೂ 79,270 ರೂ. ನಗದು ಹಣ ವಶಪಡಿಸಿಕೊಂಡಿದ್ದಾರೆ.

ಮೈಸೂರಿನ ಕುವೆಂಪು ನಗರ ಪೊಲೀಸ್ ಠಾಣಾ ವ್ಯಾಪ್ತಿಯ ಕುವೆಂಪುನಗರ 2ನೇ ಹಂತ, ಎಂ.ಬ್ಲಾಕ್‌ನ 10ನೇ ಕ್ರಾಸ್ ಮನೆಯೊಂದರಲ್ಲಿ ಇಸ್ಪೀಟ್ ಜೂಜಾಟದಲ್ಲಿ ತೊಡಗಿರುವ ಖಚಿತ ಮಾಹಿತಿಯ ಮೇರೆಗೆ ದಾಳಿ ನಡೆಸಿದ ಸಿಸಿಬಿ ಪೊಲೀಸರು, ಜೂಜಾಟದಲ್ಲಿ ತೊಡಗಿದ್ದ 6 ಜನರುಗಳನ್ನು ವಶಕ್ಕೆ ಪಡೆದು, ಜೂಜಾಟಕ್ಕೆ ಪಣವಾಗಿಟ್ಟಿದ್ದ 79,270 ರೂ. ನಗದು ಹಣ ಮತ್ತು ಇತರೆ ಪರಿಕರಗಳನ್ನು ಅಮಾನತು ಪಡಿಸಿ ಕೊಂಡಿದ್ದಾರೆ. ಈ ಸಂಬಂಧ ಕುವೆಂಪು ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಬಿಡಾಡಿ ದನ ನಿಯಂತ್ರಣಕ್ಕೆ ಸೇಲಂ ಪಾಲಿಕೆ ಮಾದರಿ ಅನುಸರಣೆಗೆ ಆಗ್ರಹ



ಮೈಸೂರಲ್ಲಿ ಬಿಡಾಡಿ ದನಗಳ ನಿಯಂತ್ರಣಕ್ಕೆ ಆಗ್ರಹಿಸಿ ಪರಿಸರ ಉಳಿಸಿ ಸಮಿತಿ ಪದಾಧಿಕಾರಿಗಳು, ಪಾಲಿಕೆ ಆಯುಕ್ತರಿಗೆ ಮನವಿ ಸಲ್ಲಿಸಿದರು.

ಮೈಸೂರು, ಆ.21(ಎಸ್‌ಪಿಎನ್)– ಮೈಸೂರಲ್ಲಿ ಬಿಡಾಡಿಗಳ ದನಗಳ ನಿಯಂತ್ರಣಕ್ಕೆ 'ತಮಿಳುನಾಡಿನ ಸೇಲಂ ಮಹಾನಗರ ಪಾಲಿಕೆ' ಜಾರಿಗೊಳಿಸಿರುವ ನೀತಿಯನ್ನು ಮೈಸೂರು ನಗರ ಪಾಲಿಕೆಯಲ್ಲೂ ಅಳವಡಿಸುವಂತೆ ಒತ್ತಾಯಿಸಿ ಪರಿಸರ ಉಳಿಸಿ ಸಮಿತಿ ವತಿಯಿಂದ ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ಅವರಿಗೆ ಮನವಿ ಸಲ್ಲಿಸಲಾಗಿದೆ.

ತಮಿಳುನಾಡು ಸೇಲಂ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಬಿಡಾಡಿ ದನಗಳನ್ನು ಹಿಡಿಯುವ ಅಧಿಕಾರಿಗಳು ಮೊದಲು ಸಾರ್ವಜನಿಕವಾಗಿ ಎಚ್ಚರಿಕೆ ನೀಡಿ, ನಂತರ ಹರಾಜು ಹಾಕುತ್ತಾರೆ. ಅದೇ ನೀತಿಯನ್ನು ಮೈಸೂರು ನಗರ ಪಾಲಿಕೆಯಲ್ಲೂ ಜಾರಿಗೆ ತರಬೇಕು. ಬಿಡಾಡಿ ದನಗಳ ಹಾವಳಿಯಿಂದ ಅಮಾಯಕ ವಾಹನ ಸವಾರರು, ಪಾದಚಾರಿಗಳು ರಸ್ತೆಯಲ್ಲಿ ಓಡಾಡದ ಪರಿಸ್ಥಿತಿ ನಿರ್ಮಾಣವಾಗಿದೆ.

ನಗರದಲ್ಲಿ ಗೋವುಗಳ ಸಾಕಾಣಿಕೆಗೆ ವಿರೋಧವಿಲ್ಲ ಎಂದಿರುವ ಪರಿಸರ ಉಳಿಸಿ ಸಮಿತಿ ಪದಾಧಿಕಾರಿಗಳು, ಮೈಸೂರಲ್ಲಿ ಬಿಡಾಡಿ ದನಗಳ ಮಾಲೀಕರು, ಸಾರ್ವಜನಿಕರಿಗೆ ತೊಂದರೆ ಯಾಗುವುದನ್ನು ಲೆಕ್ಕಿಸದೇ ರಸ್ತೆ, ವೃತ್ತ, ಬೀದಿಗಳಿಗೆ ತಮ್ಮ ದನಗಳನ್ನು ಬಿಟ್ಟು ಕೈತೊಳೆದುಕೊಳ್ಳುತ್ತಿರುವುದು ಬೇಸರ ಸಂಗತಿ. ಆದ್ದರಿಂದ ಬಿಡಾಡಿಗಳ ನಿಯಂತ್ರಣಕ್ಕೆ ಕಠಿಣ ಕ್ರಮ ಕೈಗೊಳ್ಳುವುದು ಅನಿವಾರ್ಯವಾಗಿದೆ ಎಂದು ಮನವಿಯಲ್ಲಿ ತಿಳಿಸಿದ್ದಾರೆ. ಈ ವೇಳೆ ಪರಿಸರ ಉಳಿಸಿ ಸಮಿತಿಯ ಕಿರಣ್ ಹಾಗೂ ಇತರೆ ಸದಸ್ಯರು ಉಪಸ್ಥಿತರಿದ್ದರು.

ಪಂಚಾಯತ್‌ರಾಜ್ ಇಲಾಖೆ ಎಸ್‌ಸಿ–ಎಸ್‌ಟಿ ಅಧಿಕಾರಿಗಳು, ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾಗಿ ಸಿ.ಪ್ರಕಾಶ್ ಆಯ್ಕೆ



ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಎಸ್‌ಸಿ–ಎಸ್‌ಟಿ ಅಧಿಕಾರಿಗಳು ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ನೂತನ ಪದಾಧಿಕಾರಿಗಳನ್ನು ಅಭಿನಂದಿಸಲಾಯಿತು.

ಮೈಸೂರು, ಆ.21(ಎಂಕೆ)– ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಅಧಿಕಾರಿಗಳು ಹಾಗೂ ನೌಕರರ ಕ್ಷೇಮಾಭಿವೃದ್ಧಿ ಸಂಘದ ಮೈಸೂರು ಜಿಲ್ಲಾ ನೂತನ ಅಧ್ಯಕ್ಷರಾಗಿ ನಂಜನಗೂಡು ತಾಲೂಕಿನ ಕೆಂಪಿಸಿದ್ದನಹುಂಡಿ ಗ್ರಾಪಂ ಪಿಡಿಒ ಸಿ.ಪ್ರಕಾಶ್ ಅವಿರೋಧವಾಗಿ ಆಯ್ಕೆಯಾದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೌಕರರ ರಾಜ್ಯ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಮೈಸೂರು ತಾಪಂ ಸಭಾಂಗಣದಲ್ಲಿ ಮೈಸೂರು ಜಿಲ್ಲಾ ಘಟಕಕ್ಕೆ 2024–25 ರಿಂದ 2027–28ನೇ ಸಾಲಿಗೆ ನಡೆದ ಚುನಾವಣೆಯಲ್ಲಿ ಗೌರವ ಅಧ್ಯಕ್ಷರಾಗಿ ಜಿಪಂ ಉಪಕಾರ್ಯದರ್ಶಿ ಡಾ.ಎಂ.ಕೃಷ್ಣರಾಜು, ಉಪಾಧ್ಯಕ್ಷರಾಗಿ ಕೆ.ಎಸ್. ಲಿಂಗರಾಜು, ಪ್ರಧಾನ ಕಾರ್ಯದರ್ಶಿಯಾಗಿ ಕೆ.ಮಹದೇವು, ಖಜಾಂಚಿಯಾಗಿ ಮಹದೇವನಾಯಕ, ಸಹ ಕಾಯದರ್ಶಿಯಾಗಿ ಗಣೇಶ್, ಸಂಘಟನಾ ಕಾರ್ಯದರ್ಶಿಯಾಗಿ ಟಿ.ಎ.ಮಹದೇವ, ಸಾಂಸ್ಕೃತಿಕ ಮತ್ತು ಕ್ರೀಡಾ ಕಾರ್ಯದರ್ಶಿಯಾಗಿ ಕುಮಾರನಾಯ್ಕ, ಆಂತರಿಕಾ ಲೆಕ್ಕ ಪರಿಶೋಧಕರಾಗಿ ತಾರಾ, ರಾಜ್ಯ ಪರಿಷತ್ ಸದಸ್ಯರಾಗಿ ಎನ್.ಇ ಚಂದ್ರಕಾಂತ್ ಅವಿರೋಧವಾಗಿ ಆಯ್ಕೆಯಾದರು.

ಚುನಾವಣಾಧಿಕಾರಿ ಡಾ.ಎಸ್.ಸುರೇಶ್, ಪಿಡಿಒ ಸಂಘದ ರಾಜ್ಯ ಪರಿಷತ್ ಸದಸ್ಯರಾದ ಶ್ರೀನಿವಾಸ್, ರಾಮಣ್ಣ, ಗಿರಿಧರ್, ಕವಿತಾ, ರಾಮದಾಸ್, ಮಂಜುಳಾ, ಮಹದೇವಸ್ವಾಮಿ ಸೇರಿದಂತೆ ಜಿಲ್ಲೆಯ ಎಲ್ಲಾ ತಾಲೂಕಿನ ಗ್ರಾಪಂ ಪಿಡಿಒಗಳು, ಕಾರ್ಯದರ್ಶಿಗಳು, ಎಸ್‌ಡಿಎಎ, ಡಿಇಒಗಳು, ಬಿಲ್ ಕಲೆಕ್ಟರ್‌ಗಳು ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದರು.

ಗ್ರಾಜ್ಯುಯೇಟ್ ಬ್ಯಾಂಕ್‌ನ ನೂತನ ಅಧ್ಯಕ್ಷರಾಗಿ ಶ್ರೀನಿವಾಸ್ ಆಯ್ಕೆ



ಎನ್.ಶ್ರೀನಿವಾಸ್



ಸುಜಾತ ವೆಂಕಟರಾಜು

ಮೈಸೂರು, ಆ.21– ದಿ ಗ್ರಾಜ್ಯುಯೇಟ್ ಕೋ– ಆಪರೇಟಿವ್ ಬ್ಯಾಂಕ್‌ನ ಅಧ್ಯಕ್ಷ ಆರ್.ಅನಂತರಾಮು ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಎನ್.ಶ್ರೀನಿವಾಸ್ ಅಧ್ಯಕ್ಷರಾಗಿ, ಉಪಾಧ್ಯಕ್ಷರಾಗಿ ಸುಜಾತ ವೆಂಕಟರಾಜು ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಬ್ಯಾಂಕ್‌ನ ಪ್ರಭಾರ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಮೈಸೂರು ಸಿಟಿ, ಶ್ರೀರಾಂಪುರ 2ನೇ ಹಂತ, ಪುಷ್ಪನಂದ ಲೇಔಟ್, ಸಾಯಿ ಕೃಪ, ಮನೆ ಸಂಖ್ಯೆ 8 ರಲ್ಲಿ ವಾಸವಾಗಿರುವ ಶ್ರೀ ವೆಂಕಪ್ಪ ಬಿ ಎಂ ರವರ ಮಗನಾದ ಸುಮಾರು 43 ವರ್ಷ ವಯಸ್ಸಿನ ಶ್ರೀ ಬಿಲ್ಲವ ವೆಂಕಪ್ಪ ಮೋಹನ್ ರವರು ಈ ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಬೆಳವಾಡಿ ಗ್ರಾಮದ ಸರ್ವೆ ನಂ. 19/6 (ಹಳೆ ಸರ್ವೆ ನಂ.19/1) ರಲ್ಲಿ 2 ಎಕರೆ ಪೈಕಿ 1 ಎಕರೆ 22 1/4 ಗುಂಟೆ ಜಮೀನನ್ನು ಮೈಸೂರು ಸಿಟಿ, ಬೆಳವಾಡಿ, ಅಮೃತೇಶ್ವರ ನಗರ, 11ನೇ ಕ್ರಾಸ್, 1ನೇ ಮುಖ್ಯ ರಸ್ತೆ, ಮನೆ ಸಂಖ್ಯೆ : 158 ರಲ್ಲಿ ವಾಸವಾಗಿರುವ ಲೇಟ್ ಈಶ್ವರಯ್ಯ ಬಿ ಕೆ ರವರ ಮಗನಾದ ಸುಮಾರು 60 ವರ್ಷ ವಯಸ್ಸಿನ ಶ್ರೀ ಸದಾಶಿವ ಬಿ ಇ, ಸಂತೋಷ್ ಕುಮಾರ್ ಬಿ ಎಸ್ ಬಿನ್ ಶ್ರೀ ಸದಾಶಿವ ಬಿ ಇ, ಸುಶ್ಮಿತ ಕೋಂ ಸಂತೋಷ್ ಕುಮಾರ್ ಬಿ ಎಸ್ ಹಾಗೂ ಶ್ರೀಮತಿ ಶ್ವೇತಾ ಬಿನ್ ಶ್ರೀ ಸದಾಶಿವ ಬಿ.ಇ ಇವರಗಳ ಮಾಲೀಕತ್ವಕ್ಕೆ ಒಳಪಟ್ಟ ಕೃಷಿ ಜಮೀನನ್ನು ವಸತಿ ಉದ್ದೇಶಕ್ಕಾಗಿ ಅನ್ಯಕ್ರಾಂತ ಮಾಡಿ ಹಾಗೂ ನಕ್ಷೆ ವಿನ್ಯಾಸ ಪಡೆದು ನಿವೇಶನಗಳನ್ನಾಗಿ ಅಭಿವೃದ್ಧಿಪಡಿಸುವ ಉದ್ದೇಶದಿಂದ ಒಂದು ಜಂಟಿ ಅಭಿವೃದ್ಧಿ ಕರಾರು ಪತ್ರ ಹಾಗೂ ಒಂದು ಸಾಮಾನ್ಯ ಅಧಿಕಾರ ಪತ್ರವನ್ನು ಮಾಡಿಕೊಳ್ಳಲು ಇಚ್ಚಿಸಿರುತ್ತಾರೆ.

ಸದರಿ ವ್ಯವಹಾರದ ಸಂಬಂಧವಾಗಿ ಯಾರಿಗಾದರೂ ಯಾವುದೇ ರೀತಿಯ ತಂಟೆತಕರಾರು, ಆಕ್ಷೇಪಣೆಗಳು ಇದ್ದಲ್ಲಿ ಇಂದಿನಿಂದ 7 ದಿನಗಳ ಒಳಗಾಗಿ, ಖುದ್ದಾಗಿ ಅಥವಾ ವಕೀಲರ ಮೂಲಕ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ತಿಳಿಸಿರುವ ವಕೀಲರನ್ನು ಸಂಪರ್ಕಿಸಿ ತಕರಾರು ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ಯಾವುದೇ ತಂಟೆ ತಕಾರರುಗಳು ಇಲ್ಲವೆಂದು ಭಾವಿಸಿ ಸದರಿ ಜಮೀನಿಗೆ ಸಂಬಂಧಿಸಿದಂತೆ ಒಂದು ಜಂಟಿ ಅಭಿವೃದ್ಧಿ ಕರಾರು ಪತ್ರ ಹಾಗೂ ಒಂದು ಸಾಮಾನ್ಯ ಅಧಿಕಾರ ಪತ್ರವನ್ನು ಮಾಡಿಕೊಳ್ಳಲು ಹಕ್ಕುಳ್ಳವರಾಗಿರುತ್ತಾರೆ. ನಂತರ ಬಂದತಂಹ ತಂಟೆ ತಕರಾರು ಇನ್ನಿತರೆ ವ್ಯಾಜ್ಯಗಳಿಗೆ ಸಂಬಂಧಪಟ್ಟಂತೆ ನನ್ನ ಕಕ್ಷಿದಾರರಾದ ಅಭಿವೃದ್ಧಿದಾರರು ಜವಾಬ್ದಾರರಲ್ಲ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ: ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಬೆಳವಾಡಿ ಗ್ರಾಮದ ಸರ್ವೆ ನಂ. 19/6 (ಹಳೆ ಸರ್ವೆ ನಂ.19/1) ರಲ್ಲಿ 2 ಎಕರೆ ಪೈಕಿ 1 ಎಕರೆ 22 1/4 ಗುಂಟೆ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ : ಲಾ ಗು ಹಿಸ್ಸಾ -1, ಬ್ಲಾಕ್-2, ಲಾ ಗು ಹಿಸ್ಸಾ -5, ಹಾಲಿ ಸ್ಥಳದಂತೆ ರಸ್ತೆ
ಪಶ್ಚಿಮಕ್ಕೆ : ಲಾ ಗು ಹಿಸ್ಸಾ -21, ಲಾ ಗು ಹಿಸ್ಸಾ -3
ಉತ್ತರಕ್ಕೆ : ಲಾ ಗು ಹಿಸ್ಸಾ 1, 3 & 4
ದಕ್ಷಿಣಕ್ಕೆ : ಬ್ಲಾಕ್-1 ಮತ್ತು ಹಳ್ಳ

ಸಹಿ/– ಎಲ್.ಎಲ್.ಶಿವಲಿಂಗಪ್ಪ, ವಕೀಲರು
ಬಿ.ಎ.ಎಲ್., ಎಲ್‌ಎಲ್.ಬಿ.,#2, ಮೊದಲನೇ ಮಹಡಿ, ಶ್ರೀರಾಮ ದೇವಸ್ಥಾನ, 3ನೇ ತಿರವು, 2ನೇ ಮುಖ್ಯ ರಸ್ತೆ, ಜಯನಗರ, ಮೈಸೂರು–570014. ಮೊ..9900331188

ಮೈಸೂರು ಮಿತ್ರ 45
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

COURT PUBLIC AUCTION NOTICE

IN THE COURT OF THE IV ADDITIONAL SENIOR CIVIL JUDGE & JMFC AT MYSURU
FDP. NO. 112 OF 2018

Smt. M.G. Hymavathi ....Petitioner
V/s
M.G. Mahantesh and others ....Respondents

In pursuance of the order dated 06.10.2023 passed by the Hon'ble court of the IV Addl Senior Civil Judge and JMFC at Mysuru in FDP 112 of 2018 the Court auction sale of the schedule property will be conducted on 02.09.2024 (Monday) between 11.00 AM to 2.00 PM at the spot in the property bearing D.No.111, built on site no.111 situated in east of Vengun Bunglow layout, Gayathripuram, 2nd Stage, 4th Cross, Vishwakarma Colony, Nazarbad Mohalla, Mysuru city morefully described in the schedule below. The General Public are invited to participate in the auction and offer their bid.

DESCRIPTION OF THE SCHEDULE PROPERTY

Property bearing Door No.111, built on site No.111 situated in East of Vengun Bungalow layout, Gayathripuram 2nd stage, 4th Cross, Vishwakarma colony, Nazarbad Mohalla, Mysuru city, bounded on the east by property bearing D.No.142, west by road, south by property bearing No.112 and north by property bearing 110 measuring 30 x 20 feet comprising of 4.5 square building.

CONDITION OF SALE

1. Any intending purchasers may participate in the public auction sale, on the schedule date and time, by bidding the amount (not below 28,00,000/- Twenty eight Lakhs)
2. The intending purchasers have to register their names with Court Commissioner on the date auction along with ID proof and Aadhar Card.
3. The schedule property will be sold on "as is where is condition"
4. The schedule property would be sold to the bidder who offers highest price. However the court reserves its right not to accept the bid or cancel the sale without assigning any reason
5. The successful bidder/purchaser will have to deposit 20% of the bid amount immediately i.e., on the day of auction itself, with the Court Commissioner by drawing Demand Draft in the name "Principal Senior Civil Judge and CJM, Mysuru and the balance amount will deposited within 15 days to the Court.
6. If the 20% of the bid amount is not paid on the same day or the balance amount is not paid within the 15 days or if the successful bidder fails to adhere to the terms of sale, time or commits default in any manner, the Court can impose fine on the bidder and recover the same and the Court will be at liberty to sell the property again without any notice.
7. The purchaser shall liable to pay stamp duty on the documents to be executed for effecting the registration sale and other charges.
8. The court reserves its rights to cancel or postpone the sale without assigning any reasons.

DETAILS OF THE AUCTION

Date and time of auction	**02-09-2024, Timings 10.30 AM to 2.30 PM**
Place of Auction	Property bearing Door No.111, built on site No.111 situated in East of Vengun Bungalow layout, Gayathripuram 2 stage, 4th Cross, Vishwakarma colony, Nazarbad Mohalla, Mysuru city
Reserve Price	Rs. 28,00,000/- (Twenty eight lakhs)

Sd/ Court Commissioner
K.M. Sathishchandran, Advocate, KAR -1431/02
Kumbara Koppal, Mysuru. **Mobile No. 98802 61610**

ಕರ್ನಾಟಕ ಸರ್ಕಾರ
ಮೀನುಗಾರಿಕೆ ಇಲಾಖೆ
ಮೀನುಗಾರಿಕೆ ಇಲಾಖೆ ತಿ.ನರಸೀಪುರ ತಾಲ್ಲೂಕು
ಮೀನುಗಾರಿಕೆ ಸಹಾಯಕ ನಿರ್ದೇಶಕರುರವರ ಕಛೇರಿ, ತಿ.ನರಸೀಪುರ
ಸಂತೇಮಾಳ, ತಲಕಾಡು ರೋಡ್
Email: adf.tnp@gmail.com

ಸಂಖ್ಯೆ: ಮೀಸನಿತಿ.ನ/ಹಗುಪ/2/2024–25 ದಿ: 16.08.2024

ಕೆರೆಗಳ ಮೀನು ಪಾಶುವಾರು ಹಕ್ಕಿನ ನೇರಗುತ್ತಿಗೆ ವಿಲೇವಾರಿ ಪ್ರಕಟಣೆ

ಮೈಸೂರು ಜಿಲ್ಲೆ, ತಿ.ನರಸೀಪುರ ತಾಲ್ಲೂಕಿನ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ನೇರಗುತ್ತಿಗೆ ಮುಖಾಂತರ 2024–25ನೇ ಸಾಲಿನಿಂದ 2028–29ನೇ ಸಾಲಿನವರೆಗೆ ಅನ್ವಯವಾಗುವಂತೆ 05 ವರ್ಷಗಳ ಅವಧಿಗೆ ಸರ್ಕಾರದ ನಿಯಮಾನುಸಾರ **ಅರ್ಹ ಮೀನುಗಾರರ ಸಹಕಾರ ಸಂಘ ಹಾಗೂ ರೈತ ಮೀನುಗಾರ ಉತ್ಪಾದಕರ ಸಂಸ್ಥೆ (FFPO)**ಗೆ ಈ ಕೆಳಕಂಡ ಜಲಸಂಪನ್ಮೂಲಗಳ ನೇರಗುತ್ತಿಗೆ ನೀಡಲಾಗುವುದು.

1. ಕುರುಬೂರು ಅಡ್ಡಹಳ್ಳ ಕೆರೆ 2. ಚಿಮಿಲಿದೊಡ್ಡಕೆರೆ 3. ಸಿ.ಹಳ್ಳಿಮಾರೇಗೌಡನಹಳ್ಳಿ ಕೆರೆ

ಸದರಿ ಜಲಸಂಪನ್ಮೂಲದ ಮೀನುಪಾಶುವಾರು ಹಕ್ಕನ್ನು ಪಡೆಯಲಿಚ್ಛಿಸುವ ಅರ್ಹ ಮೀನುಗಾರರ ಸಹಕಾರ ಸಂಘ ಹಾಗೂ ರೈತ ಮೀನುಗಾರ ಉತ್ಪಾದಕರ ಸಂಸ್ಥೆ ಮಾತ್ರ ಅರ್ಜಿಯನ್ನು ನಿಗಧಿತ ನಮೂನೆಯಲ್ಲಿ ದಿ: 23.08.2024 ರೊಳಗಾಗಿ ಕಛೇರಿ ವೇಳೆಯಲ್ಲಿ ಈ ಕಛೇರಿಗೆ ಸಲ್ಲಿಸತಕ್ಕದ್ದು. ನಿಗಧಿತ ಅವಧಿಯ ನಂತರ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಗುತ್ತಿಗೆ ಪಡೆಯಲು ಸಲ್ಲಿಸಬೇಕಾದ ಅರ್ಜಿ, ಷರತ್ತು/ನಿಬಂಧನೆಗಳನ್ನು ಹಾಗೂ ಹೆಚ್ಚಿನ ಮಾಹಿತಿಯನ್ನು ಕಛೇರಿಯ ವೇಳೆಯಲ್ಲಿ ಪಡೆಯಬಹುದು.

ಸಹಿ/– ಮೀನುಗಾರಿಕೆ ಸಹಾಯಕ ನಿರ್ದೇಶಕರು
DIPR/DDMYS-445/KSMCA-299/2024-25